ಸಂಪುಟ: 01 Volume | ಸಂಚಿಕೆ: 02 Issue | ಪುಟಗಳು 08 Pages | ಭಾನುವಾರ 02 ಆಗಸ್ಟ್ 2026 | ₹4 | PRGI NO.KNKAN/26/A5871
mallammanudihubballi@gmail.com
www.mallammanudi.in 9448604450, 9845028349

ಬೆಂಗಳೂರು ಆವೃತ್ತಿ: ಕೋಲಾರ | ಚಿಕ್ಕಬಳ್ಳಾಪುರ | ರಾಮನಗರ | ಮಂಡ್ಯ | ಮೈಸೂರು | ತುಮಕೂರು ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಶ್ರೀ ಮಾಣಿಕರೆಡ್ಡಿ ಕೌಡಾಳೆ

**ಬೆಳಗು**

ಆದರ್ಶ ಗೃಹಸ್ಥನಾಗುವುದು, ಆದರ್ಶ ಸನ್ಯಾಸಿಯಾಗುವುದಕ್ಕಿಂತ ಬಹಳ ಕಷ್ಟ.

–ಸ್ವಾಮಿ ವಿವೇಕಾನಂದ



ಎಐಸಿಸಿ ಕಾರ್ಯದರ್ಶಿ ಚರಣಸಿಂಗ್ ಸಪ್ರ ಅವರು ಇಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

## ಕೆಡಿಪಿ ಸಮಿತಿಗೆ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನ

**ಹುಮನಾಬಾದ:** ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿ ಅನುಷ್ಠಾನದ ಪರಿಶೀಲನೆಗಾಗಿ ಬೀದರ್ ಜಿಲ್ಲೆ, ಹುಮನಾಬಾದ ತಾಲ್ಲೂಕು ಮಟ್ಟದ ತ್ರೈಮಾಸಿಕ ಕೆ.ಡಿ.ಪಿ ಸಮಿತಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನಗೊಳಿಸಿದೆ ಎಂದು ಬಿ.ಆರ್. ಮಧುಸೂದನ್, ಸರ್ಕಾರದ ಅಧೀನ ಕಾರ್ಯದರ್ಶಿ–ಎಸ್–3, ಯೋಜನ ಕಾರ್ಯಕ್ರಮ ಸಂಯೋಜನ ಮತ್ತು ಸಾಂಖ್ಯಿಕ ಇಲಾಖೆ ತಿಳಿಸಿದ್ದಾರೆ. ಶ್ರೀ ಉಮೇಶ ಜಮಗಿ, ಹುಮನಾಬಾದ, ಸಾಮಾನ್ಯ, ಶ್ರೀ ಜ್ಞಾನೇಶ್ವರ್ ಭೋಗ್ಯ, ಘಾಟಬೋರಾಳ ಹಿಂದುಳಿದ ವರ್ಗ,ಶ್ರೀ ಶಿವಾನಂದ ಕಟ್ಟಿಮನಿ, ಹುಣಸಗೇರಾ, ಪರಿಶಿಷ್ಟ ಜಾತಿ, ಶ್ರೀ ಅಮರ್ ಹಂದ್ರಾಳ, ಸಾಮಾನ್ಯ, ಶ್ರೀ ಸಯ್ಯದ ಯಾಸೀನ್ ಅಲಿ, ಹುಮನಾಬಾದ್, ಅಲ್ಪಸಂಖ್ಯಾತರು, ಶ್ರೀಮತಿ ಸುಮಿತ್ರಾ ಪರೀಟ್, ಹುಮನಾಬಾದ್, ಮಹಿಳೆಯವರನ್ನು ನೇಮಕ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಅವರಿಂದು ಕಲ್ಯಾಣ ಕರ್ನಾಟಕ ವೃಂದದ 76 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಿ, ನಿಷ್ಠೆ, ಪ್ರಾಮಾಣಿಕತೆ ಮತ್ತು ದಕ್ಷತೆಯ ಪ್ರಮಾಣ ವಚನ ಬೋಧಿಸಿದರು. ಈ ಸಂದರ್ಭದಲ್ಲಿ ಇಲಾಖೆಯ ಕಾರ್ಯದರ್ಶಿ ಡಿ. ರಂದೀಪ್, ಆಯುಕ್ತರಾದ ಡಾ.ಅರುಂಧತಿ ಚಂದ್ರಶೇಖರ್ ಮತ್ತಿತರರು ಪಾಲ್ಗೊಂಡಿದ್ದರು.

## ಸ್ವಾಮಿ ವಿವೇಕ ಸ್ಮಾರಕಕ್ಕೆ ಪ್ರಧಾನಿ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಮೈಸೂರು

ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಮೈಸೂರಿನ ದೇವರಾಜ ಮೊಹಲ್ಲಾದ ನಾರಾಯಣ ಶಾಸ್ತ್ರಿರಸ್ತೆಯಲ್ಲಿರುವ ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಿ, ಸುಮಾರು ₹45 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ "ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ (ವಿವೇಕ ಸ್ಮಾರಕ)"ವನ್ನು ಉದ್ಘಾಟಿಸಿದರು.

ವಿಶೇಷ ಹೆಲಿಕಾಪ್ಟರ್ ಮೂಲಕ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಓವಲ್ ಮೈದಾನಕ್ಕೆ ಆಗಮಿಸಿದ ಪ್ರಧಾನಿ ಮೋದಿ ಅವರನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಯತೀಂದ್ರ ಸಿದ್ದರಾಮಯ್ಯ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹೂಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು. ರಸ್ತೆಯುದ್ದಕ್ಕೂ ನೆರೆದಿದ್ದ ಜನರು ಪ್ರಧಾನಿ ಪರ ಘೋಷಣೆಗಳನ್ನು ಕೂಗಿ ಬರಮಾಡಿಕೊಂಡರು.



ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಿದ ಪ್ರಧಾನಿ ಮೋದಿ ಅವರು ಸ್ವಾಮಿ ವಿವೇಕಾನಂದರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ಪೂಜೆ ನೆರವೇರಿಸಿದರು. ಬಳಿಕ ಆಶ್ರಮದಲ್ಲಿ ಕೆಲಕಾಲ ಧ್ಯಾನ ಮಾಡಿ, ಆಶ್ರಮದ ಆವರಣದಲ್ಲಿ ಗಿಡ ನೆಟ್ಟು ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು. ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಸ್ವಾಮಿ ವಿವೇಕಾನಂದರು ನೆಲೆಸಿದ್ದ ನೆನಪಿಗಾಗಿ ಹಾಗೂ ಯುವಜನರಲ್ಲಿ ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ರಾಷ್ಟ್ರಭಕ್ತಿಯ ಮೌಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಈ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರವನ್ನು ನಿರ್ಮಿಸಲಾಗಿದೆ.

## ಮಳೆಗೆ ಬಾಲುರ್ ಶಾಲೆಯ ಕೊಠಡಿಗಳು ಧರಾಶಾಹಿ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ಬಾಲುರ್(ಕೆ) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೊದಲನೇ ಮಹಡಿಯ ಶಿಥಿಲಗೊಂಡಿದ್ದ ಮೂರು ಕೊಠಡಿಗಳು ಗುರುವಾರ ರಾತ್ರಿ ಸುರಿದ ಜಿಟಿಜಿಟಿ ಮಳೆಗೆ ಸಂಪೂರ್ಣವಾಗಿ ಕುಸಿದು ಬಿದ್ದಿವೆ. ರಾತ್ರಿ ವೇಳೆ ಘಟನೆ ನಡೆದಿದ್ದರಿಂದ ಯಾವುದೇ ಜೀವಹಾನಿ ಸಂಭವಿಸಿಲ್ಲ.

ಅಪಾಯಕಾರಿ ಸ್ಥಿತಿಯಲ್ಲಿದ್ದ ಈ ಶಾಲಾ ಕಟ್ಟಡವನ್ನು ಕೂಡಲೇ ನೆಲಸಮಗೊಳಿಸುವಂತೆ ಗ್ರಾಮಸ್ಥರು ಹಾಗೂ ಶಾಲಾ ಮಂಡಳಿ ಅಧಿಕಾರಿಗಳಿಗೆ ಮನವಿ ಮಾಡಿದ್ದರು. ಆದರೆ ಜಿಲ್ಲಾ ಪಂಚಾಯತ್ ಎಂಜಿನಿಯರಿಂಗ್ ಇಲಾಖೆಯ ವಿಳಂಬ ಧೋರಣೆಯಿಂದಾಗಿ ಕಟ್ಟಡ ಕುಸಿದು ಬಿದ್ದಿದೆ ಎಂದು ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣೆ ಸಮಿತಿ ಅಧ್ಯಕ್ಷ ರಾಜಕುಮಾರ್ ಚಾಂಡೇಶ್ವರ ತಿಳಿಸಿದ್ದಾರೆ.



ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ದಿಲೀಪ್ ಸಂತಪುರೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಪಾಯಕಾರಿ ಕಟ್ಟಡದ ಭಾಗಗಳನ್ನು ತಕ್ಷಣ ತೆರವುಗೊಳಿಸಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊಸ ಕೊಠಡಿಗಳನ್ನು ಮಂಜೂರು ಮಾಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಹೈ ನಡೆ ಶಾಸಕರು ಬಿಡೆ

## ಸಂಪುಟ ಪುನಾರಚನೆಗೆ ಸಮಯ ಕೊಡದ ದಿಲ್ಲಿಯ ವರಿಷ್ಠರು | ಜನಾದೇಶಕ್ಕೆ ಇರಿಸು ಮುರಿಸು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ದೆಹಲಿಯ ಹೈ ಕಮಾಂಡ್ ಸತಾಯಿಸುತ್ತಿರುವುದಕ್ಕೆ ರಾಜ್ಯದ ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಖಚಿತ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರದಲ್ಲಿ ಇದೀಗ ಅಂತಃಕಲಹ ಶುರುವಾಗಿದೆ. ಪಕ್ಷದ ಪ್ರಮುಖ ನಾಯಕರನ್ನು ದೆಹಲಿಯಲ್ಲಿ ಸತತ ನಾಲ್ಕು ದಿನಗಳ ಕಾಲ ಕಾಯುವಂತೆ ಮಾಡಿರುವುದು, ರಾಜ್ಯ ಕಾಂಗ್ರೆಸ್ ವಲಯದಲ್ಲಿ ತೀವ್ರ ಅಸಮಾಧಾನಕ್ಕೆ ಪ್ರಮುಖ ಕಾರಣವಾಗಿದೆ.

**ಸ್ವಾಭಿಮಾನಕ್ಕೆ ಧಕ್ಕೆ:** ಚುನಾವಣೆಯಲ್ಲಿ ಜನಾದೇಶ ಪಡೆದು ಅಧಿಕಾರ ನಡೆಸುತ್ತಿರುವ ಸರ್ಕಾರವನ್ನು ಹೈಕಮಾಂಡ್ ನಡೆಸಿಕೊಳ್ಳುತ್ತಿರುವ ರೀತಿ ರಾಜ್ಯದ ಸ್ವಾಭಿಮಾನಕ್ಕೆ ಧಕ್ಕೆ ತಂದಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ. ಕಳೆದ ಕೆಲವು ದಿನಗಳಿಂದ ದೆಹಲಿ ರಾಜಕೀಯದ ಕಾರಿಡಾರ್‌ನಲ್ಲಿ ಉನ್ನತ ನಾಯಕರ ಭೇಟಿಗಾಗಿ ಕಸರತ್ತು ನಡೆಸುವಂತಾಗಿದ್ದೇ ಚರ್ಚೆ ಹುಟ್ಟುಹಾಕಿದೆ.

**ವರಿಷ್ಠರ ಭೇಟಿಗೆ ಅಲೆದಾಟ:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸತ್ ಪ್ರತಿ ಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಪ್ರಿಯಾಂಕಾ ಗಾಂಧಿ ಅವರ ಭೇಟಿಗೆ ರಾಜ್ಯದಿಂದ ತೆರಳಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಲೆದಾಡುವಂತಾಗಿದೆ.




### ರಾಹುಲ್‌ಗಾಂಧಿ ಆಕ್ಷೇಪ..!

ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರವು ತನ್ನದೇ ಆದ ನಿರ್ಧಾರಗಳನ್ನು ಕೈಗೊಳ್ಳುವುದು ಅಗತ್ಯ. ಜನಪರ ಆಡಳಿತ ನೀಡುವುದರಲ್ಲಿ ಸ್ವಾವಲಂಬನೆಯೂ ಬೇಕು. ಆದರೆ, ರಾಹುಲ್ ಗಾಂಧಿ ಅವರ ಕಡೆಯಿಂದ ನಡೆಯುವ ಅನಗತ್ಯ ಹಸ್ತಕ್ಷೇಪ, ರಾಜ್ಯ ಸರ್ಕಾರದ ಕಾರ್ಯವೈಖರಿಯನ್ನು ವಿಮರ್ಶಿಸುವುದು ಜನಾದೇಶಕ್ಕೆ ಮಾಡುವ ಅವಮಾನ ಎನ್ನಲಾಗಿದೆ.

### ಶಾಸಕರ ಅಸಮಾಧಾನ..?

ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಕೆಲವು ನಿರ್ಧಾರ ಅಸಮಾಧಾನಕ್ಕೆ ಕಾರಣವಾಗಿದ್ದು, ಯಾರನ್ನು ಸಂಪುಟಕ್ಕೆ ಸೇರಿಸಬೇಕು, ಯಾರಿಗೆ ಯಾವ ಜವಾಬ್ದಾರಿ ನೀಡಬೇಕು ಎಂಬ ಬಗ್ಗೆ ಪ್ರತ್ಯೇಕ ಪಟ್ಟಿಗಳನ್ನು ಹಿಡಿದು ನಾಯಕರು ಹೈಕಮಾಂಡ್ ಕದ ತಟ್ಟುತ್ತಿದ್ದರೂ, ಸಕಲ ನಿರ್ಧಾರ ಕೈಗೊಳ್ಳದೆ ದಿನಗಳಟ್ಟಲೆ ಕಾಯಿಸಿರುವುದು ಶಾಸಕರಲ್ಲಿ ನಿರಾಶೆಯನ್ನು ಮೂಡಿಸಿದೆ.

### ನಿರ್ಧಾರಗಳ ಶೈಲಿ..!

ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವದ ನಿರ್ಧಾರಗಳ ಶೈಲಿ, ಸಂಘಟನಾ ಕಾರ್ಯಗಳಲ್ಲಿ ಸಕ್ರಿಯ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲಾ ಅವರ ರಾಜ್ಯ ರಾಜಕಾರಣದ ಮೇಲಿನ ನಿರ್ಬಂಧ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಲವರ್ಧನೆಗೆ ಅಡ್ಡಿಯಾಗುತ್ತಿವೆ ಎಂಬ ಗುಸುಗುಸು ಕೇಳಿಬರುತ್ತಿದೆ.

### ಅಸಮಾಧಾನಕ್ಕೆ ಹೈ ಮದ್ದು

ಇದೀಗ ಸಂಪುಟ ವಿಸ್ತರಣೆಯ ಸನ್ನಿವೇಶದಲ್ಲೂ ಅದೇ ಪರಿಸ್ಥಿತಿ ಪುನರಾವರ್ತನೆಯಾಗುತ್ತಿದೆ. ಪ್ರಭಾವಿ ನಾಯಕರ ನಡುವಿನ ಪಟ್ಟಿ ಸಮರ ಮತ್ತು ಹೈಕಮಾಂಡ್ ವಿಳಂಬ ನೀತಿ ರಾಜ್ಯ ರಾಜಕಾರಣದಲ್ಲಿ ಭಾರಿ ಕುತೂಹಲ ಮೂಡಿಸಿದೆ. ಹೈಕಮಾಂಡ್ ಶೀಘ್ರದಲ್ಲೇ ಮಧ್ಯಪ್ರವೇಶಿಸಿ ಅಂತಿಮ ಪಟ್ಟಿಗೆ ಅಂಕಿತ ಹಾಕುವ ಮೂಲಕ ಅಸಮಾಧಾನ ತೊಡೆದು ಹಾಕಬೇಕಿದೆ.

## ಬರ ನಿರ್ವಹಣೆ, ಸರ್ಕಾರ ಬವಣೆ: ಎಚ್‌ಡಿಕೆ

• ಮಲ್ಲಮ್ಮ ನುಡಿ ವಾರ್ತೆ ಮಂಡ್ಯ

ಬರ ಪರಿಸ್ಥಿತಿ ನಿರ್ವಹಣೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ದೂರಿದ್ದಾರೆ. ಮಂಡ್ಯ ತಾಲೂಕಿನ ಹಟ್ನ ಬೇವುಕಲ್ಲು ಗ್ರಾಮದಲ್ಲಿ ಸಾಲ ಬಾಧೆಗೆ ಹೆದರಿ ರೈತ ದಂಪತಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ತೀವ್ರ ಕಳವಳ ಹಾಗೂ ಆತಂಕ ವ್ಯಕ್ತಪಡಿಸಿದ ಸಚಿವ, ಈಗಾಗಲೇ ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ಆರಂಭವಾಗಿವೆ. ಕೂಡಲೇ ಸರ್ಕಾರ ಅಮೂಲ್ಯ ಜೀವಗಳ ಸಾವನ್ನು ತಡೆಯುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

**ಫೋಟೊ ಪೋಸ್:** ಇಂದು ಗ್ರಾಮಕ್ಕೆ ಬಂದು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ ಬಳಿಕ ಮಾತನಾಡಿ, ರಾಜ್ಯದಲ್ಲಿ ಮತ್ತೆ ರೈತರ ಆತ್ಮಹತ್ಯೆ ಸರಣಿ ಆರಂಭವಾಗಿದೆ. ನೂರಾರು ರೈತರು ಆತ್ಮಹತ್ಯೆ ಹಾದಿ ಹಿಡಿದಿದ್ದಾರೆ. ಸಾಕಷ್ಟು ಕಡೆ ಸಂಪೂರ್ಣ ಬೆಳೆ ಹಾನಿಯಾಗಿದೆ. ಈ ಸರ್ಕಾರದವರು ನೋಡಿದರೆ ರೈತರ ನೆರವಿಗೆ ಹೋಗುವುದನ್ನು ಬಿಟ್ಟು ಹೊಲದಲ್ಲಿ ನಿಂತು ಫೋಟೋಗೆ ಪೋಸ್ ಕೊಟ್ಟು ಬರುತ್ತಿದ್ದಾರೆ ಎಂದಿದ್ದಾರೆ.

**ಕೃಷಿ ಸಚಿವರೇ ಇಲ್ಲ:** ಅದರ ಬದಲಿಗೆ ಇವರು ರೈತರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕು. ಸಾಲ ಪಡೆದಿರುವ ರೈತರಿಗೆ ಬ್ಯಾಂಕುಗಳು ನೋಟಿಸ್ ಕೊಡಲು ಶುರು ಮಾಡಿವೆ. ರಾಜ್ಯ ಸರ್ಕಾರ ಏನು ಮಾಡುತ್ತಿದೆ ಎಂಬುದೇ ಅರ್ಥವಾಗುತ್ತಿಲ್ಲ. ದುರಂತವೆಂದರೆ ಈ ರಾಜ್ಯದಲ್ಲಿ ಈಗ ಕೃಷಿ ಸಚಿವರೇ ಇಲ್ಲ ಎಂದು ಕಿಡಿಕಾರಿದ್ದಾರೆ. ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ. ರಮೇಶ್ ಮತ್ತು ಹಿರಿಯ ಮುಖಂಡ ರಾಮಚಂದ್ರ ಸೇರಿದಂತೆ ಅನೇಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



### ದಿಲ್ಲಿಯಲ್ಲಿ ಎಲ್ಲಾ ಶಾಸಕರು: ಕಿಡಿ

ಸಂಪುಟ ವಿಸ್ತರಣೆ ಎಂದು ಕಳೆದ ಮೂರು ನಾಲ್ಕು ದಿನಗಳಿಂದ ಮುಖ್ಯಮಂತ್ರಿ ಸೇರಿದಂತೆ ಎಲ್ಲಾ ಸಚಿವರು ಶಾಸಕರು ಹೋಗಿ ದೆಹಲಿಯಲ್ಲಿ ಬಿಡು ಬಿಟ್ಟಿದ್ದಾರೆ. ಸಂಪುಟ ವಿಸ್ತರಣೆ ಹೆಸರುಗಳನ್ನು ನಿಮ್ಮ ಪಕ್ಷದ ಹೈಕಮಾಂಡ್ ಅಂತಿಮಗೊಳಿಸುತ್ತದೆ. ಇಲ್ಲಿ ಕೆಲಸ ಮಾಡುವುದು ಬಿಟ್ಟು ಅಲ್ಲಿ ಹೋಗಿ ಏನು ಮಾಡುತ್ತಿದ್ದೀರಿ ಎಂದು ಸಚಿವರು ಕಾಂಗ್ರೆಸ್ ನಾಯಕರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.

### ರೈತರ ಹಿತಕ್ಕೆ ಸದಾ ಬದ್ಧ

ರಾಜ್ಯದಲ್ಲಿ ಸರ್ಕಾರ ಇದೆ ಎಂದು ಭಾವನೆಯನ್ನೇ ಮಾಡಿಲ್ಲ. ಮುಖ್ಯವಾಗಿ ಈ ಸರ್ಕಾರ ಟೇಕಾಫ್ ಆಗಿಯೇ ಇಲ್ಲ. ಮಂತ್ರಿಗಿರಿ, ಸಂಪುಟ ವಿಸ್ತರಣೆ ಇವೆಲ್ಲವುಗಳನ್ನು ಪಕ್ಕಕ್ಕಿಟ್ಟು ಮೊದಲು ಸರ್ಕಾರ ರೈತರ ನೆರವಿಗೆ ಧಾವಿಸಬೇಕು. ಕಾವೇರಿ ವಿಷಯಕ್ಕಾಗಿ ಮುಖ್ಯಮಂತ್ರಿಗಳು ಸರ್ವಪಕ್ಷ ಸಭೆ ಕರೆದಿದ್ದಾರೆ. ರಾಜ್ಯದ ರೈತರಹಿತಕ್ಕಾಗಿ ನಾವು ಸಭೆಯಲ್ಲಿ ಪಾಲ್ಗೊಳ್ಳುತ್ತೇವೆ. ನಮ್ಮ ವಾದವನ್ನು ಪ್ರಬಲವಾಗಿ ಮಂಡಿಸುತ್ತೇವೆ ಎಂದು ತಿಳಿಸಿದ್ದಾರೆ.

### ನೆರೆ ರಾಜ್ಯಕ್ಕೆ ನೀರು ಬಿಡುವುದು ಅಸಾಧ್ಯ

ಇಷ್ಟಕ್ಕೂ ತಮಿಳುನಾಡು ಕುಡಿಯುವ ಉದ್ದೇಶಕ್ಕೆ ನೀರು ಕೇಳುತ್ತಿದೆಯೋ ಅಥವಾ ಕೃಷಿ ಉದ್ದೇಶಕ್ಕೆ ನೀರು ಕೇಳುತ್ತಿದೆಯೋ ಎಂಬುದು ಗೊತ್ತಿಲ್ಲ. ಇದರ ಬಗ್ಗೆ ರಾಜ್ಯ ಸರ್ಕಾರ ಖಚಿತ ಮಾಹಿತಿ ಪಡೆಯಬೇಕು. ನಮ್ಮ ರೈತರಿಗೆ ನೀರು ಬಿಡಲು ಸಾಧ್ಯವೇ ಆಗುತ್ತಿಲ್ಲ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ನೆರೆ ರಾಜ್ಯಕ್ಕೆ ನೀರು ಹರಿಸುವುದು ಸಾಧ್ಯವಾಗದ ಮಾತು ಎಂದು ಅವರು ಒತ್ತಿ ಹೇಳಿದ್ದಾರೆ.




**ಕಾಕ್ರೋಚ್ ಹೋರಾಟ ತಣ್ಣಗಾದ ಬೆನ್ನಲ್ಲೇ ಕೆರಳಿದ ಆಪ್; E20 ವಿರುದ್ಧ ಆ. 4ರಂದು ಪ್ರಧಾನಿ ನಿವಾಸ ಚಲೋ ಘೋಷಿಸಿದ ಕೇಜ್ರಿವಾಲ್**

## ಸರಕಾರದ ಯೋಜನೆಗಳು ಜನರಿಗೆ ತಲುಪಬೇಕು

ದೇಶ ಹಾಗೂ ರಾಜ್ಯದ ಅಭಿವೃದ್ಧಿಗಾಗಿ ಸರ್ಕಾರಗಳು ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತರುತ್ತವೆ. ರೈತರು, ಮಹಿಳೆಯರು, ವಿದ್ಯಾರ್ಥಿಗಳು, ಕಾರ್ಮಿಕರು, ಹಿರಿಯ ನಾಗರಿಕರು ಹಾಗೂ ಬಡ ಕುಟುಂಬಗಳ ಕಲ್ಯಾಣಕ್ಕಾಗಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಹಲವು ಯೋಜನೆಗಳನ್ನು ರೂಪಿಸಲಾಗುತ್ತದೆ. ಆದರೆ ಈ ಯೋಜನೆಗಳ ನಿಜವಾದ ಫಲಾನುಭವಿಗಳಿಗೆ ಅವು ಸಂಪೂರ್ಣವಾಗಿ ತಲುಪದಿರುವುದು ವಿಷಾದನೀಯ.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ಯೋಜನೆಗಳ ಬಗ್ಗೆ ಜನರಿಗೆ ಸರಿಯಾದ ಮಾಹಿತಿ ನೀಡುವುದು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಜವಾಬ್ದಾರಿಯಾಗಿದೆ. ಗ್ರಾಮ ಪಂಚಾಯಿತಿ, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಸಂಬಂಧಿತ ಇಲಾಖೆಗಳು ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಪ್ರತಿಯೊಬ್ಬ ಅರ್ಹ ವ್ಯಕ್ತಿಗೆ ಯೋಜನೆಗಳ ಮಾಹಿತಿ ತಲುಪಿಸುವ ಕೆಲಸ ಮಾಡಬೇಕು.

ಸರ್ಕಾರದ ಯೋಜನೆಗಳು ಕಾಗದದಲ್ಲಷ್ಟೇ ಉಳಿಯದೆ, ಪ್ರತಿಯೊಂದು ಮನೆಗೂ ತಲುಪಿದಾಗ ಮಾತ್ರ ಅವುಗಳ ಉದ್ದೇಶ ಸಾರ್ಥಕವಾಗುತ್ತದೆ. ಮಧ್ಯವರ್ತಿಗಳ ಹಾವಳಿ, ಅನಗತ್ಯ ವಿಳಂಬ ಹಾಗೂ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಪಾರದರ್ಶಕವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು.

ಜನರು ಸಹ ಯೋಜನೆಗಳ ಬಗ್ಗೆ ತಿಳಿದುಕೊಂಡು, ಅಗತ್ಯ ದಾಖಲೆಗಳನ್ನು ಸಕಾಲದಲ್ಲಿ ಸಲ್ಲಿಸಿ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಸರ್ಕಾರ ಮತ್ತು ಸಾರ್ವಜನಿಕರು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಿದರೆ ಮಾತ್ರ ಅಭಿವೃದ್ಧಿಯ ಫಲ ಪ್ರತಿಯೊಬ್ಬ ನಾಗರಿಕನಿಗೂ ತಲುಪಲು ಸಾಧ್ಯ.

"ಸರ್ಕಾರದ ಯೋಜನೆಗಳು ಪ್ರತಿಯೊಬ್ಬ ಅರ್ಹ ಫಲಾನುಭವಿಗೆ ತಲುಪಿದಾಗ ಮಾತ್ರ ನಿಜವಾದ ಸುಶಾಸನ ಸಾಕಾರವಾಗುತ್ತದೆ."





**ಪೀಣ್ಯ ದಾಸರಹಳ್ಳಿ: ಕ್ಷೇತ್ರದ ರಾಜೇಶ್ವರಿ ನಗರ ವಾರ್ಡ್ ಜಿ ಬಿ ಎ ಆಕಾಂಕ್ಷಿ ಹಾಗೂ ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಡಾ.ಜಿ. ಹನುಮಂತರಾಜು ಅವರ ಹುಟ್ಟುಹಬ್ಬಕ್ಕೆ ಜೆಡಿಎಸ್ ಮುಖಂಡರು ಹಾಗೂ ಬಿಡಬ್ಲ್ಯೂಎಸ್ ಎಸ್ ಬಿ ಗುತ್ತಿಗೆದಾರರಾದ ರಮೇಶ್ ಬಾಬು ಅವರು ಆಗಮಿಸಿ ಕೇಕ್ ಕತ್ತರಿಸಿ ಸಿಹಿ ತಿನ್ನಿಸಿ ಸನ್ಮಾನಿಸುವ ಮೂಲಕ ಹುಟ್ಟುಹಬ್ಬಕ್ಕೆ ಶುಭ ಕೋರಿದರು. ಈ ಸಂದರ್ಭದಲ್ಲಿ ಜಿಬಿಎ ಆಕಾಂಕ್ಷಿಗಳಾದ ಭಾರತಿ ಹನುಮಂತರಾಜು, ಶಿವಣ್ಣ, ಲಗ್ಗೆರೆ ಮಂಜುನಾಥ್, ಹಾಗೂ ಮುಂತಾದವರು ಪಕ್ಷಾತೀತವಾಗಿ ಆಗಮಿಸಿ ಹುಟ್ಟುಹಬ್ಬಕ್ಕೆ ಶುಭ ಕೋರಿದರು.**

# ರಾಜ್ಯ ಮಟ್ಟದ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಪ್ರಸ್ತುತ ದಿನಮಾನಗಳಲ್ಲಿ ವ್ಯಾಪಕವಾಗಿ ಬಳಸುತ್ತಿರುವ ಮಾದಕ ವಸ್ತುಗಳ ಬಳಕೆ,ಧೂಮಪಾನ ಮತ್ತು ಮದ್ಯಪಾನಗಳಂತಹ ದುಶ್ಚಟಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವುದು ಅತ್ಯವಶ್ಯಕವಾಗಿದೆ ಎಂದು ಮಾಜಿ ಸಚಿವರು ಹಾಗೂ ಶಾಸಕ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ಅವರು ಶಹಾಪುರ ತಾಲೂಕಿನ ಭೀಮರಾಯನ ಗುಡಿ ಕೃಷಿ ಮಹಾವಿದ್ಯಾಲಯದ ಸಭಾಂಗಣದಲ್ಲಿಂದು ಕರ್ನಾಟಕ ರಾಜ್ಯ ಮದ್ಯಪಾನ ಸ್ವಯಂ ಮಂಡಳಿ,ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತಿ ಯಾದಗಿರಿ ಹಾಗೂ ತಾಲೂಕು ಆಡಳಿತ ನಗರಸಭೆ ಶಹಾಪುರ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ ಚಿತ್ತರಗಿ ಇಳಕಲ್ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನದ ಪರಮಪೂಜ್ಯರಾದ ಡಾ. ಮಹಾಂತ ಶಿವಯೋಗಿಗಳ ಜಯಂತಿ ಅಂಗವಾಗಿ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಾಮಾಜಿಕ ಕಳಕಳಿ ಹಾಗೂ ಸಾಮಾಜಿಕ ಬದ್ಧತೆಯಿಂದ ಸಂಯಮ ಮಂಡಳಿ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಾ,ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದೆ ಎಂದು ಬಣ್ಣಿಸಿದರು.

ಮದ್ಯಪಾನ ಬಂದ್ ಮಾಡುವುದಕ್ಕೆ ಸರ್ಕಾರದಿಂದ ಸಾಧ್ಯವಿಲ್ಲ ಅದು ಸಾರ್ವಜನಿಕರಿಂದ ಮಾತ್ರ ಸಾಧ್ಯ ತಾವೆಲ್ಲರೂ ಮುಂದಾದಾಗ ಮಾತ್ರ ಸ್ವಸ್ಥ ಸಮಾಜ



ಕಟ್ಟಲು ಸಾಧ್ಯ ಎಂದು ನುಡಿದರು. ಗುಟ್ಕಾ, ಸಿಗರೇಟ್, ಮದ್ಯಪಾನ ಸೇವನೆಯಿಂದ ಆರೋಗ್ಯ ಹಾನಿಯಾಗುವುದರ ಜೊತೆಗೆ ಕುಟುಂಬಕ್ಕೆ ಆರ್ಥಿಕ ಹೊರೆಯಾಗಿ ಬಡತನ ಸೃಷ್ಟಿಯಾಗುತ್ತದೆ,ಆದ್ದರಿಂದ ದುಶ್ಚಟಗಳಿಂದ ದೂರ ಇರುವಂತೆ ಕಿವಿಮಾತು ಹೇಳಿದರು. ದಿವ್ಯ ಸಾನಿಧ್ಯ ವಹಿಸಿದ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠ ಇಳಕಲ್ಲಿನ ಪರಮಪೂಜ್ಯರಾದ ಗುರುಮಹಾಂತ ಸ್ವಾಮಿಗಳು ಮಾತನಾಡಿ, ಮದ್ಯಪಾನ ಮತ್ತು ಡ್ರಗ್ಸ್ ನಂತಹ ದುಶ್ಚಟಗಳಿಗೆ ಯುವಕರು ಬಲಿಯಾಗಿ,ಮಾರಕರೋಗಗಳಿಗೆ ತುತ್ತಾಗಿ,ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ, ಇದರಿಂದ ಕುಟುಂಬಗಳು ಅನಾಥಗಳಾಗುತ್ತವೆ,ಮನೆಯಲ್ಲಿ ಮಹಿಳೆಯರು ವಿಧವೆಯರಾಗುತ್ತಾರೆ,ಬಡತನ ಹೆಚ್ಚಾಗಿ ಆಸ್ತಿ ಮಾರಾಟ ಮಾಡಿ ಸಾಲದ ಸೂಲಕ್ಕೆ ಸಿಲುಕಿ ಇಡೀ ಕುಟುಂಬವೇ ಸರ್ವನಾಶವಾಗುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

ಸಮಾಜದಲ್ಲಿ ನಾವು ಸುಖವಾಗಿ ಬದುಕಬೇಕಾದರೆ ಆರೋಗ್ಯವಂತರಾಗಿ ಇರಬೇಕಾದರೆ ದುಶ್ಚಟಗಳಿಂದ ದೂರವಿರಬೇಕು ಎಂದರು ಅಲ್ಲೇ ನೆರೆದಿದ್ದ ವಿದ್ಯಾರ್ಥಿಗಳಿಗೆ ಶಪಥ ಮಾಡಿಸಿದರು.ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ ಅಂಗನವಾಡಿ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುವುದರ ಮುಖಾಂತರ ಆಶಾ ಕಾರ್ಯಕರ್ತೆಯರು ಗ್ರಾಮದ ಪ್ರತಿಯೊಂದು ಕುಟುಂಬದ ಜವಾಬ್ದಾರಿ ಇದೆ ಅಲ್ಲದೆ,ಕುಟುಂಬ ಹಾಗೂ ಸಮಾಜವನ್ನು ಸರಿ ದಾರಿಗೆ ತರುವ ತಾಯಂದಿರು ನೀವುಗಳು ಎಂದು ಬಣ್ಣಿಸಿದರು.

ಮನುಷ್ಯನ ಬೌದ್ಧಿಕ,ಸಾಮಾಜಿಕ,ಮತ್ತು ಸಾಂಸ್ಕೃತಿಕವಾಗಿ ಹಾಳುಗಡುವಂತಹ ದುಶ್ಚಟಗಳಿಗೆ ಯಾರೂ ಕೈ ಹಾಕಬಾರದು,ಸಮಾಜವನ್ನು ಬದಲಾಯಿಸಲು ಕೇವಲ ಒಬ್ಬರಿಂದಾಗಲಿ, ಸರ್ಕಾರದಿಂದಲೂ ಸಾಧ್ಯವಿಲ್ಲ,ಸಾಮಾಜಿಕವಾಗಿ ಪ್ರತಿಯೊಬ್ಬರೂ ಹೋರಾಟಕ್ಕೆ ಸಿದ್ದರಾದಾಗ ಮಾತ್ರ ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು. ಬೆಂಗಳೂರಿನ ವಿಶ್ವ ವಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರು ಹಾಗೂ ಪರಮಪೂಜ್ಯ ಜಗದ್ಗುರುಗಳಾದ ಡಾ.ನಿಶ್ಚಲಾನಂದನಾಥ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತಾ ಮಾತನಾಡಿ ಇಂದಿನ ಯುವಕರು ನೂರಕ್ಕೆ ಪ್ರತಿಶತ 49% ರಷ್ಟು ಜನ ದುಡಿಯುವವರಿದ್ದರೆ 51%ರಷ್ಟು ಜನ ದುಡಿಯಲಾರದೆ ನಿರುದ್ಯೋಗಿಗಳಾಗಿ ಬದುಕುತ್ತಿದ್ದಾರೆ,ಇದರಲ್ಲಿ 39% ರಷ್ಟು ಯುವ ಜನತೆ ಡ್ರಗ್ಸ್ ಇಂಥ ಮಾದಕ ದ್ರವ್ಯ ವ್ಯಸನಗಳಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ನಾವು ನೀವೆಲ್ಲರೂ ಹಂತ ಹಂತವಾಗಿ ಇಡೀ ಸಮಾಜವನ್ನು ಬದಲಾಯಿಸುವುದಕ್ಕೆ ಕಂಕಣ ಬದ್ಧರಾಗೋಣ ಎಂದು ಶುಭ ಹಾರೈಸಿದರು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯುಮ ಮಂಡಳಿಯ ಅಧ್ಯಕ್ಷ ಶರಣಪ್ಪ ಸಲದಾಪುರ ಪ್ರಾಸ್ತಾವಿಕ ಮಾತನಾಡಿ, ವ್ಯಸನ ಮುಕ್ತ ಸಮಾಜಕ್ಕೆ ನಮ್ಮ ನಿಗಮ ಮಂಡಳಿ ಸಂಪೂರ್ಣ ಜವಾಬ್ದಾರಿಯೊಂದಿಗೆ ಇಡೀ ರಾಜ್ಯದ್ಯಂತ ಆಚರಣೆ ಮಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ವಿದ್ಯಾರ್ಥಿಗಳು, ಅತಿಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಬೂದಯ್ಯ ಮತ್ತು ಮಲ್ಲಯ್ಯ ಹಿರೇಮಠ ತಂಡದಿಂದ ಪ್ರಾರ್ಥನೆ ಗೀತೆ ನೆರವೇರಿತು,ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಕಾರ್ಯದರ್ಶಿಗಳಾದ ಎನ್.ಎಸ್. ಮಹೇಶ್ ಸರ್ವರನ್ನು ಸ್ವಾಗತಿಸಿದರು, ಜ್ಯೋತಿ ಲತಾ ತಡಬಿಡಿಮಠ ನಿರೂಪಿಸಿದರು, ರಂಗನಾಥ ದೊರೆ ವಂದಿಸಿದರು.

# ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್: ಉಚಿತ ಆರೋಗ್ಯ ತಪಾಸಣಾ ಶಿಬಿರ

- **ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ**

ತಾಲೂಕಿನ ಚಿಕ್ಕ ಕಾಡಿಗೇನಹಳ್ಳಿಯಲ್ಲಿ ಬೆಂಗಳೂರಿನ ಈಸ್ಟ್ ಪಾಯಿಂಟ್ ಆಸ್ಪತ್ರೆಯ ಸಹಕಾರದೊಂದಿಗೆ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಶನಿವಾರ ಆಯೋಜಿಸಲಾಯಿತು.

ಕಳೆದ ಎರಡು ವಾರಗಳಿಂದ ಪ್ರತಿ ಶನಿವಾರ ವಿವಿಧ ಗ್ರಾಮಗಳಲ್ಲಿ ಆರೋಗ್ಯ ಶಿಬಿರಗಳನ್ನು ನಡೆಸುತ್ತಿರುವ ಟ್ರಸ್ಟ್, ಪೇರೇಸಂದ್ರ ಹಾಗೂ ಜಾತವಾರ ನಂತರ ಇಂದು ತಾಲೂಕಿನ ಚಿಕ್ಕ ಕಾಡಿಗೇನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ಶಿಬಿರವನ್ನು ಏರ್ಪಡಿಸಿತ್ತು. ಶಿಬಿರದಲ್ಲಿ 500ಕ್ಕೂ ಹೆಚ್ಚು ಮಂದಿ ಭಾಗವಹಿಸಿ ಹೃದಯ, ಕಣ್ಣು, ಮೂಳೆ, ಕಿವಿ–ಮೂಗು–ಗಂಟಲು ಹಾಗೂ ಚರ್ಮರೋಗ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ತಜ್ಞ ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ವೈದ್ಯಕೀಯ



ಸಲಹೆ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್ ರೆಡ್ಡಿ,ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು.ಬಡವರು ಮತ್ತು ಗ್ರಾಮೀಣ ಜನರು ವೈದ್ಯಕೀಯ ವೆಚ್ಚವನ್ನು ಭರಿಸಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ಇದೆ. ಇಂತಹವರಿಗೆ ನೆರವಾಗುವ ಉದ್ದೇಶದಿಂದ ಗ್ರಾಮೀಣ ಭಾಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಗ್ರಾಮೀಣ ಪ್ರದೇಶಗಳ ಬಡವರು,ವೃದ್ಧರು ಹಾಗೂ ಸಾಮಾನ್ಯ ಜನರ ಆರೋಗ್ಯ ಸುಧಾರಣೆಗೆ ಟ್ರಸ್ಟ್ ಬದ್ಧವಾಗಿದೆ.ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳ ಅಭಿವೃದ್ಧಿಯಿಂದ ಮಾತ್ರ ಗ್ರಾಮೀಣ ಜನರ ಜೀವನಮಟ್ಟ ಸುಧಾರಿಸಲು ಸಾಧ್ಯವಾಗುತ್ತದೆ ಎಂಬ ನಂಬಿಕೆಯಿಂದ ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ. ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲೂ ಇಂತಹ ಆರೋಗ್ಯ ಶಿಬಿರಗಳನ್ನು ನಡೆಸುವ ಉದ್ದೇಶವಿದೆ ಎಂದು ಹೇಳಿದರು ಶಸ್ತ್ರಚಿಕಿತ್ಸೆ ಅಗತ್ಯವಿರುವ ರೋಗಿಗಳನ್ನು ಮಂಗಳವಾರ ಬೆಂಗಳೂರಿನ ಈಸ್ಟ್ ಪಾಯಿಂಟ್ ಆಸ್ಪತ್ರೆಗೆ ಕರೆದೊಯ್ದು,ಶಸ್ತ್ರಚಿಕಿತ್ಸೆ ಪೂರ್ಣಗೊಂಡ ಬಳಿಕ ಮರಳಿ ಕರೆತರುವ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಶಿಬಿರದ ವೇಳೆ ಸಂದೀಪ್ ರೆಡ್ಡಿ ಅವರು ಹಿರಿಯ ನಾಗರಿಕರ ಆರೋಗ್ಯ ವಿಚಾರಿಸಿ, ಅಗತ್ಯವಿದ್ದವರಿಗೆ ವಾಕಿಂಗ್ ಸ್ಟಿಕ್ ಹಾಗೂ ದೃಷ್ಟಿಸಮಸ್ಯೆ ಹೊಂದಿದ್ದವರಿಗೆ ಉಚಿತ ಕನ್ನಡಕಗಳನ್ನು ವಿತರಿಸಿದರು. ಆರೋಗ್ಯ ಶಿಬಿರಕ್ಕೆ ಸಹಕರಿಸಿದ ಸ್ನೇಹಿತರ ಬಳಗ ಹಾಗೂ ಶಿಬಿರದ ಬಗ್ಗೆ ಪ್ರಚಾರ ನಡೆಸಿದ ಆಟೋ ಚಾಲಕರಿಗೆ ಅವರು ಧನ್ಯವಾದಗಳನ್ನು ತಿಳಿಸಿದರು.ರೋಗಿಗಳಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸುವುದರ ಜೊತೆಗೆ ಅಗತ್ಯವಿದ್ದವರಿಗೆ ಕನ್ನಡಕ ಹಾಗೂ ವಾಕಿಂಗ್ ಸ್ಟಿಕ್‌ಗಳನ್ನು ನೀಡಲಾಯಿತು. ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿರುವ ಸಂದೀಪ್ ಬಿ. ರೆಡ್ಡಿ ಅವರ ಸೇವಾ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು

ಈ ಸಂದರ್ಭದಲ್ಲಿ ಪಟ್ರೇನಹಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷ ವೆಂಕಟೇಶ್, ಮಂಚೇನಹಳ್ಳಿ ರಿಯಾಝ್,ಕಣಜೇನಹಳ್ಳಿ ಸುಹಾಸ್,ಶ್ರೀರಾಮಪುರ ಶಶಿ,ರಘು,ಶ್ರೀಕಾಂತ್,ಹರೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮಕ್ಕಳ ಆರೋಗ್ಯ ಸುರಕ್ಷತೆಗೆ ಕ್ರಮ: ಆಸ್ಪತ್ರೆಯಿಂದ ಮಕ್ಕಳು ಬಿಡುಗಡೆ

- **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ಬೆಳಗಿನ ಉಪಹಾರ ಸೇವಿಸಿದ ಬಳಿಕ ವಿದ್ಯಾರ್ಥಿಗಳ ಆರೋಗ್ಯದಲ್ಲಿ ಅಸ್ವಸ್ಥತೆ ಕಂಡುಬಂದ ನಗರದ ಉದ್ದಬಾಳ ಹತ್ತಿರದ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಎಲ್ಲ ಮಕ್ಕಳು ಆರೋಗ್ಯವಾಗಿದ್ದು, ನಿರಂತರ ನಿಗಾವಹಿಸಿ ತಾತ್ಕಾಲಿಕವಾಗಿ ರಾತ್ರಿ ಪಾಳಯದಲ್ಲಿ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ನಂದಿತಾ ಎಮ್ ಎನ್ ಪತ್ರಿಕೆಗೆ ತಿಳಿಸಿದರು.

ಆಹಾರ ಸೇವನೆಯ ನಂತರ ವಿದ್ಯಾರ್ಥಿಗಳು ವಾಂತಿ ಮತ್ತು ಸುಸ್ತು, ಕುರಿತು ಮಾಹಿತಿ ಬಂದ ತಕ್ಷಣವೇ ಪಿಡಬ್ಲ್ಯುಡಿ ಕ್ಯಾಂಪ್‌ನಲ್ಲಿರುವ ತಾಯಿ ಮಕ್ಕಳ ಆಸ್ಪತ್ರೆಗೆ ಮಕ್ಕಳನ್ನು ದಾಖಲಿಸಿ ತಾಲೂಕು ಆರೋಗ್ಯ ಅಧಿಕಾರಿ ಡಾ ಅಯ್ಯನಗೌಡ ಹಾಗೂ ಆಡಳಿತ ವೈದ್ಯಾಧಿಕಾರಿ ಡಾ ಕಾವೇರಿ ನೇತೃತ್ವದಲ್ಲಿ ಚಿಕಿತ್ಸೆ ನೀಡಲಾಗಿದ್ದು, ಚಿಕಿತ್ಸೆಗೊಳಗಾದ ಎಲ್ಲ 48




ಮಕ್ಕಳು ಯಾವುದೇ ಅಪಾಯವಿಲ್ಲದೆ ಸುರಕ್ಷಿತವಾಗಿದ್ದು, ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ ಎಂದು ತಿಳಿಸಿದರು.

ವಸತಿ ನಿಲಯಕ್ಕೆ ಭೇಟಿ ನೀಡಿದ ಅಧಿಕಾರಿಗಳು, ಅಡುಗೆ ಮನೆಯ ಶುಚಿತ್ವ ಹಾಗೂ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಸ್ವಚ್ಛತೆ ಕಾಪಾಡುವಂತೆ ಎಲ್ಲಾ ಅಡುಗೆ ಸಿಬ್ಬಂದಿಗೆ ಸೂಚಿಸಿದರು ಜೊತೆಗೆ ಆರ್‌ಬಿಎಸ್‌ಕೆ ಹಾಗೂ ಆರ್‌ಕೆಎಸ್‌ಕೆ ವೈದ್ಯರ ತಂಡವು ಎಲ್ಲ ಮಕ್ಕಳ ಆರೋಗ್ಯವನ್ನು ತಪಾಸಣೆ ಮಾಡಿತು.

ತಾಲೂಕು ಆರೋಗ್ಯ ಅಧಿಕಾರಿಗಳ ನೇತೃತ್ವದಲ್ಲಿ, ಉಪ–ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕ್ಷೇತ್ರದ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಬಾಲಪ್ಪ ಹಾಗೂ ಗೀತಾ ಹೀರೆಮಠ ಅವರು ಪ್ರತಿ ತರಗತಿಗೂ ತೆರಳಿ ಮಕ್ಕಳಿಗೆ ಕೈಗಳನ್ನು ಸರಿಯಾಗಿ ತೊಳೆದುಕೊಂಡ ನಂತರವೇ ಆಹಾರ ಸೇವಿಸಬೇಕು. ಯಾವುದೇ ಕಾರಣಕ್ಕೂ ಶುದ್ಧೀಕರಿಸದ ಅಥವಾ ಕೆರೆ–ಕುಂಟೆಗಳ ನೀರನ್ನು ನೇರವಾಗಿ ಕುಡಿಯಬಾರದು ಶುದ್ಧೀಕರಿಸಿದ ನೀರನ್ನು ಮಾತ್ರ ಬಳಸಬೇಕು. ನೀರಿನ ಸಂಗ್ರಹಣಾ ಪಾತ್ರೆಗಳ ಮೇಲೆ ಕಡ್ಡಾಯವಾಗಿ ಮುಚ್ಚಳ ಮುಚ್ಚಬೇಕು.ಬಯಲು ಪ್ರದೇಶಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡಬಾರದು.

ರಸ್ತೆ ಬದಿಯ ತೆರೆದ ಆಹಾರ ಪದಾರ್ಥಗಳು ಮತ್ತು ಕತ್ತರಿಸಿಟ್ಟ ಹಣ್ಣುಗಳನ್ನು ತಿನ್ನಬಾರದು.

ತಯಾರಿಸಿದ ಆಹಾರ ಪದಾರ್ಥಗಳನ್ನು ಮುಚ್ಚಿಡಬೇಕು.ಓಆರ್‌ಎಸ್ ದ್ರಾವಣ ತಯಾರಿಸಿದ 24 ಗಂಟೆಯೊಳಗೆ ಬಳಸಬೇಕು ಹಾಗೂ ವಾಂತಿ–ಭೇದಿಯಾದಾಗ ಮನೆಯಲ್ಲಿ ಗಂಜಿ, ಬೇಳೆ ತಿಳಿಸಾರು, ನಿಂಬೆ ಪಾನಕ ಮತ್ತು ಎಳನೀರು ಕುಡಿಯುವುದನ್ನು ಮುಂದುವರಿಸಬೇಕು ಎಂದು ಆರೋಗ್ಯ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಹಿರಿಯ ಹೆಚ್‌ಐಓ ಸುಗುರಪ್ಪ, ಎಪಡಮಲಾಜಿಷ್ಟ್ ಶ್ರೀನಿವಾಸ್, ಹಿರಿಯ ಹೆಚ್‌ಐಓ, ರಂಗನಾಥ್ ಗುಡಿ, ಸಂಗನಗೌಡ ಪಾಟೀಲ್, ತಾಲೂಕು ಎಫಿಡಾಮಲೋಜಿಸ್ಟ್, ನಿಖಿಲ್, ಎಮ್‌ಟಿಎಸ್ ಎಫ್ ಎ ಹಣಗಿ, ಪಿಹೆಚ್‌ಸಿಓ ಅನ್ನಪೂರ್ಣ, ಗಂಗಮ್ಮ, ಹನುಮಂತಮ್ಮ ಹೆಚ್‌ಐಓ ರವಿರಾಜ್, ಸಿಹೆಚ್‌ಓ ಚಂದ್ರಶೇಖರ್, ಅಂದಾನಪ್ಪ ಹಾಗೂ ವಸತಿ ಶಾಲೆಯ ಶಿಕ್ಷಕರು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣಕ್ಕೆ ಯುವಜನತೆಯ ಸಹಕಾರ ಅಗತ್ಯ

- **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಇಂದಿನ ಡಿಜಿಟಲ್ ಯುಗದಲ್ಲಿ ಯುವಜನತೆ ದುಶ್ಚಟಗಳು ಹಾಗೂ ಡಿಜಿಟಲ್ ತಂತ್ರಜ್ಞಾನದ ದುರ್ಬಳಕೆಯಿಂದ ದೂರವಿದ್ದು,ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕು ಎಂದು ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ ಅವರು ಕರೆ ನೀಡಿದ್ದಾರೆ.

ಶನಿವಾರ ಕಲಬುರಗಿ ನಗರದ ಆದರ್ಶ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಇಲಾಖೆ, ಆರೋಗ್ಯ ಇಲಾಖೆ, ಜಿಮ್ಸ್ ಆಸ್ಪತ್ರೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಹಾಗೂ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಶ್ರೀ ಡಾ. ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆ ಪ್ರಯುಕ್ತ 'ವ್ಯಸನ ಮುಕ್ತ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ರಾಜ್ಯವನ್ನು ಹಾಗೂ ಕಲಬುರಗಿ ನಗರವನ್ನು ಮಾದಕ ವಸ್ತು ಮುಕ್ತಗೊಳಿಸಲು ಪೊಲೀಸ್ ಇಲಾಖೆಯು 'ಆಪರೇಷನ್ ರೈಸ್ ಮತ್ತು 'ಬೇಡ ಬ್ರೋ' ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಲಾಗಿದೆ. ಬರೀ ಪೊಲೀಸ್ ಇಲಾಖೆಯಿಂದಲೇ ಮಾದಕ ವಸ್ತುಗಳ ನಿರ್ಮೂಲನೆ ಸಾಧ್ಯವಿಲ್ಲ; ಇದಕ್ಕೆ ಯುವಜನತೆ, ಸಮುದಾಯ ಹಾಗೂ ಸಾರ್ವಜನಿಕರ ಸಹಭಾಗಿತ್ವ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

ಶ್ರೀ ಮಹಾಂತ ಶಿವಯೋಗಿಗಳ ಜನ್ಮದಿನಚಾದ ಇಂದು ವ್ಯಸನ ಮುಕ್ತ ದಿನಾಚರಣೆ ರಾಜ್ಯದಾದ್ಯಂತ ಅಚರಿಸಲಾಗುತ್ತಿದೆ. ಶ್ರೀ ಮಹಾಂತ ಶಿವಯೋಗಿಗಳು ಕೇವಲ ಆಧ್ಯಾತ್ಮಿಕ ಜೀವಿ ಮಾತ್ರವಲ್ಲದೆ ಸಮಾಜ ಸುಧಾರಕರಾಗಿದ್ದರು. ದುಶ್ಚಟಗಳಿಂದ ವ್ಯಕ್ತಿ, ಕುಟುಂಬ ಹಾಗೂ ದೇಶದ ಮೇಲಾಗುವ ದುಷ್ಟ ಪರಿಣಾಮಗಳ ವಿರುದ್ಧ ಅವರು ಅಂದೇ ಹೋರಾಡಿದ್ದರು. ಇಂದಿನ ಸಂದರ್ಭದಲ್ಲೂ ಅವರ ಚಿಂತನೆಗಳು ಅತ್ಯಂತ ಪ್ರಸ್ತುತವಾಗಿವೆ. ಅಮದಿಕಿಂತಲು ಇಂದು ದುಶ್ಚಟದಿಂದ ಯುವ ಸಮುಹವನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಮೊಬೈಲ್, ಸೋಶಿಯಲ್ ಮೀಡಿಯಾ ಹಾಗೂ ಒಟಿಟಿ ಅಡಿಕ್ಷನ್ (ಡಿಜಿಟಲ್ ಟಾಕ್ಸಿಸಿಟಿ) ಹೆಚ್ಚಾಗುತ್ತಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಧಕ್ಕೆಯಾಗುತ್ತಿದೆ. ಇದರೊಂದಿಗೆ ತಂಬಾಕು, ಮದ್ಯಪಾನ ಹಾಗೂ ಮಾದಕ ವಸ್ತುಗಳ ಬಳಕೆಯಿಂದ ಯುವಜನತೆ ತಮ್ಮ ಅಮೂಲ್ಯ ಭವಿಷ್ಯವನ್ನು ಹಾಳುಮಾಡಿಕೊಳ್ಳದರು. ವಿದ್ಯಾರ್ಥಿಗಳು ಕೇವಲ ತಮ್ಮ ಕುಟುಂಬಕ್ಕೆ ಮಾತ್ರವಲ್ಲದೆ ಇಡೀ ದೇಶಕ್ಕೆ ಶಕ್ತಿಯಾಗುವ ಪ್ರತಿಭೆಯನ್ನು ಹೊಂದಿದ್ದಾರೆ. ಮಾದಕ ವಸ್ತುಗಳ ವಿರುದ್ಧ 'ತಡೆಗಟ್ಟುವಿಕೆ, ಪತ್ತೆ ಹಚ್ಚುವಿಕೆ ಮತ್ತು ಪುನರ್ವಸತಿ' ಎಂಬ ತ್ರಿಕೋನ ಸೂತ್ರದಡಿಯಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ವ್ಯಸನಮುಕ್ತ ಸಮಾಜದ ರಾಯಭಾರಿಯಾಗಬೇಕು ಎಂದು ಆಯುಕ್ತರು ಕರೆ ನೀಡಿದಲ್ಲದೆ ಇನ್ನು ಯಾವುದೇ ಸ್ಥಳದಲ್ಲಿ ಮಾದಕ ವಸ್ತುಗಳ ಸೇವನೆ ಅಥವಾ ಮಾರಾಟದಂತಹ ಅನುಮಾನಾಸ್ಪದ ಚಟುವಟಿಕೆಗಳು ಕಂಡುಬಂದರೆ ತಕ್ಷಣ 112 ತುರ್ತು ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದರು.

**3 ವರ್ಷದಲ್ಲಿ 700 ಕೇಸ್:** ಕಲಬುರಗಿಯಲ್ಲಿ ಕಳೆದ 3 ವರ್ಷಗಳಲ್ಲಿ ಮಾದಕ ವಸ್ತು ಜಾಲಕ್ಕೆ ಸಂಬಂಧಿಸಿದಂತೆ 700ಕ್ಕೂ ಹೆಚ್ಚು ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಹಿಂದೆ ಮಾರಾಟಗಾರರು ಮೇಲೆ ಕ್ರಮ ವಹಿಸಲಾಗುತ್ತಿತ್ತು. ಇನ್ಮುಂದೆ ಮಾದಕ ವಸ್ತುಗಳನ್ನು ಸೇವನೆ ಮಾಡುವವರ ಮೇಲೆಯೂ ಕಾನೂನು ಪ್ರಕಾರ ಪ್ರಕರಣ ದಾಖಲಿಸಲಾಗುವುದು ಎಂದು ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ ಎಚ್ಚರಿಸಿದರು.




**ಯುವಜನರು ವ್ಯಸನಮುಕ್ತ ಜೀವನ ರೂಪಿಸಿಕೊಳ್ಳಲಿ**

ಯುವ ವಯಸ್ಸಿನಲ್ಲಿ ಮೆದುಳು ಅತ್ಯಂತ ಚುರುಕಾಗಿದ್ದು, ಅದನ್ನು ಸರಿಯಾದ ಹಾದಿಯಲ್ಲಿ ತರಬೇತಿಗೊಳಿಸಿದರೆ ಉತ್ತಮ ಜೀವನ ರೂಪಿಸಿಕೊಳ್ಳಬಹುದು. ಆದರೆ ಅದೇ ವಯಸ್ಸಿನಲ್ಲಿ ದುಶ್ಚಟಗಳಿಗೆ ಬಲಿಯಾದರೆ ಭವಿಷ್ಯ ಹಾಳಾಗುತ್ತದೆ ಎಂದು ಕಲಬುರಗಿ ಜಿಮ್ಸ್ ಆಸ್ಪತ್ರೆಯ ಮನೋವೈದ್ಯ ಡಾ. ಪ್ರಭು ಕಿರಣ್ ಕಳವಳ ವ್ಯಕ್ತಪಡಿಸಿದರು. ವಿಶೇಷ ಉಪನ್ಯಾಸದಲ್ಲಿ ಮಾತನಾಡಿದ ಅವರು ನಮ್ಮ ಮೆದುಳು ಅತ್ಯಂತ ಡೈನಮಿಕ್ (ಚುರುಕು) ಹಾಗೂ ಪ್ಲಾಸ್ಟಿಸಿಟಿ ಹೊಂದಿರುವ ಅಂಗ. ನಾವು ಅದಕ್ಕೆ ಒಳ್ಳೆಯ ವಿಚಾರಗಳನ್ನು ನೀಡಿದರೆ ಒಳ್ಳೆಯದನ್ನು, ಕೆಟ್ಟ ವಿಚಾರಗಳನ್ನು ನೀಡಿದರೆ ಕೆಟ್ಟದ್ದನ್ನೇ ನೀಡುತ್ತದೆ. ಯುವ ವಯಸ್ಸಿನಲ್ಲಿ ಮೆದುಳನ್ನು ಸನ್ಮಾರ್ಗಕ್ಕೆ ತರುವುದು ಅತ್ಯಂತ ಸುಲಭ.

ಆರಂಭದಲ್ಲಿ ತಮಾಷೆಗೆ ಅಥವಾ ಕುತೂಹಲಕ್ಕೆ ಶುರುವಾಗುವ ಸ್ಮೋಕಿಂಗ್, ಆಲ್ಕೋಹಾಲ್ ಮತ್ತು ಡ್ರಗ್ಸ್ ಚಟಗಳು ಕ್ರಮೇಣ ಮನುಷ್ಯನನ್ನು ನಿಯಂತ್ರಿಸಲು ಶುರುಮಾಡುತ್ತವೆ. ಚಟಕ್ಕೆ ಹಣದ ಕೊರತೆಯಾದಾಗ ಯುವಜನರು ಕಳವಿನಂತಹ ಕಾನೂನುಬಾಹಿರ ಆಟೋಮ್ಯಾಟಿಕ್ ಅಪರಾಧ ಕೃತ್ಯಗಳಿಗೆ ಇಳಿಯುತ್ತಾರೆ.

ಮೊಬೈಲ್ ಗೇಮ್‌ಗಳು, ಸಾಮಾಜಿಕ ಜಾಲತಾಣಗಳು ಹಾಗೂ ಮಾದಕ ದ್ರವ್ಯಗಳು ಮೆದುಳಿನಲ್ಲಿ 'ಡೋಪಮಿನ್' ಎಂಬ ಹಾರ್ಮೋನ್ ಅನ್ನು ತಾತ್ಕಾಲಿಕವಾಗಿ ಹೆಚ್ಚಿಸಿ ಕೃತಕ ಆನಂದ ನೀಡುತ್ತವೆ. ಇದು ಯುವಜನರನ್ನು ಶಾರ್ಟ್‌ಕಟ್‌ಗಳತ್ತ ಸೆಳೆದು, ಓದು–ಬರಹ ಹಾಗೂ ದೈಹಿಕ ಶ್ರಮದಿಂದ ದೂರ ತಳ್ಳುತ್ತದೆ. ದುಶ್ಚಟಗಳಿಗೆ ಬಿದ್ದವರು "ನಾವು ಕೆಟ್ಟವರು, ವೀಕ್" ಎಂದು ನಾಚಿಕೆಯಿಂದ ಮುಚ್ಚಿಡಬಾರದು. ಬದಲಾಗಿ, ತಮಗೆ ತೊಂದರೆಯಾಗಿದೆ ಎಂಬುದನ್ನು ಒಪ್ಪಿಕೊಂಡು ಶಿಕ್ಷಕರು, ಪೋಷಕರು, ಕೌನ್ಸಿಲರ್ ಅಥವಾ ಮನೋವೈದ್ಯರ ಸಹಾಯ ಪಡೆಯಬೇಕು. "ನೆರವು ಪಡೆಯುವುದು ಎಂದಿಗೂ ದೌರ್ಬಲ್ಯವಲ್ಲ" ಎಂದು ಡಾ. ಪ್ರಭು ಕಿರಣ್ ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಂಯೋಜಕರಾದ ಸುಜಾತಾ ಪಾಟೀಲ ಅವರು ವ್ಯಸನ ತ್ಯಜಿಸುವ ಮತ್ತು ಅರಿವು ಮೂಡಿಸುವ ಪ್ರತಿಜ್ಞೆ ವಿಧಿ ಬೋಧಿಸಿದರು. ಜಿಲ್ಲಾ ಮಾನಸಿಕ ಕಾರ್ಯಕ್ರಮ ಸಾಮಾಜಿಕ ಕಾರ್ಯಕರ್ತ ನಾಗರಾಜ ಬಿರಾದಾರ ಅವರುವ ತಂಬಾಕು ಕೋಶದ ಸಹಾಯವಾಣಿ ಕುರಿತು ಮಾಹಿತಿ ನೀಡಿದರು.

**ಜಾಗೃತಿ ಜಾಥಕ್ಕೆ ಚಾಲನೆ:** ವ್ಯಸನ ಮುಕ್ತ ದಿನಾಚರಣೆ ಅಂಗವಾಗಿ ಕಲಬುರಗಿ ನಗರದ ಜಿಲ್ಲಾ ಆಸ್ಪತ್ರೆಯಿಂದ ಜಗತ್ ಸರ್ಕಲ್‌ವರೆಗೆ ಜಾಗೃತಿ ಜಾಥಾ ಆಯೋಜಿಸಲಾಗಿತ್ತು. ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಜ್ಞೆ ಡಾ.ಅಸ್ಮಾ ರಬಾ ರುಕಿಯಾ ಅವರು ಚಾಲನೆ ನೀಡಿದರು. ಜಾಥಾದಲ್ಲಿ ಭಾಗವಹಿಸಿದ ನರ್ಸಿಂಗ್ ವಿದ್ಯಾರ್ಥಿಗಳು ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಘೋಷವಾಕ್ಯ ಕೂಗುತ್ತಾ ಜಾಗೃತಿ ಮೂಡಿಸಿದರು.

**ವ್ಯಸನ ಮುಕ್ತ ಶಿಬಿರ ಆಯೋಜನೆ:** ಕಾಲೇಜಿನ ಅವರಣದಲ್ಲಿ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಾನಸಿಕ ಆರೋಗ್ಯ ತಂಡ ಮತ್ತು ಜಿಲ್ಲಾ ತಂಬಾಕು ನಿಯಂತ್ರಣ ಕೋಶದಿಂದ

ವ್ಯಸನ ಮುಕ್ತ ಶಿಬಿರ ಆಯೋಜಿಸಿ ವಿದ್ಯಾರ್ಥಿಗಳಿಗೆ ವ್ಯಸನದಿಂದಾಗುವ ದುಷ್ಪರಿಣಾಮಗಳ ಕುರಿತು ಆಪ್ತ ಸಮಾಲೋಚನೆ ಮೂಲಕ ತಿಳಿ ಹೇಳಿದಲ್ಲದೆ ವಿವಿಧ ಕರಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಕ್ಲಿನಿಕಲ್ ಸೈಕ್ಲೋಜಿಸ್ಟ್ ಸಂತೋಷಿ ಗುಳೆ, ಸುಜಾತಾ ಪಾಟೀಲ, ಸಾಮಾಜಿಕ ಕಾರ್ಯಕರ್ತೆ ಆರತಿ ಧನಶ್ರೀ, ನಾಗರಾಜ ಬಿರಾದಾರ, ಪಿ.ಜಿ. ಐಮಾನ್ ಸುಬೋಹಿ ಅವರುಗಳು ವ್ಯಸನ ಶಿಬಿರವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಕಾಲೇಜಿನ ಪ್ರಾಂಶುಪಾಲ ರಾಜು ಗಂಗಾಧರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ (ಪದವಿ ಪೂರ್ವ) ಉಪನಿರ್ದೇಶಕ ದೇವನಗೌಡ ಪಾಟೀಲ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಸೋಮು ರಾಠೋಡ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಸ್ವಾಗತಿಸಿದರು. ಕನ್ನಡ ಉಪನ್ಯಾಸಕ ವಿಠ್ಠಲ ಭಾವಿಮನಿ ನಿರೂಪಿಸಿದರು.

# ಆರೋಗ್ಯ ಶಿಕ್ಷಣದಿಂದ ಪ್ರಜ್ಞಾವಂತ ಸಮಾಜದ ನಿರ್ಮಾಣ: ಡಾ. ಅಭಯ



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ಪ್ರಜ್ಞಾವಂತ ಸಮಾಜದ ನಿರ್ಮಾಣದಲ್ಲಿ ಆರೋಗ್ಯ ಶಿಕ್ಷಣದ ಪಾತ್ರ ಮಹತ್ವದ್ದು ಎಂದು ಯುವ ವೈದ್ಯ ಡಾ. ಅಭಯ ಸಮದರೆ ಹೇಳಿದರು.

ಇಲ್ಲಿನ ಶ್ರೀ ಬಸವೇಶ್ವರ ಪದವಿ ಕಾಲೇಜಿನಿಂದ ಅಭಿವೃದ್ಧಿ ಮಂಡಳಿಯ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ 'ಶಿಕ್ಷಣ, ಮೌಲ್ಯ ಮತ್ತು ಯಶಸ್ಸು ' ಕುರಿತು ಉಪನ್ಯಾಸ ಮತ್ತು ಬಿಕಾಂ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಬೀಳ್ಕೊಡುಗೆ

ಸಮಾರಂಭದಲ್ಲಿ ಮಾತನಾಡಿ ಈ ಕಾಲಘಟ್ಟದಲ್ಲಿ ಎಲ್ಲರಿಗೂ ಎಲ್ಲೆಡೆಯೂ ಆರೋಗ್ಯ ಕಾಪಾಡುವ ಮತ್ತು ರೋಗಗಳಿಂದ ರಕ್ಷಣೆ ಪಡೆದುಕೊಳ್ಳುವ ಸವಾಲು ದೊಡ್ಡದಾಗಿದೆ ಎಂದರು. ವ್ಯಕ್ತಿಯ ಜೀವನ ಶೈಲಿ, ಆಹಾರಕ್ರಮ, ಆಲೋಚನೆಗಳು, ಒಳ–ಹೊರಗಿನ ಒತ್ತಡಗಳು ಮನುಷ್ಯನ ಆರೋಗ್ಯ ನಿರ್ಧರಿಸುತ್ತವೆ. ಎಲ್ಲರಲ್ಲೂ ಆರೋಗ್ಯ ಪ್ರಜ್ಞೆ ಮೂಡುವುದೇ ಸಮಾಜಿಕ ಬೆಳವಣಿಗೆಯ ರಹದಾರಿ ಎಂದರು.

ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ.ಬಿ.ಪರತಾಪೂರೆ ಮಾತನಾಡಿ, ಬಸವ ಫಿಲಾಸಫಿ ಮತ್ತು ಶರಣ ಫಿಲಾಸಫಿ ಬಹುದೊಡ್ಡ ನೈತಿಕ ಪಠ್ಯಗಳಾಗಿವೆ. ಭಾರತೀಯ ಮೌಲಿಕ ಶಿಕ್ಷಣದ ಅಂಶಗಳು ವಚನಗಳಲ್ಲಿ ಅಡಗಿದೆ. ಬದುಕಿನ ಯಶಸ್ಸಿಗೆ ವಚನಕಾರರು, ತತ್ವಪದಕಾರರು ಮುಂತಾದವರ ತಾತ್ವಿಕ ಚಿಂತನೆಗಳು ಅರಿಯುವುದು ಅಗತ್ಯ. ವಚನಗಳು ಕನ್ನಡದ ಸಾಂಸ್ಕೃತಿಕ ಪಠ್ಯಗಳಾಗಿವೆ ಎಂದರು.

ಜಾಗತಿಕ ತಾಪಮಾನ ಮೀರಿ ಉಷ್ಣತೆ ಉಲ್ಬಣಗೊಂಡು ಇಡೀ ವಿಶ್ವವೇ ಕುದಿಯುವಿಕೆಯಿಂದ ಬಳಲುತ್ತಿದೆ. ಪ್ರಕೃತಿ ವಿಕೋಪದ ಪರಿಣಾಮ ಈ ಕಾಲದಲ್ಲಿ ಅತ್ಯಂತ ಭೀಕರವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಭಾರತದಲ್ಲಿ ಆರ್ಥಿಕತೆ ಸೇರಿ ಹಲವು ಕ್ಷೇತ್ರಗಳಲ್ಲಿ ಹೊಸ ಸವಾಲುಗಳು ಎದುರಾಗುತ್ತಿವೆ. ಅದರ ಕುರಿತು ಆಳದ ಅಧ್ಯಯನ ಮತ್ತು ಸಂಶೋಧನೆ ಅಗತ್ಯ.

ಪಠ್ಯದ ಓದುವಿಕೆ ಇಡೀ ಸಮಾಜದ ಓದುವಿಕೆಯೂ ಆಗಿರುತ್ತದೆ. ಹಲವು ಸಂದಿಗ್ಧ ಸಂದರ್ಭ ಎದುರಿಸು ಎದೆಗಾರಿಕೆ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಹಲವು ಜ್ಞಾನ ಶಾಖೆಗಳು ಓದುವ ನಮ್ಮ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ಪಠ್ಯವಾಗಬೇಕಾದ ಅಗತ್ಯವಿದೆ ಎಂದರು.

ವೈದ್ಯ ಡಾ. ಶರಣ್ ದೇಶಮುಖ್ ಮಾತನಾಡಿ, ಮನಸ್ಸು ಮತ್ತು ದೇಹ ಎರಡೂ ಕ್ರಿಯಾಶೀಲತೆಯಿಂದ ಇಡುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ. ನಿರಂತರ ಓದು, ಸತ್ವಯುತ ಆಹಾರ, ಒಳ್ಳೆಯ ಯೋಚನೆ, ಸುತ್ತಲಿನ ನೈರ್ಮಲ್ಯ ಇವೆಲ್ಲವು ನಮ್ಮ ಆರೋಗ್ಯ ನಿರ್ಧರಿಸುತ್ತವೆ. ರೋಗ ಬಾರದ ದಾರಿಯ ಅರಿವು ಎಲ್ಲರಲ್ಲಿ ಬೆಳೆಯಲಿ ಎಂದು ಆಶಿಸಿದರು.

ಪ್ರಾಚಾರ್ಯರಾದ ಡಾ. ಭೀಮಾಶಂಕರ ಬಿರಾದಾರ ಮಾತನಾಡಿ ಧಾವಂತದ ಕಾಲಘಟ್ಟದಲ್ಲಿ ಬದುಕುತ್ತಿರುವ ನಮಗೆ ಪರಿಸರ,ಕಾಡು, ಹಕ್ಕಿಗಳು,ನೆಲ ಏನನ್ನೋ ಹೇಳುತ್ತಿರುತ್ತವೆ. ಇವೆಲ್ಲ ಕೇಳುವ ವ್ಯವಧಾನ, ತಾಳ್ಮೆ ನಮ್ಮಲ್ಲಿ ಬರಬೇಕಾದ ಶಿಕ್ಷಣ ಇಂದು ಅಗತ್ಯವಿದೆ. ಫೋಟೋಗ್ರಾಫಿ, ಕುಸುರಿ ಕಲೆ ಸೇರಿ ಈ ಕಾಲದ ತಂತ್ರಜ್ಞಾನದ ಕೆಲಸಗಳಲ್ಲೂ ಪ್ರಯೋಗಶೀಲತೆ ಇದ್ದರೆ ಅದಕ್ಕೊಂದು ವಿಶೇಷ ಮೌಲ್ಯ ಬರುತ್ತದೆ ಎಂದರು.

ಬಿಡಿಪಿಸಿ ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಕುರಕೋಟೆ ಅಧ್ಯಕ್ಷತೆ ವಹಿಸಿ ಮಾತನಾಡಿ ಬಸವಾದಿ ಶರಣರ ತತ್ವ ಸಿದ್ಧಾಂತಗಳು ನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಪಠ್ಯಕ್ರಮದ ಭಾಗವಾಗಲಿ ಎಂದರು.

ಬಿಡಿಪಿಸಿ ಅಧ್ಯಕ್ಷರಾದ ಅನಿಲಕುಮಾರ ರಗಟೆ ಉದ್ಘಾಟಿಸಿದರು. ಬಿಡಿಪಿಸಿ ಕೋಶಾಧ್ಯಕ್ಷ ಜಗನ್ನಾಥ ಖೂಬಾ, ಕಾರ್ಯದರ್ಶಿ ಅಶೋಕ ನಾಗರಾಳೆ, ಸಹಕಾರ್ಯದರ್ಶಿ ಸುನಿಲಕುಮಾರ ರಾಯವಾಡೆ, ನಿರ್ದೇಶಕರಾದ ಬಸವರಾಜ ಕೋರಕೆ, ವೀರಣ್ಣ ಹಲಶೆಟ್ಟೆ, ವಿವೇಕಾನಂದ ಹೊದಲೂರೆ, ಸುನೀಲ ಹೊಳಕುಂದೆ, ಪುಷ್ಪಾವತಿ ಮಾಮಾ, ಅಧ್ಯಾಪಕರಾದ ರೋಶನ್ ಬಿ, ವಿವೇಕಾನಂದ ಶಿಂಧೆ, ಶ್ರೀನಿವಾಸ ಉಮಾಪುರೆ, ಜಗದೇವಿ ಜವಳಗೆ, ಪ್ರಿಯಾ ಚೌಹಾಣ್, ನಾಗರಾಜ್ ನಾಸೆ, ಕೃಷ್ಣ ಗೌಳಿ, ಪ್ರವೀಣ್ ಬಿರಾದಾರ ಇದ್ದರು.

ಗಂಗಾಧರ ಸಾಲಿಮಠ ಸ್ವಾಗತಿಸಿದರು. ಸಂಗೀತಾ ಮಹಾಗಾವೆ ನಿರೂಪಿಸಿದರು . ಪ್ರಭಾಕರ ನವಗಿರೆ ವಂದಿಸಿದರು.



ಬಸವಕಲ್ಯಾಣ :– ತಾಲೂಕಿನ ಯರಬಾಗದ ನೀಲಗಂಗಾ ಆಯುರ್ವೇದ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜರುಗಿದ "ಗುರು ದರ್ಶನಾಶೀರ್ವಾದ" ಕಾರ್ಯಕ್ರಮವನ್ನು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ತಡೂಳಾ ಪೂಜ್ಯಶ್ರೀ ರಾಜೇಶ್ವರ ಶಿವಾಚಾರ್ಯರು. ಮುಚಳಂಬದ ಪೂಜ್ಯ ಶ್ರೀ ಪ್ರಣವಾನಂದ ಮಹಾಸ್ವಾಮಿಜಿ. ತಿಪುರಾಂತಿನ ಗವಿಮಠದ ಪೂಜ್ಯಶ್ರೀ ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಗಡಿಗೌಂಡಗಾವ ಪೂಜ್ಯ ಶ್ರೀ ಶಾಂತವೀರ ಶಿವಾಚಾರ್ಯರು. ಖೇಳಗಿ ಪೂಜ್ಯರಾದ ಮ.ನಿ.ಪ್ರ ಶಿವಲಿಂಗೇಶ್ವರ ಮಹಾಸ್ವಾಮಿಜಿ. ಮಂಠಾಳದ ಪೂಜ್ಯ ಶ್ರೀ ಚನ್ನಬಸವನಂದ ಸ್ವಾಮಿಜಿ. ಸದಲಾಪುರದ ಪೂಜ್ಯ ಶ್ರೀ ಸಿದ್ದಲಿಂಗ ಶಿವಾಚಾರ್ಯರು. ಕಿಟ್ಟಾ ಪೂಜ್ಯ ಶ್ರೀ ಸಿದೆಶ್ವರ ಶಿವಾಚಾರ್ಯರು. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾಟಟ ಅನಿತಾ ಮಹಾಜನ. ಕಾರ್ಯದರ್ಶಿ ಡಾ. ಶಂಕರ ಗೌಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.(ಮಲ್ಲಮ್ಮ ನುಡಿ ಚಿತ್ರ)

# ಜನಧ್ವನಿಗೆ ಲೇಖನಿಯೇ ಶಕ್ತಿ; ಸಮಾಜದ ಸಮಸ್ಯೆಗಳಿಗೆ ಪತ್ರಕರ್ತರು ಸ್ಪಂದಿಸಬೇಕು : ಪ್ರಕಾಶ ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ




ಸಮಾಜದಲ್ಲಿನ ಸಮಸ್ಯೆಗಳಿಗೆ ಪತ್ರಕರ್ತರು ಸೂಕ್ಷ್ಮವಾಗಿ ಸ್ಪಂದಿಸಿ, ಸತ್ಯಾಂಶವನ್ನು ನಿರ್ಭೀತಿಯಿಂದ ಜನರ ಮುಂದೆ ತರುವ ಮೂಲಕ ಜನಸಾಮಾನ್ಯರ ಧ್ವನಿಯಾಗಬೇಕು ಎಂದು ಶ್ರೀ ಗುರು ಪ್ರಸನ್ನ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಮಾಜಿ ಶಾಸಕ ಪ್ರಕಾಶ ಖಂಡ್ರೆ ಹೇಳಿದರು.

ಪಟ್ಟಣದ ಶ್ರೀ ಗುರು ಪ್ರಸನ್ನ ಮಹಾವಿದ್ಯಾಲಯದಲ್ಲಿಹಮ್ಮಿಕೊಂಡಿದ್ದ ಪತ್ರಕರ್ತರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾಗಿರುವ ಪತ್ರಿಕಾರಂಗವು ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಕಾರ್ಯವೈಖರಿಯನ್ನು ಜನರ ಮುಂದಿಡುವ ಮಹತ್ತರ ಜವಾಬ್ದಾರಿಯನ್ನು ಹೊಂದಿದೆ. ಯಾವುದೇ ವ್ಯವಸ್ಥೆಯಲ್ಲಿ ಆಗುವ ಲೋಪದೋಷಗಳನ್ನು ನಿರ್ಭೀತಿಯಿಂದ ಬಹಿರಂಗಪಡಿಸುವ ಶಕ್ತಿ ಪತ್ರಿಕಾರಂಗಕ್ಕಿದೆ. ಪತ್ರಕರ್ತರು ಜನಸಾಮಾನ್ಯರು, ಬಡವರ, ದೀನದುರ್ಬಲರ ನೋವು–ನಲಿವುಗಳಿಗೆ ಧ್ವನಿಯಾಗಿ ಕಾರ್ಯನಿರ್ವಹಿಸಬೇಕು "ನಾನು ಎರಡು ಬಾರಿ ಶಾಸಕನಾಗಿದ್ದ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸುದ್ದಿಗಳನ್ನು ಆಧರಿಸಿ ಕ್ಷೇತ್ರದ ಸಮಸ್ಯೆಗಳನ್ನು ಅರಿತು ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡಿದ್ದೇನೆ. ಪತ್ರಕರ್ತರು, ಶಿಕ್ಷಕರು ಮತ್ತು ಸೈನಿಕರ ಬಗ್ಗೆ ನನಗೆ ವಿಶೇಷ ಗೌರವವಿದೆ. ಪತ್ರಕರ್ತರು ಸದಾ ಸಮಾಜಕ್ಕೆ ಮಾತ್ರವಲ್ಲ, ಜನಪ್ರತಿನಿಧಿಗಳಿಗೂ ಸರಿದಾರಿಯನ್ನು ತೋರಿಸುವ ಕೆಲಸ ಮಾಡುತ್ತಾರೆ," ಎಂದು ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಹಾವಿದ್ಯಾಲಯದ ಪ್ರಾಂಶುಪಾಲರು ಹಾಗೂ ಆಡಳಿತಾಧಿಕಾರಿ ವಿಷ್ಣುವರ್ಧನ ಕೋಟೆ, 2009ರಲ್ಲಿ ಆರಂಭವಾದ ಶ್ರೀ ಗುರು ಪ್ರಸನ್ನ ಶಿಕ್ಷಣ ಸಂಸ್ಥೆ ಗಡಿಭಾಗದ ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿದೆ. ಮಹಿಳಾ ಸಬಲೀಕರಣಕ್ಕೆ ಸಂಸ್ಥೆ ವಿಶೇಷ ಆದ್ಯತೆ ನೀಡಿದೆ ಎಂದು ತಿಳಿಸಿದರು. ಹಿರಿಯ ಪತ್ರಕರ್ತ ವಿಜಯಕುಮಾರ ಪರ್ಮಾ, ಸಂಘದ ಪ್ರಧಾನ ಕಾರ್ಯದರ್ಶಿ ಸಂತೋಷ ಬಿಜಿ ಪಾಟೀಲ ಪತ್ರಿಕಾ ರಂಗದಲ್ಲಿನ ಜ್ವಲಂತ ಸಮಸ್ಯೆಗಳ ಬಗ್ಗೆ ಹಾಗೂ ಅದು ನಡೆದು ಬಂದ ದಾರಿ ಬಗ್ಗೆ ಮಾಹಿತಿ ಕೊಟ್ಟರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಪತ್ರಕರ್ತರನ್ನು ಹಾಗೂ ಎಲೆಕ್ಟ್ರಾನಿಕ ಮಾಧ್ಯಮದವರನ್ನು ಗೌರವಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಶಿವರಾಜ ಗಂದಗೆ, ಭಾಲ್ಕಿ ಮಂಡಲ ಅಧ್ಯಕ್ಷರಾದ ವೀರಣ್ಣ ಕಾರಬಾರಿ, ಬೀದರ'ಜಿಲ್ಲಾ ಕಾರ್ಯದರ್ಶಿ ಗೋವಿಂದರಾವ ಬಿರಾದಾರ, ಲುಂಬಿಣಿ ಗೌತಮ, ಪಂಡಿತ ಶಿರೋಳೆ, ದಿಗಂಬರ ಮಾನಕರಿ, ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಮಹಾವಿದ್ಯಾಲಯದ ಉಪನ್ಯಾಸಕರಾದ ಸತೀಶ ಬಿರಾದಾರ, ರಾಜಕುಮಾರ ಮೇತ್ರೆ, ಲತಾ ಬಿರಾದಾರ, ವೈಶಾಲಿ, ದೈವಶಾಲಾ, ರೇವಣಸಿದ್ದಯ್ಯಾ, ರಾಜಕುಮಾರ ಕಾರಬಾರಿ, ಗುರು ಮುಲಗೆ, ಶಿವಶರಣ ಕೋಟೆ, ಲೋಕೇಶ ಮಡಿವಾಳ, ಸಾದಿಯಾ, ಜಶಿಕಾ ಜಾಯ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮಹೇಶ ತೆಗಂಪೂರೆ ನಿರೂಪಿಸಿದರು, ಬಾಲರಾಜ ಶಿವಣಗೆರಿ ವಂದಿಸಿದರು.

# ಸಾಮಾಜಿಕ ಜಾಲತಾಣದವರು ಸಮಾಜಕ್ಕೆ ಸತ್ಯ ಮಾಹಿತಿ ನೀಡಬೇಕು : ಶ್ರೀಧರ ಎಸ್.ಆರ್

• ಮಲ್ಲಮ್ಮ ನುಡಿ ವಾರ್ತೆಗೋಕರ್ಣ



ಸಾಮಾಜಿಕಜಾಲತಾಣಗಳು ಸಮಾಜಕ್ಕೆ ಪೂರಕವಾಗಿರಬೇಕೇ ಹೊರತುಯಾವುದೇಕಾರಣಕ್ಕೂ ಕೋಮು ಸಂಘರ್ಷಕ್ಕೆ ಸಮಾಜಕ್ಕೆಅಶಾಂತಿ ಮೂಡಿಸುವುದಕ್ಕೆಅಲ್ಲ. ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕಜಾಲತಾಣಅತಿವೇಗವಾಗಿ ಮಾಹಿತಿಯನ್ನು ನೀಡುವ ಸಾಧನವಾಗಿದೆ. ಸಾಮಾಜಿಕಜಾಲತಾಣಕ್ಕೆ ಮಾಹಿತಿ ಹಂಚಿಕೊಳ್ಳುವ ಅವಸರದಲ್ಲಿ ಸಣ್ಣಪುಟ್ಟಎಡವಟ್ಟುಆದರೂಅದುದೊಡ್ಡದುಷ್ಪರಿಣಾಮ ಬೀರಲಿದೆಎಂದು ಪೊಲೀಸ್ ನಿರೀಕ್ಷಕ ಶ್ರೀಧರ ಎಸ್. ಆರ್. ಹೇಳಿದರು. ಪೊಲೀಸ್‌ಠಾಣೆಯಲ್ಲಿ ಸಾಮಾಜಿಕಜಾಲತಾಣ ಬಳಕೆದಾರರ ಜವಾಬ್ದಾರಿಗಳು ಎನ್ನುವ ವಿಷಯದಕುರಿತು ಸಾರ್ವಜನಿಕರೊಂದಿಗೆ ಹಮ್ಮಿಕೊಂಡಕಾರ್ಯಗಾರದಲ್ಲಿಅವರು ಮಾತನಾಡಿದರು.ಈ ಹಿಂದೆ ಪತ್ರಿಕಾ ವರದಿಗಾರರು ಕಳುಹಿಸಿದ ಸುದ್ದಿಯನ್ನುಅವರಕಚೇರಿಯಲ್ಲಿ ಪರಿಶೀಲನೆ ಮಾಡುತ್ತಿದ್ದರು.ಆದರೆ ಈಗ ಸಾಮಾಜಿಕಜಾಲತಾಣಏಕಕಾಲದಲ್ಲಿ ಲಕ್ಷಾಂತರಜನರನ್ನುತಲುಪುತ್ತದೆ.ಸಣ್ಣಅಹಿತಕರಘಟನೆಯನ್ನು ಪ್ರಚೋದನೆಗೆದೂಡುವ ಪೋಸ್ಟ್‌ಗಳು ಅಶ್ಲೀಲ ಪದಗಳು ಸಮಾಜದ ಶಾಂತಿಕೆಡಿಸುವ ಬರಹಗಳ ಬಗ್ಗೆ ಜಾಗೃತಿಇರಬೇಕುಎಂದರು.ಗೋಕರ್ಣದಲ್ಲಿಗಾಂಜಾ ಅಮಲು ಎಂದು ಸುದ್ದಿಯಾದರೆಅದು ಶ್ರೀ ಕ್ಷೇತ್ರಗೋಕರ್ಣಕ್ಕೆಕೆಟ್ಟ ಹೆಸರುತರುತ್ತದೆ.ನಾವು ದಾಳಿ ಮಾಡಿದಾಗ ಸ್ಥಳೀಯರು ಸಿಕ್ಕಿದವರು ಬೆರಳೆಣಿಕೆಯಷ್ಟು ಮಾತ್ರ.ಆದರೆ ಹೊರಗಿನಿಂದ ಬರುವ ಪ್ರವಾಸಿಗರು ಹಾಗೂ ಇತರರುಗಾಂಜಾವನ್ನುಗೋಕರ್ಣಕ್ಕೆತರುವಾಗಲೇಅಂತವರನ್ನು ಪೊಲೀಸರು ಹಿಡಿದು ಪ್ರಕರಣ ದಾಖಲಿಸಿಕೊಂಡಿದ್ದೇವೆ. ಆದರೆಯಾ–ರೊ ಮಾಡುವತಪ್ಪಿಗೆಗೋಕರ್ಣದ ಹೆಸರು ಹಾಳಾಗುತ್ತಿದೆ.ಹೀಗಾಗಿ ಇವುಗಳನ್ನೆಲ್ಲ ತಿಳಿದುಕೊಂಡು ಸಾಮಾಜಿಕಜಾಲತಾಣದವರು ಸಮಾಜಕ್ಕೆ ಸತ್ಯ ತಿಳಿಸಬೇಕಾಗಿದೆ. ಮತ್ತೊಬ್ಬರ ಮಾನ ಹಾನಿ ಮಾಡುವ ಪೋಸ್ಟ್‌ಗಳು ನಡೆದರೆ ಕಾನೂನು ರೀತಿಯಲ್ಲಿಕ್ರಮ ಕೈಗೊಳ್ಳಲಿದ್ದೇವೆ. ಹಾಗೇ ಸಮಾಜಕ್ಕೆಉತ್ತಮ ಸಂದೇಶಗಳನ್ನು ನೀಡುವ ಸಾಮಾಜಿಕ 'ಜಾಲತಾಣದವರಿಗೆ'ಜವಾಬ್ದಾರಿಯುತಡಿಜಿಟಲ್ ನಾಗರಿಕ ಪ್ರಶಸ್ತಿ' ಪೊಲೀಸ್ ಇಲಾಖೆ ವತಿಯಿಂದನೀಡಲಾಗುವುದುಎಂದು ಶ್ರೀಧರ ಎಸ್.ಆರ್. ತಿಳಿಸಿದರು.ಪ್ರತಿಜ್ಞಾವಿಧಿ ಸ್ವೀಕಾರ :ಕಾರ್ಯಾಗಾರಕ್ಕೆ ಆಗಮಿಸಿದವರನ್ನುಹಾಗೂ ಸಿಬ್ಬಂದಿಗಳಿಗೆ ಯಾವುದೇ ಸುಳ್ಳುಸುದ್ದಿ, ದ್ವೇಷ ಭಾಷಣ, ಕೋಮು ಸೌಹಾರ್ದತೆಗೆಧಕ್ಕೆಉಂಟುಮಾಡುವ ಪೋಸ್ಟ್ ಹಂಚಿಕೆ ಮಾಡುವುದಿಲ್ಲ. ಸಾಮಾಜಿಕಜಾಲತಾಣವನ್ನುಜವಾಬ್ದಾರಿಯಿಂದ ಬಳಸುತ್ತಿರುವುದು ಎಂದು ಪ್ರತಿಜ್ಞಾವಿಧಿ ಬೋಧಿಸಿದರು. ಈ ಸಂದರ್ಭದಲ್ಲಿ ಪಿಎಸ್‌ಐಗಳಾದ ಅನಿಲ ಬಿ.ಎಂ., ಸುನೀಲ ಪೊಲೀಸ್ ಸಿಬ್ಬಂದಿಗಳು, ವಿವಿಧ ಸಾಮಾಜಿಕ ಹಂಚಿಕೆದಾರರಾದದರ್ಶನ ನಾಯ್ಕ, ಪವನ ಗುನಗಾ, ಗಣೇಶ ನಾಯಕ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪ್ರತಿ ಮಗುವಿನ ಹುಟ್ಟುಹಬ್ಬಕ್ಕೆ 5–10 ಸಸಿ ನೆಡುವ ಸಂಕಲ್ಪ ಅಗತ್ಯ : ಸಂತೋಷ್ ಬಿ.ಜಿ. ಪಾಟೀಲ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಭಾಲ್ಕಿ ಯೋಜನೆಯ ವತಿಯಿಂದ, ಪೂಜ್ಯ ಡಾ. ಡಿ. ವೀರೇಂದ್ರಹೆಗ್ಗಡೆ ಹಾಗೂ ಮಾತೃಶ್ರೀ ಹೇಮಾವತಿ ಅಮ್ಮನವರ ಮಾರ್ಗದರ್ಶನದಲ್ಲಿ ನಗರದ ಹೊರವಲಯದಲ್ಲಿರುವ ಶ್ರೀ ಭಾಲ್ಕೇಶ್ವರ ಶಿಶು ವಿಹಾರ ಪ್ರಾಥಮಿಕ ಹಾಗೂ ಪ್ರೌಢಶಾಲೆ ಆವರಣದಲ್ಲಿ ಪರಿಸರ ಜಾಗೃತಿ ಮಾಹಿತಿ ಕಾರ್ಯಕ್ರಮ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಯೋಜನೆಯ ಕಾರ್ಯದರ್ಶಿ ಶಿವಶರಣಯ್ಯ ಸ್ವಾಮಿ ಅವರು ಸಸಿ ನೆಟ್ಟು ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉದ್ಘಾಟಕರಾಗಿ ಆಗಮಿಸಿದ್ದ ಜನಜಾಗೃತಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಶಿವಕುಮಾರ ಲೋಖಂಡೆ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದ್ದು, ಪ್ರಕೃತಿಯನ್ನು ಉಳಿಸುವ ಮನೋಭಾವವನ್ನು ಬಾಲ್ಯದಿಂದಲೇ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಹಾಗೂ ಜನಜಾಗೃತಿ ವೇದಿಕೆಯ ಜಿಲ್ಲಾ ಮಾಧ್ಯಮ ಸಲಹೆಗಾರ ಸಂತೋಷ್ ಬಿ.ಜಿ. ಪಾಟೀಲ ಮಾತನಾಡಿ, "ಕಣ್ಣಿಗೆ ಕಾಣುವ ಪ್ರತಿಯೊಂದೂ ಪರಿಸರದ ಭಾಗವೇ ಆಗಿದೆ. ನಾವು ನಮ್ಮ ದೇಹವನ್ನು ಎಷ್ಟು ಸ್ವಚ್ಛವಾಗಿ ಮತ್ತು ಸುಂದರವಾಗಿ ಕಾಪಾಡಿಕೊಳ್ಳುತ್ತೇವೆಯೋ, ಅದೇ ರೀತಿಯಲ್ಲಿ ನಮ್ಮ ಸುತ್ತಮುತ್ತಲಿನ ಪರಿಸರವನ್ನೂ ಸ್ವಚ್ಛವಾಗಿ ಕಾಪಾಡಬೇಕು. ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯ ನಾಶ ಮಾಡುತ್ತಿರುವುದು, ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸದೇ ಇರುವುದರಿಂದ ಪ್ರಕೃತಿಯ ಸಮತೋಲನ ಹದಗೆಡುತ್ತಿದೆ. ಇಂದು ನಾವು ಸೇವಿಸುತ್ತಿರುವ ಕಲುಷಿತ ಗಾಳಿ, ನೀರು ಮತ್ತು ಆಹಾರದಿಂದ ಅನೇಕ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿವೆ. ಗ್ಯಾಸ್ಟ್ರಿಕ್

ಸೇರಿದಂತೆ ಹಲವಾರು ಜೀವನಶೈಲಿ ಸಂಬಂಧಿತ ಕಾಯಿಲೆಗಳು ಸಾಮಾನ್ಯವಾಗುತ್ತಿರುವುದು ಆತಂಕಕಾರಿ ಬೆಳವಣಿಗೆ" ಎಂದು ಹೇಳಿದರು.

ಮುಂದುವರಿದು, "ಒಂದು ಕಾಲದಲ್ಲಿ 'ಮನೆಗೊಂದು ಮಗು – ಮಗುವಿಗೊಂದು ಗಿಡ' ಎಂಬ ಸಂದೇಶ ಇತ್ತು. ಆದರೆ ಇಂದಿನ ಅಗತ್ಯ 'ಪ್ರತಿ ಮಗುವಿನ ಹುಟ್ಟುಹಬ್ಬಕ್ಕೆ ಕನಿಷ್ಠ 5 ರಿಂದ 10 ಸಸಿಗಳನ್ನು ನೆಡುವ ಸಂಕಲ್ಪ' ಆಗಬೇಕು. ಪ್ರತಿಯೊಬ್ಬರೂ ವರ್ಷಕ್ಕೊಮ್ಮೆ ಗಿಡ ನೆಟ್ಟು ಅದನ್ನು ಪೋಷಿಸಿದರೆ ಮಾತ್ರ ಮುಂದಿನ ಪೀಳಿಗೆಗೆ ಹಸಿರು ಭೂಮಿಯನ್ನು ನೀಡಲು ಸಾಧ್ಯ" ಎಂದು ಕರೆ ನೀಡಿದರು.

ಶಾಲೆಯ ಶಿಕ್ಷಕ ಸಂಗೇಶ್ ಮುಳಗೆ ಮಾತನಾಡಿ, ವಿದ್ಯಾರ್ಥಿಗಳು ಪರಿಸರವನ್ನು ಪ್ರೀತಿಸುವ ಗುಣವನ್ನು ಬೆಳೆಸಿಕೊಳ್ಳಬೇಕು. ಮರ, ನೀರು ಹಾಗೂ ಜೀವಜಗತ್ತಿನ ಮಹತ್ವವನ್ನು ಅರಿತು ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಂಡರೆ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯರಾದ ಸೋಮನಾಥಪ್ಪ ಅಷ್ಟೂರೆ, ಶಾಲಾ ಆಡಳಿತ ಮಂಡಳಿಯ ನಿರ್ದೇಶಕಿ, ಶಿಕ್ಷಕಿ ಸುನೀತಾ ಸಂಗೋಳಗಿ, ಶಾಲೆಯ ಶಿಕ್ಷಕ ವರ್ಗ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಿವಾನಂದ ಲಕಾಟೆ ಕಾರ್ಯಕ್ರಮ ನಿರೂಪಿಸಿದರು, ಸುರೇಖಾ ಕಾಳಶೆಟ್ಟಿ ವಂದಿಸಿದರು.

# ಕಮಲನಗರದಲ್ಲಿ ಅಣ್ಣಾಭಾವು ಸಾಠೆ ಅವರ 106ನೇ ಜಯಂತ್ಯುತ್ಸವ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪಟ್ಟಣದ ವಿಶ್ವಕರ್ಮ ನಗರ ಬಡಾವಣೆಯಲ್ಲಿ ಶನಿವಾರ ಮಹಾನ್ ಮಾನವತಾವಾದಿ, ಸಾಹಿತಿ ಹಾಗೂ ಹೋರಾಟಗಾರ ಅಣ್ಣಾಭಾವು ಸಾಠೆ ಅವರ 106ನೇ ಜಯಂತ್ಯುತ್ಸವವನ್ನು ಸಡಗರ–ಸಂಭ್ರಮದಿಂದ ಆಚರಿಸಲಾಯಿತು.ಕಾರ್ಯಕ್ರಮದಲ್ಲಿ ಅಣ್ಣಾಭಾವು ಸಾಠೆ ಅವರ ಭಾವಚಿತ್ರಕ್ಕೆ ಜನಾರ್ದನ ಸಾವರ್ಕರ, ನರಸಿಂಗ್, ಶಂಕರ್, ಬಾಲಾಜಿ, ಚೌಹಾಣ್ ಪೂಜೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು.ಬಳಿಕ ಮುಖ್ಯ ಅತಿಥಿ ಜನಾರ್ದನ ಸಾವರ್ಕರ ಮಾತನಾಡಿ, "ಅಣ್ಣಾಭಾವು ಸಾಠೆ ಅವರ ಮೂಲ ಹೆಸರು ತುಕಾರಾಂ. ಅವರು ಆಗಸ್ಟ್ 1, 1920 ರಂದು ಸಾಂಗ್ಲಿ ಜಿಲ್ಲೆಯ ವಾಲವಾ ತಾಲೂಕಿನ ವಾಟೆಗಾಂವ್‌ನಲ್ಲಿ ಜನಿಸಿದರು.ಇವರು ಕೇವಲ ಒಂದೂವರೆ ದಿನ ಮಾತ್ರ ಶಾಲೆಗೆ ತೆರಳಿದ್ದರೂ, ಕಠಿಣ ಪರಿಸ್ಥಿತಿಗಳನ್ನು ಎದುರಿಸಿ 227 ಮೈಲಿ ನಡೆದು–ಕೊಂಡು ಮುಂಬೈ ತಲುಪಿ, ಅಲ್ಲಿ ಶ್ರಮಿಕ ವರ್ಗದ ಧ್ವನಿಯಾಗಿ ಬೆಳೆದರು" ಎಂದರು.ಮುಂದುವರಿದು ಮಾತನಾಡಿದ ಅವರು, "1944 ರಿಂದ 1950ರ ಅವಧಿಯಲ್ಲಿ ಸಾಹಿತ್ಯ ಸೇವೆ ಆರಂಭಿಸಿದ ಅಣ್ಣಾಭಾವು ಅವರು ಫಕೀರಾ, ವಾರಣೆಚಾ ವಾಘ, ಚಿತ್ರಾ, ಮಾಝಿ ಮುಂಬೈ ಸೇರಿದಂತೆ ಹಲವು ಜನಪ್ರಿಯ ಕಾದಂಬರಿಗಳು ಹಾಗೂ ಕಥಾಸಂಕಲನಗಳನ್ನು ರಚಿಸಿ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ" ಎಂದು ಸ್ಮರಿಸಿದರು.ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಪ್ರಭು, ವಿಠಲರಾವ್, ವಿಶಾಲ್ ಚವ್ಹಾಣ್, ರಾಜು, ಹರೀಶ್, ಕೃಷ್ಣ, ಸೂರಜ್ ಗಾಯಕ್‌ವಾಡ್, ಅಭಯ್ ಗಾಯಕ್‌ವಾಡ್, ಪ್ರಕಾಶ್, ಸಾಯಿನಾಥ್, ಗೌಳಿ ಸೇರಿದಂತೆ ಬಡಾವಣೆಯ ನೂರಾರು ನಾಗರಿಕರು ಉಪಸ್ಥಿತರಿದ್ದರು.

# ಶಿಕ್ಷಕರು ಎಂದಿಗೂ ನಿವೃತ್ತರಾಗುವುದಿಲ್ಲ: ಶಾಂತವೀರ ಶ್ರೀಗಳು



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಆ 1: ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹರಿಜನವಾಡ (ಗಾಜರಕೊಟ್)ದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಮುಖ್ಯ ಶಿಕ್ಷಕಿ ಶ್ರೀಮತಿ ಚನ್ನಮ್ಮ ಅವರ ಸೇವಾ ನಿವೃತ್ತಿ ಸನ್ಮಾನ ಸಮಾರಂಭವು ಶನಿವಾರ ಜರುಗಿತು.

ಕಾರ್ಯಕ್ರಮದ ಸಾನಿಧ್ಯವನ್ನು ಗುರುಮಠಕಲ್ ಖಾಸಮಠದ ಮನಿಪ್ರ ಶಾಂತವೀರ ಗುರು ಮುರುಘ ರಾಜೇಂದ್ರ ಮಹಾಸ್ವಾಮಿಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕ್ಷೇತ್ರ ಸಮನ್ವಯಾಧಿಕಾರಿ ಜಗದೀಶ್ ಸಜ್ಜನ ಪಾಲ್ಗೊಂಡು, ಚನ್ನಮ್ಮ ಅವರ ಶಿಕ್ಷಣ ಸೇವೆಯನ್ನು ಶ್ಲಾಘಿಸಿ, ನಿವೃತ್ತಿ ಜೀವನವು ಸುಖ, ಶಾಂತಿ ಹಾಗೂ ಉತ್ತಮ ಆರೋಗ್ಯದಿಂದ ಕೂಡಿರಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಕುರಿತು ಮಾತನಾಡಿದ ಖಾಸಮಠದ ಶ್ರೀಗಳು ಶಿಕ್ಷಕ ವೃತ್ತಿ ಸಮಾಜ ನಿರ್ಮಾಣದ ಪವಿತ್ರ ಸೇವೆಯಾಗಿದ್ದು, ವಿದ್ಯಾರ್ಥಿಗಳ ಬದುಕಿನಲ್ಲಿ ಜ್ಞಾನದ ದೀಪ ಬೆಳಗಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ಹೇಳಿದರು. ಗ್ರಾಮ ಪಂಚಾಯಿತಿ ಸದಸ್ಯರಿಂದ ರಾಷ್ಟ್ರಪತಿವರೆಗೆ ಪ್ರತಿಯೊಬ್ಬರ ಸಾಧನೆಯ ಹಿಂದೆ ಶಿಕ್ಷಕರ ಮಾರ್ಗದರ್ಶನ ಅಡಗಿದ್ದು, ಆದ್ದರಿಂದಲೇ ಶಿಕ್ಷಣ ಇಲಾಖೆಯನ್ನು ಎಲ್ಲ ಇಲಾಖೆಗಳ ತಾಯಿ ಎಂದು ಕರೆಯಲಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಶ್ರೀಮತಿ ಚನ್ನಮ್ಮ ಅವರು ತಮ್ಮ ಸೇವಾ ಅವಧಿಯಲ್ಲಿ ಶಿಸ್ತು, ಸಮಯಪ್ರಜ್ಞೆ, ಕರ್ತವ್ಯನಿಷ್ಠೆ ಹಾಗೂ ಕರುಣೆ-ಯ ಗುಣಗಳಿಂದ ನೂರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ್ದು, ಸಹೋದ್ಯೋಗಿಗಳಿಗೂ ಆದರ್ಶ ಶಿಕ್ಷಕಿಂ-ಯಾಗಿ ಗುರುತಿಸಿಕೊಂಡಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದ ಕೇಂದ್ರ ಬಿಂದು ಶ್ರೀಮತಿ ಚೆನ್ನಮ್ಮ ಮಾತನಾಡಿ 30 ವರ್ಷಗಳ ಸೇವೆ ತೃಪ್ತಿ ತಂದಿದೆ, ಸರಕಾರಿ ಸೇವೆಗೆ ಮೊದಲು ಜ್ಞಾನೋದಯ ಪಾಠ ಶಾಲೆಯಲ್ಲಿನ ಸೇವೆ ಮಾರ್ಗದರ್ಶನ ನೀಡಿದೆ, ಅಲ್ಲಿನ ಶಿಸ್ತು ಮತ್ತು ಕಲಿಕಾ ವಿಧಾನ ಒಳ್ಳೆಯ ಶಿಕ್ಷಕಿಯಾಗಿ ರೂಪಿಸಿದೆ ಎಂದು ತಮ್ಮ ಅನುಭವ ಹಂಚಿಕೊಂಡು, ಹಲವು ವರ್ಗಾವಣೆಗಳ ನಡುವೆ ಮಕ್ಕಳಿಗೆ ಉತ್ತಮ ಮೌಲ್ಯ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ ಎಂದು ಭಾವುಕ ನುಡಿಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಮುಖ್ಯಗುರು ಮಾಲಿನಿ, ಸಂತೋಷ ನೀರೆಟಿ, ಶಿಕ್ಷಣ ಸಂಯೋಜಕ ರವೀಂದ್ರ, ಬಾಲಪ್ಪ ಸಿರಿಗೆಂ ,ನಾರಾಯಣ ರೆಡ್ಡಿ ಪೆಣಟಿಜಜಜುಟಿಜಜ?ಪಾಟೀಲ್ ,ಹಣಮ್ಯ ನಾಯಕ್, ಕಿಷ್ಟರೆಡ್ಡಿ, ಚಂದಪ್ಪ ಜಾದವ್, ಅನಿಲ್ ಕುಮಾರ್, ಶಿವಾನಂದ ಬೂದಿ, ಮಲ್ಲಿಕಾರ್ಜುನ ಹಿರೇಮಠ, ಚಂದ್ರಶೇಖರ ಮಂಚಾಲ, ಶಶಿಕಾಂತ ಜನಾರ್ಧನ, ಮಾಣಿಕಪ್ಪ, ನಾಗೇಶ್, ಅಂಜನೇಯ, ಶ್ರೀನಿವಾಸ ಮಡಿವಾಳ ಹಾಗೂ ಶಿವರೆಡ್ಡಿ ಉಪಸ್ಥಿತರಿದ್ದರು.

ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರ ಸಂಘದ ಪದಾಧಿಕಾರಿಗಳು, ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು, ಶಿಕ್ಷಕರು, ವೀರಶೈವ ಲಿಂಗಾಯತ ಸಮಾಜದ ಸದಸ್ಯರು ಹಾಗೂ ಹಳೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಶ್ರೀಮತಿ ಚನ್ನಮ್ಮ ಅವರಿಗೆ ಸನ್ಮಾನಿಸಿ, ಆರೋಗ್ಯಪೂರ್ಣ ಹಾಗೂ ಸುಖಮಯ ನಿವೃತ್ತಿ ಜೀವನಕ್ಕಾಗಿ ಶುಭ ಹಾರೈಸಿದರು.

# ಸುಂಗಲಕರ್ ಕಾರ್ಯ ಇತರರಿಗೆ ಮಾದರಿ: ಎಇ ರಾಘವೇಂದ್ರ ಶ್ಲಾಘನೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ವಿದ್ಯುತ್ ಇಲಾಖೆ ಎನ್ನುವುದು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಮಹತ್ವದ ಕೆಲಸ ಮಾಡುವಂತದ್ದು, ಅಂತಹ ಇಲಾಖೆ ಸುಧೀರ್ಘ ಸೇವೆ ಮಾಡುವ ಮೂಲಕ ಅಯ್ಯಪ್ಪ ಸುಂಗಲಕರ್ ಅವರ ಸಹಪಾಟಿಗಳ ಮತ್ತು ಜನರ ವಿಶ್ವಾಸ ಗಳಿಸಿದ್ದಾರೆಂದು ಜೆಸ್ಕಾಂ ಇಲಾಖೆ ಎಇ ರಾಘವೇಂದ್ರ ಹೇಳಿದರು.

ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುಂಗಲಕರ್ ಸೇವಾ ನಿವೃತ್ತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಸಾರ್ವಜನಿಕರೊಂದಿಗೆ ನೇರ ಸಂಪರ್ಕ ಹೊಂದಿದ ಇಲಾಖೆಯಾಗಿರುವ ಜೆಸ್ಕಾಂನಲ್ಲಿ ಸಾಕಷ್ಟು ಸವಾಲುಗಳ ನಡುವೆ ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸುವ ಮೂಲಕ ಅಯ್ಯಪ್ಪ ಅವರು ಇತರರಿಗೆ ಮಾದರಿಯಾಗಿದ್ದಾರೆಂದರು.

ಸೇವಾ ನಿವೃತ್ತಿ ಹೊಂದಿ ಸನ್ಮಾನದ ಗೌರವ ಸ್ವೀಕರಿಸಿದ ಅಯ್ಯಪ್ಪ ಸುಂಗಲಕರ್ ಮಾತನಾಡಿ, ತಮ್ಮ ಸೇವಾವಧಿಯಲ್ಲಿ ಸಹಕಾರ ನೀಡಿದ ಎಲ್ಲರನ್ನು ನೆನಪಿಸಿಕೊಂಡರು. ಸರ್ಕಾರ ಮತ್ತು ಇಲಾಖೆ ನೀಡಿದ ಹೊಣೆಗಾರಿಗೆ ಸಮರ್ಥವಾಗಿ ನಿಭಾಯಿಸಿರುವ ತೃಪ್ತಿಗೆ ಇದೆ. ಇದಕ್ಕೆ ಹಿರಿ,ಕಿರಿ ಅಧಿಕಾರಿಗಳ ಮತ್ತು ಎಲ್ಲ ಸಿಬ್ಬಂದಿ ಸಹಕಾರವೇ ಕಾರಣವೆಂದು ಮುಕ್ತವಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಎಇ ನಂದಕುಮಾರ, ಎಇಇಗಳಾದ ಎ.ಟಿ.ರಾಠೋಡ್, ಸಂಜಿವಕುಮಾರ, ಸುರೇಖಾ, ಮಾರ್ಕಂಡೇಶ್ವರ, ಜೆಇ ದೇವಪ್ಪ, ವಿದ್ಯುತ್ ಇಲಾಖೆ ನೌಕರರ ಸಂಘದ ಅಧ್ಯಕ್ಷ ದೇವಿಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಮೋಹನ್ ಪವಾರ, ಎಸ್ ಸಿ,ಎಸ್ ಟಿ ನೌಕರರ ಸಂಗ ಮ ಘದ ಅಧ್ಯಕ್ಷ ಚಂದಪ್ಪ, ಕಾರ್ಯದರ್ಶಿ ಈರಪ್ಪ ದೊಡ್ಡಮನಿ, ಕೆಇಬಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಅಶೋಕ, ಯಾಸಿನ್, ಶರಣು ನಾಯ್ಕಲ್, ಓಂದೇವ ನಾಯ್ಕಲ್ ಇತರರು ಇದ್ದರು.

# ಭಾರತೀಯ ಸಂಸ್ಕೃತಿಯಲ್ಲಿ ಗುರುಪರಂಪರೆ ದೊಡ್ಡದು: ಶ್ರೀನಿರಂಜನಪ್ರಭುಸ್ವಾಮಿ




• ಮಲ್ಲಮ್ಮ ನುಡಿ ವಾರ್ತೆಕುರುಗೋಡು

ಭಾರತೀಯ ಸಂಸ್ಕುತಿಯಲ್ಲಿ ಗುರುಪರಂಪರೆ ದೊಡ್ಡದು ಎಂದು ಕುರುಗೋಡು ಕೊಟ್ಟೂರುಸ್ವಾಮಿ ಶಾಖಾಮಠದ ಪೀಠಾಧಿಪತಿ ಶ್ರೀನಿರಂಜನಪ್ರಭು ಮಹಾಸ್ವಾಮಿ ಅವರು ಹೇಳಿದರು.ಅವರು ಪಟ್ಟಣದ ಕೊಟ್ಟೂರುಸ್ವಾಮಿ ಶಾಖಾಮಠದಲ್ಲಿ ಜಗದ್ಗುರು ಕೊಟ್ಟೂರುಬಸವಲಿಂಗ ಮಹಾಸ್ವಾಮಿಗಳ ಅಪ್ಪಣೆಮೇರೆಗೆ ಹಮ್ಮಿಕೊಳ್ಳಲಾಗಿದ್ದ 5ನೇ ಶಿವಾನುವಸಂಪದ ಕಾರ್ಯಕ್ರಮದಲ್ಲಿ ಗುರುಪೂರ್ಣಿಮೆ ಮಹತ್ವದ ಕುರಿತು ನೆರೆದ ಭಕ್ತರಿಗೆ ಉತ್ತಮ ಸಂದೇಶ ನೀಡಿ ಮಾತನಾಡಿದ ಅವರು, ಇತ್ತೀಚಿನ ದಿನಮಾನಗಳಲ್ಲಿ ಗುರುಗಳು, ದೊಡ್ಡವರು, ಚಿಕ್ಕವರು ಎನ್ನುವ ಮನೋಭಾವನೆ ಇತ್ತೀಚಿಗೆ ಕಣ್ಮರೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಆದ್ದರಿಂದ ಎಲ್ಲರೂ ಗುರುಗಳನ್ನು ಪೂಜ್ಯಬಾವದಿಂದ ಕಾಣಬೇಕೆಂದು ಭಕ್ತರಿಗೆ ತಿಳಿಯಪಡಿಸಿದರು. ಅಲ್ಲದೆ ಕೊಟ್ಟೂರುಸ್ವಾಮಿ ಶಾಖಾಮಠ ನಿಮ್ಮಮಠ, ಮಠದ ಅಭಿವೃದ್ಧಿಗೆ ಜಾತಿ,ಮತ, ಪಂಥವನ್ನು ಎಣಿಸದೆ ಎಲ್ಲರೂ ಶ್ರಮಿಸಬೇಕೆಂದು ನೆರೆದ ಭಕ್ತರಿಗೆ ತಿಳಿಯಪಡಿಸಿದರು.

ಶಿಕ್ಷಣ ಇಲಾಖೆಯ ಉಪ-ನಿರ್ದೇಶಕ ಅಶೋಕ್ ಶಿವಾನಂದಪ್ಪ ಸಿಂದಿಗಿ ಮತ್ತು ಲೇಖಕರಾದ ಧಾರವಾಡದ ರಂಗನಾಥಎನ್. ವಾಲ್ಮೀಕಿ ಅವರು ಉಪನ್ಯಾಸನೀಡಿ ಮಾತನಾಡಿದ ಅವರು, ಯಾವುದೇ ಸಾಧನೆಗೆ ಹಿಂದೆ ಗುರುಬೇಕು, ಮುಂದೆ ಗುರಿ ಇರಬೇಕು ಅಂದಾಗ ಮಾತ್ರ ನಾವು-ನೀವೆಲ್ಲರೂ ಜೀವನದಲ್ಲಿ ಯಶಸ್ಸುಕಾಣಬಹುದಾಗಿದೆ. ಇಲ್ಲದಿದ್ದರೆ ನಮ್ಮ ಜೀವನದಲ್ಲಿ ಯಶಸ್ಸು ಸಾಧ್ಯವಿಲ್ಲ ಎಂದು ನುಡಿದರು.

ಬಿಆರ್.ಜಕಾತಿ ಹಾಗು ಎನ್.ಬಿ.ದ್ಯಾವಾಪುರ್ ಅವರು ಕಾರ್ಯಕ್ರಮದಲ್ಲಿ ಅನಾಥರು ಎಂಬ ಕಿರುಚಿತ್ರ ಪ್ರದರ್ಶನ ಮಾಡಿ ಎಲ್ಲರನ್ನು ಮನರಂಜಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಯಲ್ಲಾಪುರ ಗ್ರಾಮದ ಶ್ರೀಗುರುಲಿಂಗೇಶ್ವರ ಭಜನಾಮಂಡಳಿಯ ಕಲಾವಿದರು ತಮ್ಮ ಮಧುರಕಂಠದಿಂದ ಇಂಪಾಗಿ ಹಾಡುವುದುರ ಮೂಲಕ ನೆರೆದ ಭಕ್ತರಿಗೆ ಸಂಗೀತದ ರಸದೌತಣ ನೀಡಿದರು. ಕುರುಗೋಡು ಪಟ್ಟಣದ ಮಟ್ಟೆಪ್ಪನವರ ಮಲ್ಲಿಕಾರ್ಜುನ ಹಾಗು ಕುಟುಂಬದವರಿಂದ ದಾಸೋಹಸೇವೆಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಅಕ್ಕನಬಳದ ಮಹಿಳೆಯರು, ಶ್ರೀಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಮಹಾಂತ ಶಿವಯೋಗಿಗಳ ಜಯಂತಿ: ಮಾದಕ ವ್ಯಸನ ವಿರುದ್ಧ ವಿದ್ಯಾರ್ಥಿಗಳ ಜಾಗೃತಿ ಜಾಥಾ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

:ಆ.1: ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣದ ಸಂದೇಶ ಸಾರುವ ಉದ್ದೇಶದಿಂದ ಶ್ರೀ ಮನಿಪ್ರ ಮಹಾಂತ ಶಿವಯೋಗಿಗಳ ಜಯಂತಿ ಅಂಗವಾಗಿ ತಾಲೂಕು ಆಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಶನಿವಾರ ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ ನಡೆಯಿತು.ಜಾಥಾದಲ್ಲಿ ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳು ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತು ಘೋಷಣೆಗಳನ್ನು ಕೂಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಶಿಕ್ಷಕಿ ಭಾಗ್ಯಮ್ಮ, ಮಹಾಂತ ಶಿವಯೋಗಿಗಳು ವ್ಯಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ವಿಶೇಷವಾಗಿ ಶ್ರಮಿಸುತ್ತಿದ್ದರು. ಜೋಳಿಗೆ ಹಿಡಿದು ಜನರ ಮನೆ-ಮನೆಗೆ ತೆರಳಿ, ಬಿಡಿ, ಸಿಗರೇಟ್, ತಂಬಾಕು ಸೇರಿದಂತೆ ಮಾದಕ ವಸ್ತುಗಳನ್ನು ಜೋಳಿಗೆಗೆ ಹಾಕುವಂತೆ ಮನವಿ ಮಾಡುವ ಮೂಲಕ ವ್ಯಸನ ತ್ಯಜಿಸಲು ಪ್ರೇರೇಪಿಸುತ್ತಿದ್ದರು. ಅವರ ಆದರ್ಶವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಸಂಗವಾರ, ಗ್ರೇಡ್-2 ತಹಸೀಲ್ದಾರ್ ನರಸಿಂಹಸ್ವಾಮಿ, ಪೊಲೀಸ್ ಇಲಾಖೆಯ ಬೀರಲಿಂಗಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವಿದ್ಯಾರ್ಥಿ ನಿಲಯಗಳಲ್ಲಿ ಗುಣಮಟ್ಟದ ಸೌಲಭ್ಯಕ್ಕೆ ಶಾಸಕ ಹಂಪನಗೌಡ ಬಾದರ್ಲಿ ಕಟ್ಟುನಿಟ್ಟಿನ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು




ನಗರದ ನಗರಸಭೆಯ ಸಭಾಂಗಣದಲ್ಲಿ ತಾಲೂಕಿನ ವ್ಯಾಪ್ತಿಯಲ್ಲಿರುವ ಎಲ್ಲಾ ವಿದ್ಯಾರ್ಥಿ ನಿಲಯಗಳ (ಹಾಸ್ಟೆಲ್) ಅಧಿಕಾರಿಗಳ ಹಾಗೂ ವಾರ್ಡನ್ ಗಳ ಸಭೆಯು ಶಾಸಕ ಹಂಪನಗೌಡ ಬಾದರ್ಲಿ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಯಿತು.

ಸಭೆಯಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದ ಶಾಸಕರು, ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರ, ಶುದ್ಧ ಕುಡಿಯುವ ನೀರು, ಸ್ವಚ್ಛತೆ, ಸುರಕ್ಷತೆ, ಆರೋಗ್ಯಕರ ವಾತಾವರಣ, ಮೂಲಭೂತ ಸೌಲಭ್ಯಗಳು ಹಾಗೂ ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸುವಂತೆ ಸಂಬಂಧಿತ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಸರ್ಕಾರದ ಎಲ್ಲಾ ಸೌಲಭ್ಯಗಳು ಪ್ರತಿಯೊಬ್ಬ ವಿದ್ಯಾರ್ಥಿಗೂ ಸಮಯಕ್ಕೆ ಸರಿಯಾಗಿ ಮತ್ತು ಸಮರ್ಪಕವಾಗಿ ತಲುಪುವಂತೆ ಕ್ರಮವಹಿಸಬೇಕು. ವಿದ್ಯಾರ್ಥಿಗಳ ಹಿತಾಸಕ್ತಿಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ಅಧಿಕಾರಿಗಳು ಅತ್ಯಂತ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ವಿದ್ಯಾರ್ಥಿ ನಿಲಯಗಳಲ್ಲಿ ಕಂಡುಬರುವ ಯಾವುದೇ ಸಮಸ್ಯೆಗಳನ್ನು ವಿಳಂಬವಿಲ್ಲದೆ ತಕ್ಷಣವೇ ಪರಿಹರಿಸಲು ವಿಶೇಷ ಕಾಳಜಿ ವಹಿಸಬೇಕು. ವಿದ್ಯಾರ್ಥಿಗಳಿಗೆ ಸುರಕ್ಷಿತ, ಸ್ವಚ್ಛ ಮತ್ತು ಪ್ರೋತ್ಸಾಹದಾಯಕವಾದ ಉತ್ತಮ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸುವುದು ಅಧಿಕಾರಿಗಳ ಮುಖ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ವಿವಿಧ ವಸತಿ ನಿಲಯಗಳ ವಾರ್ಡನ್‌ಗಳು ಶಾಸಕರ ಮುಂದೆ ತಮ್ಮ ವಸತಿ ನಿಲಯಗಳಲ್ಲಿನ ಸಮಸ್ಯೆಗಳನ್ನು ಬಿಚ್ಚಿಟ್ಟರು. ಇದಕ್ಕೆ ಸ್ಪಂದಿಸಿದ ಶಾಸಕರು, ಅಗತ್ಯ ಕ್ರಮ ಕೈಗೊಳ್ಳಲು ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ ಅರುಣ್ ಹೆಚ್ .ದೇಸಾಯಿ, ನಗರಸಭೆಯ ಪೌರಾಯುಕ್ತ ಪಾಂಡುರಂಗ ಇಟಗಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ, ಡಿವೈಎಸ್ಪಿ ಚಂದ್ರಶೇಖರ ಜಿ. ನಾಯಕ, ಸೇರದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿದ್ಯಾರ್ಥಿ ನಿಲಯದ ಅಧಿಕಾರಿಗಳು ಇದ್ದರು.

# ಶಾಲಾ ಮಕ್ಕಳಿಗೆ ಕಲಿಕಾ ಪರಿಕರ ವಿತರಣೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಬೆಂಗಳೂರು ಯೂಥ್ ಫಾರ್ ಸೇವಾ ಸಂಸ್ಥೆ ತಂಡದ ವತಿಯಿಂದ ಪಟ್ಟಣದ ಗೋಸಲರಾಯನ ಪೇಟೆ ಸರಕಾರಿ ಕಿರಿಯ ಪ್ರಾಥಮಿಕ ಶಾಲಾ 30 ವಿದ್ಯಾರ್ಥಿಗಳಿಗೆ ಕಲಿಕೋಪರಣ ವಿತರಣೆ ಶನಿವಾರ ಮಾಡಲಾಯಿತು.

ಕಾರ್ಯಕ್ರಮದ ಉದ್ಘಾಟನೆ ಪುರಸಭೆ ಮಾಜಿ ಸದಸ್ಯೆ ಮಹಾಲಕ್ಷ್ಮಿ ಕರಿಯಪ್ಪ ಯಾದವ ಮಾಡಿದರು.

ಸಂಸ್ಥೆಯ ಇಂಜಿನಿಯರ್ ಶಾರದಾ ಪ್ರಸಾದ ಫಂಡಾ ಮಾತನಾಡಿ, ಸರ್ಕಾರಿ ಶಾಲೆಗಳ ಉಳಿವಿಗೆ ಸಮಾಜದ ಸರ್ವ ಸಮುದಾಯಗಳು ಒಗ್ಗೂಡಿ ಶ್ರಮಿಸಬೇಕು. ಸರ್ಕಾರದ ವತಿಯಿಂದ ಸರ್ಕಾರಿ ಶಾಲೆಗಳಿಗೆ ಬಿಸಿಯೂಟ, ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಪ್ರತಿಭಾನ್ವಿತ ಶಿಕ್ಷಕರು ಮುಂತಾದ ಸೌಲಭ್ಯಗಳಿದ್ದರೂ ವಿದ್ಯಾರ್ಥಿಗಳ ದಾಖಲಾತಿ ಕೊರತೆಗೆ ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯೇ ಕಾರಣವಾಗಿದೆ. ವಿದ್ಯಾರ್ಥಿಗಳು ಸರ್ಕಾರಿ ಶಾಲೆಯ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಂಡು ಉನ್ನತ ಸಾಧನೆ ಮಾಡಬೇಕು ಎಂದು ಹೇಳಿದರು.

ಶಿಕ್ಷಣ ಸಂಯೋಜಕ ಬಸವರಾಜ ಕರಡಿ ಮಾತನಾಡಿ, ಸಂಸ್ಥೆ ವತಿಯಿಂದ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ, ಲೇಖನಿಗಳು, ಪೆನ್ಸಿಲ್, ಬ್ಯಾಗ್ ಕೊಡುಗೆಯಾಗಿ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ, ಶಾಲಾ ಮುಖ್ಯ ಗುರುಗಳು ಶೃತಿ ಹಾಗೂ ಇಂಜಿನಿಯರ್ ಆಫೀಸಾ ಫಲಾಕ್ ಮಾತನಾಡಿದರು.

ಎಸ್ಡಿಎಂಸಿ ಅಧ್ಯಕ್ಷ ಗೋಸ್ಲಪ್ಪ, ಬಿಜೆಪಿ ಘಟಕ ಅಧ್ಯಕ್ಷ ಕರಿಯಪ್ಪ ಯಾದವ, ಬೆಂಗಳೂರು ವಿತ್ ಫಾರ್ ಸೇವಾ ಸಂಸ್ಥೆ ತಂಡದ ಸದಸ್ಯರು ಸೇರಿದಂತೆ ಶಾಲಾ ವಿದ್ಯಾರ್ಥಿಗಳು, ಸಹ ಶಿಕ್ಷಕರು ಉಪಸ್ಥಿತರಿದ್ದರು.

# ಪಿಡಿಒ ವೀರಭದ್ರಶೆಟ್ಟಿಗೆ ಬಿಳ್ಕೋಡುಗೆ



• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ಸಾರ್ವಜನಿಕ ವೃತ್ತಿ ಜೀವನದಲ್ಲಿ ಕಾರ್ಯನಿರ್ವಸುವುದು ಸವಾಲಿನ ಕೆಲಸವಾಗಿದ್ದು ಒತ್ತಡದ ನಡುವೆಯೂ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿ ಎಲ್ಲರ ಸಹಕಾರದಿಂದ ಉತ್ತಮ ಕಾರ್ಯ ನಿರ್ವಹಿಸಿದ ಸಂತೋಷ ನನ್ನದಾಗಿದೆ ಎಂದು ಗ್ರಾಪಂ ಅಭಿವೃದ್ಧಿ ಅಧಿಕಾರಿ ಎಂ ಎಸ್ ವೀರಭದ್ರ ಶೆಟ್ಟಿ ತಿಳಿಸಿದರು. ತಾಲೂಕಿನ ಪಂಚವಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಸುದೀರ್ಘ 5 ವರ್ಷಗಳ ಕಾಲ ಸೇವೆ ಸಲ್ಲಿಸಿ ಬೇರಡೆಗೆ ನಿಯೋಜನೆಗೊಂಡ ಹಿನ್ನೆಲೆಯಲ್ಲಿ ಕಚೇರಿ ಸಿಬ್ಬಂದಿಗಳು ಏರ್ಪಡಿಸಿದ್ದ ಬೀಳ್ಕೊಡಿಗೆ ಸಮಾರಂಭದಲ್ಲಿ ಮಾತನಾಡಿದರು. ಸೇವಾ ಅವಧಿಯಲ್ಲಿ ಎಲ್ಲಾ ಸಮುದಾಯಗಳ ಒಗ್ಗಟ್ಟಿನೊಂದಿಗೆ ಉತ್ತಮ ಆಡಳಿತ ನೀಡಲು ಸಹಕರಿಸಿದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರಿಗೆ ಜನ ಪ್ರತಿನಿಧಿಗಳಿಗೆ ಹಿರಿಯ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಇಂಜಿನಿಯರ್ ಉಪಯುಗದ ಸಹಾಯಕ ಕಾರ್ಯ ಪಾಲಕ ಎಂಜಿನಿಯರ್ ಮಲ್ಲಿಕಾರ್ಜುನ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು ಅಭಿವೃದ್ಧಿ ಅಧಿಕಾರಿ ಎಂ ಎಸ್ ವೀರಭದ್ರ ಶೆಟ್ಟಿ ದಂಪತಿಗಳಿಗೆ ಸನ್ಮಾನಿಸಿ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ತಾಪಂ ಸಹಾಯಕ ನಿರ್ದೇಶಕ ರಣಕರ್. ನೂತನ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಿಲ್ಪ ಶ್ರೀ. ಕಾರ್ಯದರ್ಶಿ ಸುಷ್ಮಾ. ಮಾಜಿ ತಾಪಂ ಸಾಮಾಜಿಕ ನ್ಯಾಯ ಮತ್ತು ಸ್ಥಾಯಿ ಸಮಿತಿ ಅಧ್ಯಕ್ಷ ಟಿ ಈರಯ್ಯ. ಮಾಜಿ ಟಿಎಪಿಸಿಎಂಎಸ್ ಅಧ್ಯಕ್ಷ ಲಕ್ಷ್ಮಣೇ ಗೌಡ. ಸೇರಿದಂತೆ ಗ್ರಾಪಂ ಮಾಜಿ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಸಿಬ್ಬಂದಿಗಳು ಸೇರಿದಂತೆ ಮಟ್ಟಿ ತರೋದು ಹಾಜರಿದ್ದರು.

# ಟೆಕ್ಸಾಸ್ ಕಂಪನಿಯಿಂದ ಮಕ್ಕಳ ಕಲಿಕಾ ಸಾಮಗ್ರಿ ವಿತರಣೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಬೆಂಗಳೂರು ಟೆಕ್ಸಾಸ್ ಇನ್ಸುಮೆಂಟ್ಸ್ ಹಾಗೂ ಯೂಥ್ ಫಾರ್ ಸೇವಾ ಸಂಸ್ಥೆ ತಂಡದ ವತಿಯಿಂದ ಪಟ್ಟಣ ಸಮೀಪದ ಜನತಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1 ರಿಂದ 7 ನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕೋಪರಣದ ಕಿಟ್ ವಿತರಣೆ ಶನಿವಾರ ಮಾಡಲಾಯಿತು.

ಟೆಕ್ಸಾಸ್ ಕಂಪನಿ ಪ್ರತಿನಿಧಿ ಅಖಿಲ್ ವಿದ್ಯಾರ್ಥಿಗಳಿಗೆ ಕಿಟ್ಗಳನ್ನು ವಿತರಿಸಿ ಮಾತನಾಡಿದ ಅವರು ನಮ್ಮ ಕಂಪನಿಯು ಅಮೇರಿಕಾ ಮೂಲದ ಸೆಮಿ ಕಂಡಕ್ಟರ್ ಕಂಪನಿಯಾಗಿದ್ದು, ಕರ್ನಾಟಕದ ಅನೇಕ ಭಾಗಗಳಿಗೆ ಸ್ಕೂಲ್ ಕಿಟ್ಗಳನ್ನು ನೀಡುತ್ತಿದ್ದು, ಇದೇ ಮೊದಲ ಬಾರಿಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮಕ್ಕಳಿಗೆ ವಿತರಿಸುತ್ತಿರುವುದು ನಮಗೆಲ್ಲ ತುಂಬಾ ಹರ್ಷ ತಂದಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಬನ್ನಿಗೋಳ ಸಮೂಹ ಸಂಪನ್ಮೂಲ ವ್ಯಕ್ತಿ, ಶ್ರೀನಿವಾಸ ರೆಡ್ಡಿ ಹಾಗೂ ಪ್ರಭಾರಿ ಮುಖ್ಯ ಗುರುಗಳಾದ ಶ್ರೀ ಮೌನೇಶ್ ಶಿಕ್ಷಕರ ಪರಿಶ್ರಮದ ಫಲವಾಗಿ ನಮ್ಮ ತಾಲೂಕಿನ 14 ಶಾಲೆಯ ಅದರಲ್ಲೂ ಬನ್ನಿಗೋಳ ವಲಯದ 5 ಶಾಲೆಗಳಿಗೆ ಇಂದು ಸ್ಕೂಲ್ ಕಿಟ್ಗಳನ್ನು ಮಕ್ಕಳಿಗೆ ವಿತರಿಸುತ್ತಿರುವುದಕ್ಕೆ ಇಲಾಖೆ ವತಿಯಿಂದ ಅಭಿನಂದನೆಗಳನ್ನು ತಿಳಿಸಿದರು, ಗ್ರಾಮೀಣ ಭಾಗದ ಮಕ್ಕಳಿಗೆ ಈ ರೀತಿಯ ಉತ್ತಮ ಗುಣಮಟ್ಟದ ಬ್ಯಾಗ್, ನೋಟ್ ಪುಸ್ತಕಗಳು ಅಲ್ಲದೇ ಬರವಣಿಗೆ ಸಾಮಗ್ರಿಗಳು ಸ್ಕೂಲ್ ಕಿಟ್ ನಲ್ಲಿದ್ದು ಮಕ್ಕಳ ಹಾಜರಾತಿ ಮತ್ತು ಕಲಿಕೆಗೆ ಪ್ರೇರಣೆ ನೀಡಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ಎಸ್ಡಿಎಂಸಿ ಅಧ್ಯಕ್ಷ ಅಮರೇಗೌಡ ಪಾಟೀಲ್ ವಹಿಸಿದ್ದರು.

ಪ್ರಭಾರಿ ಮುಖ್ಯಗುರುಗಳಾದ ಎಂ. ಮೌನೇಶಾಚಾರಿ ಶಿಕ್ಷಕರು ಪ್ರಾಸ್ತವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಟೆಕ್ಸಾಸ್ ಕಂಪನಿಯ ಗೌತಮ್ ಕಪಿಲ್ ಹಾಗೂ ಶಾಲಾ ಶಿಕ್ಷಕ ಸಿಬ್ಬಂದಿಗಳಾದ ರವಿಕುಮಾರ್, ಸಿದ್ರಾಮೇಶ್, ಗೀತಾ, ಸಣ್ಣ ಹನಮಂತಿ, ಜ್ಯೋತಿ ಸೇರಿದಂತೆ ಶಾಲಾ ಮಕ್ಕಳು ಉಪಸ್ಥಿತರಿದ್ದರು.

# ನ್ಯಾಯಾಲಯ ನಿರ್ಮಾಣದ ಸ್ಥಳ ಪರಿಶೀಲನೆ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಪಟ್ಟಣ ತಾಲೂಕ ಕೇಂದ್ರ ಸ್ಥಳವಾದ ಮೇಲೆ ಹಂತ ಹಂತವಾಗಿ ವಿವಿಧ ಕಚೇರಿಗಳು ಆರಂಭಗೊಂಡಿವೆ, ಸಾರ್ವಜನಿಕರಿಗೆ ಕಾನೂನಿನ ಸೇವೆಗಳು ದೊರಕಲು ತಾಲೂಕ ನ್ಯಾಯಾಲಯ ಮಂಜೂರಾಗಿದೆ. ಈ ಸಂಬಂಧ ಜಿಲ್ಲಾ ಸತ್ರ ನ್ಯಾಯಾಧೀಶರಾದ ಸೈಯದ್ ಬರಗುರ್ ರೆಹಮಾನ್ ಗುರುವಾರ ಭೇಟಿ ನೀಡಿ ನ್ಯಾಯಾಲಯ ಕಟ್ಟಡ ಕಟ್ಟಲು ತಹಶೀಲ್ದಾರ್ ಮಂಜುನಾಥ್ ಪಂಚಾಳ ಜೊತೆಗೂಡಿ ಇಲ್ಲಿಯ ಸರ್ವೆ ನಂಬರ್ 190ರ ಜಮೀನನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಶ್ರೀಕಾಂತ ಕುರಾಣಿ, ವಕೀಲರ ಸಂಘದ ತಾಲೂಕಾಧ್ಯಕ್ಷ ಮಂಜುನಾಥ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ನಾತೆ, ಸಿಪಿಐ ರವೀಂದ್ರನಾಥ, ಪಿಎಸ್ಐ ಬಸಲಿಂಗಪ್ಪ ಗೋಧಿಹಳ, ವಕೀಲರಾದ ಬಸವರಾಜ ಕೋಡಂಬಲ್, ಗ್ರಾಮ ಆಡಳಿತ ಅಧಿಕಾರಿ ಬಸವರಾಜ ಸಾಲಿಮಠ, ಯಾತೇಶಾಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಹಿರೇಗುತ್ತಿ ಹೈಸ್ಕೂಲ್ ವಿದ್ಯಾರ್ಥಿ ಇನ್ಸ್‌ಸ್ಪೈರ್ ಅವಾರ್ಡ್‌ನಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆಗೋಕರ್ಣ



2023–24ನೇಸಾಲಿನಇನ್‌ಸ್ಪೈರ್ ಅವಾರ್ಡ್‌ವಿಜ್ಞಾನವಸ್ತುಪ್ರದರ್ಶನ ದಲ್ಲಿಹಿರೇಗುತ್ತಿಸೆಕೆಂಡರಿಹೈಸ್ಕೂಲ್‌ನ ವಿದ್ಯಾರ್ಥಿಸೃಜನಶಂಕರಗೌಡರಾಷ್ಟ್ರ ಮಟ್ಟಕ್ಕೆಆಯ್ಕೆಯಾಗಿದ್ದಾರೆ.ವಿದ್ಯಾಥಿ ರ್ಗೆ ಶಾಲೆಯ ವಿಜ್ಞಾನ ಶಿಕ್ಷಕರಾದ ಮಹಾದೇವ ಬಿ. ಗೌಡಅವರು ಮಾರ್ಗದರ್ಶನ ನೀಡಿದ್ದರು.ಅವರ ಮಾರ್ಗದರ್ಶನದಲ್ಲಿ ಈ ಹಿಂದೆಯೂ ಹಲವು ವಿದ್ಯಾರ್ಥಿಗಳು ರಾಜ್ಯಹಾಗೂ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಗಳಿಸಿರುವುದು ವಿಶೇಷ.

ಸೃಜನಗೌಡಅವರ ಈ ಸಾಧನೆಗೆ ಹಾಗೂ ಮಾರ್ಗದರ್ಶಕ ಶಿಕ್ಷಕರಾದ ಮಹಾದೇವಗೌಡರವರಿಗೆ ಆಡಳಿತ ಮಂಡಳಿಯ ಅಧ್ಯಕ್ಷ ಹೊನ್ನಪ್ಪಎನ್. ನಾಯಕ, ಉಪಾಧ್ಯಕ್ಷ ಶ್ರೀಕಾಂತ ನಾಯಕ, ಕಾರ್ಯದರ್ಶಿ ಮೋಹನ ಬಿ.ಕೆರೆಮನೆ, ಆಡಳಿತ ಮಂಡಳಿಯ ಸರ್ವ ಸದಸ್ಯರು, ಗ್ರಾಮ ಪಂಚಾಯತ್ ನಿಕಟಪೂರ್ವಅಧ್ಯಕ್ಷ ಶಾಂತಾಎನ್. ನಾಯಕ, ಮಹಾಲಸಾ ಸಿದ್ಧಿವಿನಾಯಕ ಟೆಂಪಲ್‌ಟ್ರಸ್ಟ್‌ನ ಧರ್ಮದರ್ಶಿ ಸುನೀಲ್ ಪೈ, ಹೈಸ್ಕೂಲ್ ಮುಖ್ಯಾಧ್ಯಾಪಕ ವಿಶ್ವನಾಥ ಬೇವಿನಕಟ್ಟಿಇತರರು ಅಭಿನಂದಿಸಿದ್ದಾರೆ.

## ಪುರಸಭೆಯಲ್ಲಿ ವ್ಯಸನ ಮುಕ್ತ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ವಿವಿಧ ಮುಖಂಡರಿಂದ ಮಹಾಂತ ಜೋಳಿಗೆ ಹರಿಕಾರ ಹಾಗೂ ಇಲಕಲ್ಲ ಮಹಾಂತ ಶಿವಯೋಗಿ ಶ್ರೀಗಳ ಹುಟ್ಟುಹಬ್ಬ ಪ್ರಯುಕ್ತ ವ್ಯಸನ ಮುಕ್ತ ದಿನಾಚರಣೆ ಶನಿವಾರ ಆಚರಿಸಲಾಯಿತು.ಮಹಾಂತ ಶಿವಯೋಗಿ ಶ್ರೀಗಳ ಭಾವಚಿತ್ರಕ್ಕೆ ಪುರಸಭೆ ಸಿಬ್ಬಂದಿ ಚೆನ್ನಮ್ಮ ದಳವಾಯಿ ಮಠ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು. ಮಾಜಿ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಪಾಟೀಲ್ ಮಾತನಾಡಿ, ಮಹಾಂತ ಶ್ರೀಗಳ ಕೈಯಲ್ಲಿ ಬೆಳೆದವರು ನಾವು, ಜೊತೆಗೆ ಬಹುದಿನಗಳ ಒಡನಾಟವಿದ್ದು, ಸದಾ ಅವರ ಆಶೀರ್ವಾದ ನಮ್ಮ ಮೇಲಿದೆ, ದುಶ್ಚಟಗಳು ವ್ಯಕ್ತಿಯ ಬದುಕು, ಕುಟುಂಬ ಮಾತ್ರವಲ್ಲದೆ ಸಮಾಜದ ಮೇಲೂ ನೇರ ಪರಿಣಾಮ ಬೀರುತ್ತದೆ. ಇಲಕಲ್ಲ ಮಹಾಂತ ಸ್ವಾಮೀಜಿಯವರು ದುಶ್ಚಟಗಳನ್ನು ಜೋಳಿಗೆಗೆ ಹಾಕಿ ಬಿಡಿಸುವ ಮೂಲಕ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದ ಅಗ್ರಸ್ಥಾನದಲ್ಲಿದ್ದವರು. ರಾಜ್ಯ ಸೇರಿದಂತೆ ಇಡೀ ದೇಶದಲ್ಲಿಯೂ ಸಂಪೂರ್ಣ ವ್ಯಸನ ಮುಕ್ತ ವಾಗಲೆಂದು, ವ್ಯಸನದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಉಪನ್ಯಾಸ ನೀಡಿದರು.ಪುರಸಭೆ ಮುಖ್ಯಾಧಿಕಾರಿ ಪ್ರವೀಣ್ ಕುಮಾರ್ ಬೋಗಾರ್ ಹಾಗೂ ನೈರ್ಮಲ್ಯ ಅಧಿಕಾರಿ ಆರಿಫ್ ಉನ್ನಿಸ್ಸಾ ಪ್ರತಿಜ್ಞಾವಿಧಿಭೂಧಿಸಿದರು.ಮುಖಂಡರಾದ ಶಿವಕುಮಾರ ಮುಟ್ಟೂರ, ಮಲ್ಲಪ್ಪ ಮಾಟೂರ್, ಮಹೇಶ್ ವಸ್ತ್ರದ, ಉದಯಕುಮಾರ ಕೆ, ಲಿಂಗಪ್ಪ ಹಣಗಿ, ಶಿವಪ್ಪ ಸುಂಕದ, ಕೆ. ಸುರೇಶ, ಬಸವರಾಜ, ಮಹಾಂತೇಶ ಅಕ್ಷತಿ, ವಿಶ್ವನಾಥ್ ಹಣಗಿ, ಪುರಸಭೆ ವ್ಯವಸ್ಥಾಪಕ ಜಗದೀಶ ಜಿ. ಬಿರಾದಾರ, ಕಂದಾಯ ಅಧಿಕಾರಿ ಅಂತೋನಿರಾಜ್, ನಿಸಾರ್ ಅಹಮದ್, ಜಿಲಾನಿ ಪಾಷಾ, ಸೇರಿದಂತೆ ಪುರಸಭೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ನಿಧನ ವಾರ್ತೆ



ಮಲ್ಲಮ್ಮ ನುಡಿ ವಾರ್ತೆಔರಾದ : ತಾಲೂಕಿನ ಬೆಳಕುಣಿ (ಚೌ) ಗ್ರಾಮದ ಮಲ್ಲಿಕಾರ್ಜುನ ತಂದೆ ಸಂಗಪ್ಪಾ ಪಿಟ್ರೆ 59 ನಿಧನರಾಗಿದ್ದಾರೆ. ಮೃತರಿಗೆ ಓರ್ವ ಮಗಳು ಹಾಗೂ ಮಗ. ತಾಯಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಜೈಕಿಸಾನ್ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕ ಹಾಗೂ ಬಿ.ಎಲ್.ಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಶನಿವಾರ ಮಧ್ಯಾಹ್ನ 11 ಗಂಟೆಗೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ನೋಂದಣಿಯಾಗದ ಶಾಲಾ ವಾಹನಗಳು ರಸ್ತೆಯಲ್ಲಿ ಕಂಡರೇ ಜಪ್ತಿ ಮಾಡಲು ಆರ್‌ಟಿಒ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಜಿಲ್ಲೆಯಲ್ಲಿ ನೋಂದಣಿಯಾಗದೆ ಶಾಲಾ ವಾಹನಗಳು ರಸ್ತೆಯ ಮೇಲೆ ತಿರುಗಾಡಿದರೆ. ಕೂಡಲೇ ಅಂತಹ ಶಾಲಾ ವಾಹನವನ್ನು ಜಪ್ತಿ ಮಾಡಬೇಕು. ವಾಹನ ಇನ್ಸೂರೆನ್ಸ. ಫಿಟನೆಸ ಇರಬೇಕು. ಅನುಭವಿ ಡ್ರೈವರ ಇರಬೇಕು. ಟೇಕಕೇರ ಎಂಬ ವ್ಯಕ್ತಿಯೂ ಬಸನಲ್ಲಿ ಇರಬೇಕು. ಅನುಮತಿಯಷ್ಟೆ ಮಕ್ಕಳಿಗೆ ಸೀಟಿನಲ್ಲಿ ಕೂರಿಸಬೇಕು. ಹೆಚ್ಚಿನ ಮಕ್ಕಳನ್ನು ತುಂಬಿಸಬಾರದು. ಶಾಲಾ ವಾಹನಗಳಲ್ಲಿ ಯಾವುದೇ ತೊಂದರೆ ಕಂಡು ಬಂದರೆ ಶಾಲಾ ಮಾಲಿಕರಿಗೆ ನೋಟಿಸ ನೀಡಬೇಕು. ಮಕ್ಕಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಆರಟಿಒ ಅವರಿಗೆ ಜಗನ್ನಾತ ಹಲಮಡಗಿ ಅವರು ಹೇಳಿದರು.

ಆರಟಿಒ ಜಾಪರ ಸಾದಿಕ ಮಾತನಾಡಿ. ಜಿಲ್ಲೆಯಲ್ಲಿ 413 ಶಾಲಾ ವಾಹನಗಳು ಇವೆ. ಅದರಲ್ಲಿ 378 ವಾಹನಗಳು ನೋಂದಣಿಯಾಗಿವೆ. ಎಲ್ಲ ದಾಖಲೆಗಳಿವೆ. ಇನ್ನು 24 ವಾಹನಗಳು ನವಿಕರಿಸಬೇಕಿದೆ. ಅಲ್ಲದೆ 11 ವಾಹನಗಳು 15 ವರ್ಷ ಪೂರೈಸಿದ್ದರಿಂದ ಅವುಗಳನ್ನು ರದ್ದುಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು. 2025–26ನೇ ವರ್ಷದಲ್ಲಿ ಜಿಲ್ಲೆಯಾದ್ಯಂತ ಶಾಲಾ ವಾಹನಗಳಿಂದ 60 ಲಕ್ಷ ರೂಪಾಯಿ ದಂಡ ಮತ್ತು ತೆರಿಗೆ ವಿಸಲಾಗಿದೆ. 553 ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿಯನ್ನು ನೀಡಿದರು.

ಬೀದರ ಜಿಲ್ಲೆಯಲ್ಲಿ ಅನಕೃತ ಶಾಲೆಗಳು ನಡೆಯುತ್ತಿವೆ ಎಂಬ ದೂರುಗಳು ಬಂದಿವೆ ಅಂತಹ ಶಾಲೆಗಳ ವಿರುದ್ಧ ಕಾನೂನ ಅಡಿ ಕ್ರಮ ಕೈಗೊಳ್ಳವಂತೆ ಶಿಕ್ಷಣ ಇಲಾಕೆಯ ಅಕಾರಿಗಳಿಗೆ ಸೂಚನೆ ನೀಡಿದರು. ಇಂತಹ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಏನಾದರು ಆದರೆ ಯಾರು ಹೊಣೆ ಎಂದು ಹಲಮಡಗೆ ಅವರು ಪ್ರಶ್ನಿಸಿದರು. ಶಿಕ್ಷಣ ಇಲಾಕೆಯ ಅಕಾರಿಗಳು ಮಾತನ್ನು ಆಡಿ ಇಂತಹ ಶಾಲೆಗಳು ಕಂಡು ಬಂದರೆ ದೂರು ದಾಖಲಿಸಿ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗುತ್ತದೆ ಎಂದರು.

ಕನ್ನಡ ಭಾಷೆಯ ಶಾಲೆ ನಡೆಸುವ ಮಾನ್ಯತೆ ಪಡೆದು ಇಂಗ್ಲಿಷ ಭಾಷೆಯ ಶಾಲೆಗಳನ್ನು ನಡೆಸುತ್ತಿರುವ ಬಗ್ಗೆ ದೂರುಗಳು ಬಂದಿವೆ. ಕೂಡಲೇ ಇಂತಹ ಶಾಲೆಗಳು ಇದ್ದಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಜಗನ್ನಾತ ಹಲಮಡಗೆ ಹೇಳಿದರು. ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ತಿಗಳಿಗೆ ಶುಲ್ಕ ಹೆಚ್ಚಿಗೆ ಪಡೆಯುತ್ತಿದ್ದಾರೆ ಎಂಬ ದೂರುಗಳು ಇವೆ. ಈ ಕುರಿತು ಅದಿಕಾರಿಗಳು ಪರಿಶಿಲನೆ ಮಾಡಬೇಕು ಎಂದು ಸೂಚಿಸಿದರು.

ಬಸಗಳಲ್ಲಿ ಸ್ವಚ್ಛತೆ ಇರಲ್ಲ. ಬ್ರೇಕ ಲೈಟ ಇಲ್ಲ. ಓವರ ಸ್ಪೀಡ ನಡೆಸುತ್ತಾರೆ ಎಂಬ ದೂರುಗಳು ಇವೆ. ವಿದ್ಯಾರ್ತಿಗಳಿಗೆ ಬಸ ಪಾಸ ಇದೆ ಎಂದು ಹತ್ತಿಕೊಳ್ಳದೆ ಇರಬಾರದು. ಮಕ್ಕಳು ಕಂಡಲ್ಲಿ ಒಬ್ಬ ವಿದ್ಯಾರ್ತಿ ಇದ್ದರೂ ಬಸ ನಿಲ್ಲಸಿ ಕರೆದುಕೊಂಡು ಬರಬೇಕು ಎಂದು ಕೆಕೆಆರ್ಟಿಸಿ ನಿಯಂತ್ರಣ ಅಕಾರಿ ರಾಜೇಂದ್ರ ಜಾಧವ ಅವರಿಗೆ ಸದಸ್ಯರು ಸೂಚಿಸಿದರು. ಎಲ್ಲ ಬಸ ನಿಲ್ದಾಣಗಳಲ್ಲಿ ಶೌಚಾಲಯ. ಮಗುವಿಗೆ ಹಾಲುಣಿಸುವ ಕೇಂದ್ರ. ಸ್ವಚ್ಛತೆ ಇರುವಂತೆ ನೋಡಿಕೊಳ್ಳಬೇಕು. ಬೇರೆ ರಾಜ್ಯಗಳಿಂದಲೂ ಪ್ರಯಾಣಿಕರು ಬರುವುದರಿಂದ ನಿಲ್ದಾಣಗಳನ್ನು ಸ್ವಚ್ಛವಾಗಿ ಇಡಬೇಕು ಎಂದು ರಾಜ್ಯ ಮಕ್ಕಳ ಆಯೋಗದ ಸದಸ್ಯ ಜಗನ್ನಾತ ಹಲಮಡಗಿ ಹೇಳಿದರು.

ಬೀದರ ಜಿಲ್ಲೆಯ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಸಾಬೂನು. ಎಟ್ಟೆ. ಬೆಡ ಶೀಟ ಸರಿಯಾಗಿ ನೀಡುತ್ತಿಲ್ಲ. ನೋಟಬುಕ ವಿತಿರಸಿಲ್ಲ. ಸರಕಾರದಿಂದ ಅನುದಾನ ನೀಡಿದರು ಮಕ್ಕಳಿಗೆ ವಿತರಿಸಿಲ್ಲ. ಈ ವಿಷಯದಲ್ಲಿ ಟೆಂಡರ ದಾರನಿಗೆ ನೋಟಿಸ ಜಾರಿಮಾಡಬೇಕು ಎಂದು ರಾಜ್ಯ ಮಕ್ಕಳ ಆಯೋಗದ ಸದಸ್ಯ ಜಗನ್ನಾತ ಹಲಮಡಗಿ ಹೇಳಿದರು. ಖುದ್ದು ನಾನೇ ವಸತಿ ನಿಲಯಗಳಿಗೆ ಬೆಟಿ ನೀಡುವೆ. ಯಾವಾಗ ಬೆಟಿ ನೀಡುವ ಎಂಬುದು ಗೊತ್ತಿಲ್ಲ. ಹೀಗಾಗಿ ಮಕ್ಕಳಿಗೆ ಸವಲತ್ತು ಒದಗಿಸಬೇಕು ಎಂದರು.

ಮೂರು ತಿಂಗಳಲ್ಲಿ ಕಾರ್ಮಿಕ ಇಲಾಕೆಯ ಅದಿಕಾರಿಗಳು ಕೇವಲ ಮೂರು ಪ್ರಕರಣ ಮಾತ್ರ ದಾಕಲಿಸಿದ್ದಾರೆ. ದಾಬಾ. ಹೊಟೆಲ. ಗ್ಯಾರೇಜ. ಕಂಪನಿ. ಕಿರಾಣಿ ಅಂಗಡಿ. ಇತ್ಯಾದಿಗಳಲ್ಲಿ ಬಾಲ ಕಾರ್ಮಿಕರನ್ನು ದುಡಿಸಿಕೊಂಡರೆ ಅವರ ವಿರುದ್ಧ ಕಾನುನಿನಡಿ ಕ್ರಮ ಕೈಗೊಳ್ಳಬೇಕು ಎಂದು ಕಾರ್ಮಿಕ ಇಲಾಕೆಯ ಅಕಾರಿಗೆ ಸೂಚನೆ ನೀಡಿದರು. ಪಿಯು ಕಾಲೆಜುಗಳಲ್ಲಿ ಮಕ್ಕಳಿಗೆ ಆಟಗಳಲ್ಲಿ ಸ್ಪದೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿ ರಾಜ್ಯ. ರಾಷ್ಟ್ರ ಮಟ್ಟದಲ್ಲಿ ಮಕ್ಕಳು ಸ್ಪದೆಗಳಲ್ಲಿ ವಿಜೇತರಾಗಿ ಜಿಲ್ಲೆಯ ಹೆಸರಿಗೆ ಕೀರ್ತಿ ತರುವಂತೆ ಮಾಡಬೆಕು ಎಂದರು.

ಜಿಲ್ಲಾ ಮಕ್ಕಳ ರ್‍ಷಕಣಾದಿಕಾರಿ ಶಾರದಾ ಕಲ್ಮಲಕರ. ಕೆಕೆಆರಟಿಸಿ ವಿಭಾಗೀಯ ನಿಯಂತ್ರಣ ಅಕಾರಿ ರಾಜೇಂದ್ರ ಜಾಧವ. ಸಿಪಿಐ ಪಾಲಾಕ್ಷಯ್ಯ. ಬೀದರ ಬಿಇಒ ಮದರ ಖಾನ. ಪಿಎಂ ಪೋಷಣ ಸಹಾಯಕ ನಿರ್ದೇಶಕ ಜಾಕಿರ ಹುಸೇನ. ವಿವಿದ ಇಲಾಕೆಗಳ ಅದಿಕಾರಿಗಳಾದ ಅರ್ಜುನ ಸಿತಾಳಗೇರಾ. ಶಿವಕುಮಾರ. ರತನಸಿಂಗ ಠಾಕೂರ. ರಮೇಶ ಬಿರಾದಾರ. ಉಮೇಶ ಕೆ. ಸಾರಿಗೆ ಇಲಾಕೆಯ ಅದಿಕಾರಿಗಳಾದ ಶ್ರೀಮತಿ ರಾಕಾ. ರಾಜಕುಮಾರ. ಪ್ರಫುಲ. ಪ್ರಕಾಸ ಎಚ್. ಮಲ್ಲಿಕಾರ್ಜುನ ಎಂ ಮತ್ತು ಇತರರು ಇದ್ದರು.

## ರೈತರಿಗೆ ಬೆಳೆಯ ವಿಮಾ ಪರಿಹಾರ ಕಂತು ಬಿಡುಗಡೆ ಮಾಡಲು ಪೂಜಾ ಮದನೂರ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



2025–26ನೇ ಸಾಲಿನ ಪ್ರಧಾನ ಮಮಂತ್ರಿ ಫಸಲ್ ಭೀಮಾ ಯೋಜನೆಯಡಿ ವಿಮೆ ಪಾವತಿಸಿರುವ ಕಮಲನಗರ ತಾಲೂಕಿನ ರೈತರಿಗೆ ತೊಗರಿ ಬೆಳೆಯ ಅಂತಿಮ ವಿಮಾ ಪರಿಹಾರ ಕಂತಿನ ಹಣವನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಮದನೂರ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರಾದ ಶ್ರೀಮತಿ ಪೂಜಾ ಗುಂಡಪ್ಪಾ ಬೇಲ್ಲೆ (ಮದನೂರ) ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, "ಬೀದರ್ ಜಿಲ್ಲೆಯ ಇತರ ಎಲ್ಲಾ ತಾಲೂಕುಗಳಿಗೆ ವಿಮಾ ಕಂತಿನ ಹಣವನ್ನು ಬಿಡುಗಡೆ ಮಾಡಿರುವ ಸರ್ಕಾರ, ಕಮಲನಗರ ತಾಲೂಕಿನ ವಿಷಯದಲ್ಲಿ ಮಾತ್ರ ಮಲತಾಯಿ ಧೋರಣೆ ತೋರುತ್ತಿರುವುದು ತೀವ್ರ ಖಂಡನೀಯ. ಒಂದೆಡೆ ಹವಾಮಾನ ವೈಪರೀತ್ಯ ಹಾಗೂ ಮಳೆಯ ಅಭಾವದಿಂದಾಗಿ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದರೆ, ಇನ್ನೊಂದೆಡೆ ರೈತರನ್ನು ರಕ್ಷಿಸಬೇಕಾದ ಸರ್ಕಾರವೇ ತೊಗರಿ ಬೆಳೆಯ ಅಂತಿಮ ವಿಮಾ ಪರಿಹಾರ ಕಂತನ್ನು ಬಿಡುಗಡೆ ಮಾಡದೆ ಕೃಷಿಕರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ," ಎಂದು ಆಕ್ರೋಶ ವ್ಯಕ್ತಪಡಿಸಿದರು.

"ನಮ್ಮ ನಾಡಿನ ಬೆನ್ನೆಲುಬಾಗಿರುವ ಅನ್ನದಾತರಿಗೆ ಅನ್ಯಾಯವಾಗುತ್ತಿರುವುದನ್ನು ಸಹಿಸಲು ಸಾಧ್ಯವಿಲ್ಲ. ಜಿಲ್ಲೆಯ ಇತರ ಭಾಗಗಳಿಗೆ ತಲುಪಿರುವ ಹಕ್ಕು ಕಮಲನಗರ ತಾಲೂಕಿನ ರೈತರಿಗೂ ತಕ್ಷಣ ಸಿಗಬೇಕು. ಆದ್ದರಿಂದ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಹಾಗೂ ಜಿಲ್ಲಾಧಿಕಾರಿಗಳು ತಕ್ಷಣವೇ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ, ಬಾಕಿ ಇರುವ ತೊಗರಿ ಬೆಳೆಯ ಅಂತಿಮ ವಿಮಾ ಪರಿಹಾರ ಕಂತಿನ ಹಣವನ್ನು ನೇರವಾಗಿ ರೈತರ ಖಾತೆಗೆ ಜಮೆ ಮಾಡಲು ಕ್ರಮ ಕೈಗೊಳ್ಳಬೇಕು," ಎಂದು ಅವರು ಆಗ್ರಹಿಸಿದ್ದಾರೆ.

# ವಿಜಯ ಮಾಂತೇಶ ಶ್ರೀಗಳು ವ್ಯಸನ ಮುಕ್ತ ಸಮಾಜ ಕಂಡ ಕನಸು ನನಸಾಗಬೇಕು : ರಾಮರಡ್ಡೆಪ್ಪ ಹಾಲಕೇರಿ

• ಮಲ್ಲಮ್ಮ ನುಡಿ ವಾರ್ತೆ ಕುಕನೂರ



ವಿಜಯ ಮಾಂತೇಶ ಶ್ರೀಗಳು ವ್ಯಸನ ಮುಕ್ತ ಸಮಾಜ ಕಂಡ ಕನಸು ನನಸಾಗಬೇಕು, ಪ್ರತಿವರ್ಷ ಆಗಸ್ಟ್ 1 ಬಂದರೆ ಕರ್ನಾಟಕದಾದ್ಯಂತ ಒಂದು ವಿಶಿಷ್ಟ ಜಾಗೃತಿಯ ಅಲೆ ಎದ್ದೇಳುತ್ತದೆ. ಅದು ವ್ಯಸನ ಮುಕ್ತ ದಿನಾಚರಣೆ. ಎಂದು ಇಟಗಿ ಪಿ ಎಂ ಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯಶಿಕ್ಷಕ ರಾಮರಡ್ಡೆಪ್ಪ ಹಾಲಕೇರಿ ಹೇಳಿದರು. ತಾಲೂಕಿನ ಇಟಗಿ ಗ್ರಾಮದ ಪಿ ಎಂ ಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದವರು, ವ್ಯಸನ ಮುಕ್ತ ದಿನಾಚರಣೆ ಕೇವಲ ಒಂದು ಸರ್ಕಾರಿ ಕಾರ್ಯಕ್ರಮವಲ್ಲ, ಇದು ಒಂದು ಸಾಮಾಜಿಕ ಚಳವಳಿ. ಆ ದಿನವನ್ನು ಬಾಗಲಕೋಟೆ ಜಿಲ್ಲೆಯ ಇಳಕಲ್ಲ– ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಲಿಂಗೈಕ್ಯ ಡಾ. ವಿಜಯ ಮಹಾಂತಪ್ಪ ಶ್ರೀಗಳ ಜನ್ಮದಿನದ ಪ್ರಯುಕ್ತ ಅವರ ಹೆಸರಿನಲ್ಲಿ ಆಚರಿಸಲಾಗುತ್ತದೆ.ಈ ಒಂದು ದಿನಾಚರಣೆಯ ಹಿಂದೆ ಒಬ್ಬ ಮಹಾನ್ ಚೇತನದ ಇಡೀ ಬದುಕಿನ ತಪಸ್ಸು ಇದೆ, ಅವರ ದೂರದೃಷ್ಟಿ ಇದೆ, ಯುವಕರ ಬಗೆಗಿನ ಅವರ ಕಾಳಜಿ ಇದೆ.ಲಿಂಗೈಕ್ಯ ವಿಜಯ ಮಹಾಂತೇಶ್ವರ ಶ್ರೀಗಳು ಕೇವಲ ಮಠಾಧೀಶರಾಗಿರಲಿಲ್ಲ, ಅವರು ಒಬ್ಬ ಸಮಾಜ ಸುಧಾರಕರು, ಒಬ್ಬ ಚಿಂತಕರು, ಯುವ ಚೇತನದ ಹರಿಕಾರರು.ಮಠವೆಂದರೆ ಕೇವಲ ಪೂಜೆ, ಪುನಸ್ಕಾರ, ದೀಕ್ಷೆ ನೀಡುವ ಸ್ಥಳವಲ್ಲ, ಮಠವೆಂದರೆ ಸಮಾಜವನ್ನು ತಿದ್ದುವ ಪ್ರಯೋಗಶಾಲೆ ಎಂದು ಅವರು ನಂಬಿದ್ದರು. ಅವರ ಕಾಲದಲ್ಲಿ ಮತ್ತು ಇಂದಿಗೂ ಸಮಾಜವನ್ನು ಬಾಧಿಸುತ್ತಿರುವ ಬಹುದೊಡ್ಡ ಪಿಡುಗು ಎಂದರೆ ವ್ಯಸನ.ಮದ್ಯಪಾನ, ಗುಟ್ಕಾ, ತಂಬಾಕು, ಮಾದಕ ದ್ರವ್ಯಗಳು ಇಂದು ಹಳ್ಳಿ ಹಳ್ಳಿಗಳಿಗೂ ನುಗ್ಗಿವೆ. ಯುವಕರು ಅವಕ್ಕೆ ದಾಸರಾಗಿ ದಾರಿ ತಪ್ಪುತ್ತಿದ್ದಾರೆ. ಒಂದು ಕುಟುಂಬದ ಒಬ್ಬ ವ್ಯಕ್ತಿ ವ್ಯಸನಿಯಾದರೆ ಆ ಇಡೀ ಕುಟುಂಬವೇ ನಾಶವಾಗುತ್ತದೆ. ಆರ್ಥಿಕವಾಗಿ ದಿವಾಳಿಯಾಗುತ್ತದೆ, ಸಾಮಾಜಿಕವಾಗಿ ಅವಮಾನಕ್ಕೆ ಒಳಗಾಗುತ್ತದೆ. ಈ ಸತ್ಯವನ್ನು ಶ್ರೀಗಳು ಅರಿತಿದ್ದರು. ಹೀಗಾಗಿ ಅವರು ತಮ್ಮ ಇಡೀ ಬದುಕನ್ನು ವ್ಯಸನಮುಕ್ತ ಸಮಾಜದ ನಿರ್ಮಾಣಕ್ಕೆ ಮುಡಿಪಾಗಿಟ್ಟರು ಎಂದರು.ಈ ಸಂದರ್ಭದಲ್ಲಿ ಶಿಕ್ಷಕರಾದ ಸಂತೋಷ್ ಕುಮಾರಿ, ನಾಗರಾಜ ಸೋನಗ, ಬಸಮ್ಮ ಮೇಟಿ, ರಂಗಪ್ಪ ಓಲೇಕಾರ್, ವಿರುಪಾಕ್ಷಪ್ಪ ಮ್ಯಾಳಿ, ಜಯಪ್ಪ , ಶ್ರೀಶೈಲಪ್ಪ ತೆಗ್ಗಿ , ರೋಹಿಣಿ ಸಿ , ಶ್ರೀದೇವಿ ಬೆಳದಡಿ,ಜಗದೇಶ್ ಅಜ್ಜಣ್ಣನವರ್, ಮಹೇಶ್ ರಾಮದುರ್ಗ, ಮುರಾರಿ ಭಜಂತ್ರಿ, ಮಂಜುನಾಥ್ ಜಗತಾಪ್, ಶ್ವೇತಾ,ಪೂಜಾ, ಭೀಮಾಂಬಿಕಾ, ಕಿರಣ್, ರವಿಕಿರಣ್, ಸಿಂಧು, ರೋಹಿಣಿ, ಸುಶ್ಮಿತಾ, ರೇಣುಕಾ, ಹಾಗೂ ರಹಿಮಾನಸಾಬ್, ಶಾಲಾ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದ್ದರು.

## ಸಾರಿಗೆ ಇಲಾಖೆಯಲ್ಲಿ ಉತ್ತಮವಾಗಿ ಸೇವೆ ಮಾಡಿದ ತೃಪ್ತಿನನಗಿದೆ: ಕೆ.ದೇವರೆಡ್ಡಿ

• ಮಲ್ಲಮ್ಮ ನುಡಿ ವಾರ್ತೆಕುರುಗೋಡು



ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಸತತ 34 ವರ್ಷಗಳ ಕಾಲ ಜನರಿಗೆ ಪ್ರಮಾಣಿಕವಾಗಿ ಸೇವೆ ಮಾಡಿದ ತೃಪ್ತಿ ನನಗಿದೆ ಎಂದು ಕುರುಗೋಡು ಬಸ್‌ಡಿಪೋದಲ್ಲಿ ಕಾರ್ಯನಿರ್ವಹಿಸುವ ಸಂಚಾರನಿರೀಕ್ಷಕ [ಟ್ರಾಫಿಕ್‌ಇನ್ಸಪೆಕ್ಟರ್] ಕೆ.ದೇವರೆಡ್ಡಿ ಅವರು ನುಡಿದರು.

ಅವರು ಕುರುಗೋಡು ಬಸ್‌ಡಿಪೋದಲ್ಲಿ ತಮ್ಮ ಸೇವೆಯಿಂದ ಅವರು ಇಂದು ವಯೋವೃತ್ತಿ ಹೊಂದಿದ ಹಿನ್ನಲೆಯಲ್ಲಿ ಕುರುಗೋಡು ಬಸ್‌ಡಿಪೋ ಸಿಬ್ಬಂದಿವರ್ಗದವರಿಂದ ಹಮ್ಮಿಕೊಳ್ಳಲಾಗಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸತತ 34 ವರ್ಷಗಳ ಕಾಲ ಸಾರಿಗೆ ಇಲಾಖೆಯಲ್ಲಿ ಸೇವೆಮಾಡುವ ಸಮಯದಲ್ಲಿ ಇಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು ನನಗೆ ತುಂಬಾ ಸಹಕಾರ ನೀಡಿದ್ದಾರೆ, ಅವರನ್ನು ನಾನೆಂದು ಮರೆಯಲಾರೆ ಎಂದು ಬಾವುಕರಾಗಿ ನುಡಿದರು.ಕುರುಗೋಡು ಬಸ್‌ಡಿಪೋ ಮ್ಯಾನೇಜರ್ ಕೆಎಂ.ತಿರುಮೇಶ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾರಿಗೆ ಇಲಾಖೆಯಲ್ಲಿ ಸತತ 34 ವರ್ಷಗಳ ಸುದೀರ್ಘ ಸೇವೆಸಲ್ಲಿಸಿರುವ ಸಂಚಾರಿನೀರೀಕ್ಷಕ ಕೆ.ದೇವರೆಡ್ಡಿ ಅವರು ತಮಗೆ ವಹಿಸಿದ ಕಾರ್ಯದಲ್ಲಿ ದಕ್ಷತೆ, ಪ್ರಮಾಣಿಕತೆ ಮತ್ತು ನಿಷ್ಠೆಯಿಂದ ಕರ್ತವ್ಯನಿರ್ವಹಿಸಿ ಸಾರಿಗೆ ಇಲಾಖೆಯ ಇತತೆ ನೌಕರರಿಗೆ ಮಾದರಿಯಾಗಿದ್ದಾರೆ. ಆದ್ದರಿಂದ ಕೆ.ದೇವರೆಡ್ಡಿ ಅವರ ನಿವೃತ್ತಿಜೀವನ ಸುಖಮಯವಾಗಿರಲೆಂದು ಹಾರೈಸಿದರು.ನಿವೃತ್ತ ಆರ್‌ಟಿಒ ಎಂ. ವೆಂಕಟೇಶ್ವರರಾವ್ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಸಾರಿಗೆ ಇಲಾಖೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ ಪ್ರಯಾಣಿಕರಿಗೆ, ಅಧಿಕಾರಿಗಳಿಗೆ, ಮತ್ತು ಸಿಬ್ಬಂದಿವರ್ಗಕ್ಕೆ ಪ್ರೀತಿಪಾತ್ರರಾಗಿದ್ದಾರೆ. ಅವರ ವಯೋನಿವೃತ್ತಿಜೀವನವುಕ್ಷೇಮವಾಗಿರಲೆಂದು ಹಾರೈಸಿದರು. ಕೆ.ದೇವರೆಡ್ಡಿ ಅವರ ಪತ್ನಿ ಶ್ರೀಮತಿಸುಭದ್ರಮ್ಮ, ಮತ್ತು ಡಿಪೋಸಹಾಯಕ ಅಧಿಕಾರಿ ಗಟ್ಟಿಮಂಜುನಾಥ ಅವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ಸನ್ಮಾನ; ಸತತ 34 ವರ್ಷಗಳ ಸುದೀರ್ಘಕಾಲ ಸಾರಿಗೆ ಇಲಾಖೆಯಲ್ಲಿ ಸೇವೆಗೈದು ಇಂದು ವಯೋನಿವೃತ್ತಿಹೊಂದಿದ ಸಂಚಾರನೀರೀಕ್ಷಕ ಕೆ.ದೇವರೆಡ್ಡಿ ಹಾಗು ಅವರ ದರ್ಮಪತ್ನಿ ಸುಭದ್ರಮ್ಮ ಅವರಿಗೆ ಕುರುಗೋಡು ಡಿಪೋಸಿಬ್ಬಂದಿವರ್ಗದವರು, ಯಾದವಸಮಾಜದ ಬಂದುಗಳು, ಊರಿನ ಹಿತೈಷಿಗಳು ಅವರಿಗೆ ಹೂಮಾಲೆಯೊಂದಿಗೆ ಶ್ಯಾಲುಹಾಕಿ ಸನ್ಮಾನಿಸಿ, ಅಭಿನಂದಿಸಿದರು. ಈ ಸಂದರ್ಭದಲ್ಲಿ ಗ್ಯಾರಂಟಿಯೋಜನೆಯ ಜಿಲ್ಲಾದ್ಯಕ್ಷ ಚಿದಾನಂದಪ್ಪ, ಕುರುಗೋಡು ಯಾದವ ಸಮಾಜದ ಅಧ್ಯಕ್ಷ ದಾಸರಹನುಮಂತಪ್ಪ, ನಿವೃತ್ತ ಆರ್‌ಟಿಒ ಅಧಿಕಾರಿ ಎಂ.ವೆಂಕಟೇಶ್ವರರಾವ್, ಎನ್.ರವೀಂದ್ರಗೌಡ, ಜೆಟಿಒ.ಸೊಮಶೇಖರ್, ನಿವೃತ್ತ ಟಿಸಿ ನಾರಾಯಣಪ್ಪ, ಶ್ಯಾಪುರಶಿವಪುತ್ರಪ್ಪ, ಶಿಕ್ಷಕ ಡಿ.ಶ್ರೀನಿವಾಸ್, ಶ್ವೇತ, ಚಿದಾನಂದ, ಜಗದೀಶ, ಕೃಷಿಕ, ಸೇರಿದಂತೆ ಇತರೆ ಕುರುಗೋಡು ಡಿಪೋಸಿಬ್ಬಂದಿವರ್ಗದವರು, ಇದ್ದರು.

# ರಾಷ್ಟ್ರಮಟ್ಟದ ಖೋ-ಖೋ ಪಂದ್ಯಾವಳಿಗೆ ಬಳ್ಳಾರಿ ನಂದಿ( CBSC) ಶಾಲೆಯ ವಿದ್ಯಾರ್ಥಿಗಳ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಸುಬೇದಾರ್ ವಿದ್ಯಾಲಯದಲ್ಲಿ ಇತ್ತೀಚೆಗೆ ನಡೆದ ಸಿ.ಬಿ.ಎಸ್.ಇ.ಕ್ಲಸ್ಟರ್ ಗಿಖಖಖ ವಿಭಾಗದ ಖೋ-ಖೋ ಪಂದ್ಯಾವಳಿಯಲ್ಲಿ ಇಲ್ಲಿನ ಬಿ. ಬೆಳಗಲ್‌ನ 'ನಂದಿ ಸಿ.ಬಿ.ಎಸ್.ಇ. ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಗೈದಿದ್ದು, 14 ವರ್ಷದೊಳಗಿನ ಬಾಲಕರ ತಂಡವು ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದೆ.14 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಭಾಗವಹಿಸಿದ್ದ ನಂದಿ ಶಾಲೆಯ ತಂಡವು ಜಯಶಾಲಿಯಾಗಿ ರಾಷ್ಟ್ರಮಟ್ಟಕ್ಕೆ ಅರ್ಹತೆ ಪಡೆದಿದೆ. ಈ ತಂಡದಲ್ಲಿ ಚರಣ್ ನಾಯಕ್, ಜೀವನಕುಮಾರ್, ವಸಂತಕುಮಾರ್, ಮಾರುತಿ, ಚೇತನ್, ವಿನುತ್, ಯಶವಂತ್, ಶ್ರೀಧರ್, ದ್ರೋಣೇಶ್, ಶಿವಪ್ಪ, ಶ್ರೇಯಸ್ ಹಾಗೂ ಶರತ್ ಅವರು ಶಾಲೆಯನ್ನು ಪ್ರತಿನಿಧಿಸಿ ಈ ಸಾಧನೆ ಮಾಡಿದ್ದಾರೆ.ಬಾಲಕಿಯರ ತಂಡಕ್ಕೆ ದ್ವಿತೀಯ ಸ್ಥಾನ: ಇದೇ ವೇಳೆ 17 ವರ್ಷದೊಳಗಿನ ಬಾಲಕಿಯರ ರಾಜ್ಯಮಟ್ಟದ ಖೋ-ಖೋ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ನಂದಿ ಶಾಲೆಯ ಬಾಲಕಿಯರ ತಂಡವು ದ್ವಿತೀಯ ಸ್ಥಾನವನ್ನು ಮುಡಿಗೇರಿಸಿ ಕೊಂಡು ಸಂಸ್ಥೆಗೆ ಕೀರ್ತಿ ತಂದಿದೆ. ತಂಡದಲ್ಲಿ ನಾಯಕಿ ನಿರೇಷ್, ಶಿರೀಷಾ, ವೈಷ್ಣವಿ, ನಯನ, ತನುಶ್ರೀ, ಕೀರ್ತಿ, ಶೈಲಜಾ, ಸಂಧ್ಯಾ, ವರ್ಚಸ್ವಿ, ಕಾವೇರಿ, ಅನುಶ್ರೀ ಹಾಗೂ ಪ್ರಿಯಾಂಕ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ.

ಈ ಎರಡೂ ಸಾಧಕ ತಂಡಗಳಿಗೆ ಶಾಲೆಯ ತರಬೇತುದಾರರಾದ ಎಂ. ಜಗದೀಶ್ ಕುಮಾರ್ ಅವರು ತರಬೇತಿ ನೀಡಿದ್ದರು.

ವಿದ್ಯಾರ್ಥಿಗಳ ಈ ಕ್ರೀಡಾ ಸಾಧನೆಗೆ ನಂದಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಮುಖ್ಯಸ್ಥರು, ಪ್ರಾಂಶುಪಾಲರು, ಬೋಧಕ ಹಾಗೂ ಬೋಧ-ಕೇತರ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ, ವಿಶೇಷ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

**PAPER PROCLAMATION**
**IN THE COURT OF THE 11-ADDL. CIVIL JUDGE AND JMFC-II**
**AT BIDAR**
**Crl.Misc.No. 4504/2026.**

1. Shanker S/o Laxman, Age 52 years Occu: Agriculture
2. Parvati D/o Laxman (W/o Rajappa), Age 60 years Occu: Agriculture and House hold.
3. Nirmalamma D/o Laxman (W/o Nagappa), Age 63 years Occu: Agriculture and House hold all R/o Village YakathpurTq and DistBidar.

**..Petitioners. V/S**
**The TahsildarBidar.**
**..Respondent.**
**Sub:- Petition U/sec. 13 (3) of Karnataka Registration of Birth and Deaths Act 1969.**
**To,**
**To Whom So Ever it may concern-T ahsildarBidar**

Whereas the petitioners, have filed this petition for seeking direction from this Hon'ble Court for registering the entry of event of date of birth of deceased namely: Late Laxman S/o Hanmanth R/o Village YakathpurTq and DistBidar, who died on 12-08-1991 in the House Situated at Village YakathpurTq and DistBidar, in the register maintained by the office of respondent. Hence this proclamation is issued, calling for objections from the persons if any interest to appear in persons or through pleader and to file their objections if any on 03-09-2026 at 11:00 Am, if no any objections are filed, this Court will proceed the decide the application on merits, in accordance with law.

Hence this Proclamation is issued under my seal and signature of this Court, on this the 29 day of July 2026 at Bidar

**By Order of the Court**
**S/d**
**Chief Ministerial Officer Civil Judge &JMFC BIDAR**

# ಎಚ್‌ಎಲ್‌ಸಿಗೆ ಕುಡಿವ ನೀರು ಬಿಡಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ತುಂಗಭದ್ರ ಜಲಾಶಯದಿಂದ ಬಲದಂಡೆಯ ಮೇಲ್ಮಟ್ಟದ ಕಾಲುವೆ (ಹೆಚ್.ಎಲ್.ಸಿ) ಗೆ ಕುಡಿಯುವ ನೀರು ಬಿಡಲು

ಕುಡಿಯುವ ನೀರು ಬಿಡಬೇಕೆಂದು ಮೂಲಕ ತುಂಗಭದ್ರ ಬಲದಂಡೆ-ಯ ಮೇಲ್ಮಟ್ಟದ ಕಾಲುವೆ (ಹೆಚ್.ಎಲ್.ಸಿ) ಗೆ ಜಿಲ್ಲಾಧಿಕಾರಿಗಳು ಬಳ್ಳಾರಿ ಇವರನ್ನು ವಲಯ ಪ್ರಾದೇಶಿಕ ಅಧಿಕಾರಿಗಳು ಕಲಬುರ್ಗಿ ಇವರನ್ನು ತುಂಗಭದ್ರ ಜಲಾಶಯದ ಮುಖ್ಯ ಅಭಿಯಂತರರನ್ನು ಹಾಗೂ ತುಂಗಭದ್ರ ಬೋರ್ಡಿನ ಮುಖ್ಯ ಕಾರ್ಯದರ್ಶಿಗಳವರನ್ನು ತುಂಗಭದ್ರ ರೈತ ಸಂಘ ಅಧ್ಯಕ್ಷ ದರೂರು ಪುರುಷೋತ್ತಮ್ ಗೌಡ ನೇತೃತ್ವದಲ್ಲಿ ಹಲವು ದಿನಗಳಿಂದ ವಿನಂತಿಸಲಾಗಿತ್ತು.

ರೈತರ ವಿನಂತಿಯ ಮೇರೆಗೆ ಈ ದಿನ ತುಂಗಭದ್ರ ಬೋರ್ಡಿನ ಸೂಪರ್‌ಡೆಂಟ್ ಇಂಜಿನೀಯರ್ ನಾರಾಯಣ ನಾಯಕ, ಎಕ್ಸ್ ಕ್ಯೂಟ್ ಇಂಜಿನೀಯರ್ ಚಂದ್ರಶೇಖರ ಮತ್ತು ಜಲಾಶಯದ ನೀರಿನ ಸಮತೋಲನ ಇಂಜಿನೀಯರ್ ಗುರುಕಿರಣ್ ಇವರುಗಳು ಉದಯ 8:45 ಕ್ಕೆ ತುಂಗಭದ್ರ ಜಲಾಶಯದಲ್ಲಿ ಮೇಲ್ಮಟ್ಟದ ಕಾಲುವೆಯ ತಾಂತ್ರಿಕ ಉಪಕರಣಗಳಿಗೆ ಪೂಜೆಯನ್ನು ನೇರವೇರಿಸಿ ಕರ್ನಾಟಕದ ಪಾಲಿನ ಕುಡಿಯುವ ನೀರನ್ನು ಬಿಡಲು ಆರಂಭಿಸಿದರು. ಹಾಗೆಯೆ ಸೋಮವಾರದಿಂದ ಈ ಕಾಲುವೆಗೆ ಆಂಧ್ರದ ಪಾಲಿನ ಕುಡಿಯುವ ನೀರನ್ನು ಸಹ ಬಿಡಲಿದ್ದಾರೆ.

ಈ ದಿನ ತುಂಗಭದ್ರ ಜಲಶಾಯದಲ್ಲಿ 38 ಟಿ.ಎಮ್.ಸಿ ನೀರು ಶೇಖರಣೆಯಾಗಿದ್ದು ಹಾಗೂ ಜಲಾಶಯಕ್ಕೆ 28,000 ಕ್ಯೂಸೇಕ್ಸ್ ನೀರು ಬರುತ್ತಿವೆ ಮತ್ತು ಮಲೆನಾಡಿನ ತುಂಗ ಜಲಶಾಯದಿಂದ 53,000 ಕ್ಯೂಸೇಕ್ಸ್ ನೀರು ನಮ್ಮ ಜಲಶಾಯಕ್ಕೆ ಬಿಡಲಾಗಿದೆ. ಇನ್ನೂ ಕೆಲವು ದಿನಗಳು ಮಲೆನಾಡಿನಲ್ಲಿ ಉತ್ತಮ ಮಳೆಯಾಗಿ ಜಲಾಶಯಕ್ಕೆ ಹೆಚ್ಚುವರಿ ನೀರು ಬಂದರೆ ತಕ್ಷಣ ನೀರಾವರಿ ಸಲಹಾ ಸಮಿತಿ ಸಭೆ ಕರೆದು ಬಳ್ಳಾರಿ, ವಿಜಯನಗರ, ರಾಯಚೂರು ಹಾಗು ಕೊಪ್ಪಳ ಜಿಲ್ಲೆಗಳ ಕಾಲುವೆಗಳು ಮುಖಾಂತರ ರೈತರ ಬೆಳೆಗಳಿಗೆ ನೀರು ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಗುವುದು.

ಕೃಷ್ಣನಗರ ಕ್ಯಾಂಪ್ ಶಿವಯ್ಯ,ರುದ್ರಯ್ಯ, ರಾಮಕೋಟಿ, ಬಲರಾಮ, ಎನ್ ಶ್ರೀನಿವಾಸ್,

ಶಾಂತಿ ನಗರ ಪ್ರಭಾಕರ್, ಎರಂಗಳಿ ನಾಗಿರೆಡ್ಡಿ, ಸಿ ವೀರೇಶ್ ಗೌಡ, ಸೋಮಸಮುದ್ರ ರುದ್ರಗೌಡ ಪಾಲ್ಗೊಂಡರು.

**DRAFT PAPER PROCLAMATION**
**IN THE COURT OF THE 11-ADDL CIVIL JUDGE AND JMFC-II**
**AT BIDAR**
**Cri.Misc. No. 4508/2026.**

Kashinath S/o Gundappa, Age 61 years Occupation: Labour
R/o Village YakathpurTq and DistBidar.

**V/s**
**..Petitioner.**
**The Tahsildar Bidar.**
**…Respondent.**
**Sub:- Petition U/sec.13 (3) of Karnataka Registration of Birth and Deaths Act 1969.**
**To,**
**To Whom So Ever it may concern-Tahsildar Bidar**

Whereas the petitioner, have filed this petition for seekin direction from this Hon'ble Court for registering the entry of event date of birth of deceased namely: Gundappa S/o Hanmanth R/Village YakathpurTq and Dist-Bidar, who died on 25-12-1992 the House Situated at Village YakathpurTq and DistBidar, in t register maintained by the office of respondent. Hence proclamation is issued, calling for objections from the persons if interest to appear in persons or through pleader and to file th objections if any on 03-09-2026 at 11: 00 Am, if no objections are filed, this Court will proceed the decide the applica on merits, in accordance with law.

Hence this Proclamation is issued under my seal and sign of this Court, on this the 19 day of July 2026 at Bidar

**By Order of the Court**
**S/d**
**Chief Ministerial Officer**
**Prl. Civil Judge and JMFC Bidar**

# ವಿಶ್ವ ಹಿರಿಯ ನಾಗರಿಕರ ದಿನಾಚರಣೆ-2026: ರಾಜ್ಯ ಮಟ್ಟದ 'ವಯೋಶ್ರೇಷ್ಠ' ಪ್ರಶಸ್ತಿಗೆ ಅರ್ಜಿ ಆಹ್ವಾನ

ಬಳ್ಳಾರಿ,:ಬರುವ ಅಕ್ಟೋಬರ್1 ರಂದು ನೆರವೇರಲಿರುವ 'ವಿಶ್ವ ಹಿರಿಯನಾಗರಿಕರದಿನಾಚರಣೆ'ಯ ಅಂಗವಾಗಿ, ವಿವಿಧ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ ಹಿರಿಯ ನಾಗರಿಕರಿಗೆ ಹಾಗೂ ಅವರ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಸಂಸ್ಥೆಗಳಿಗೆನೀಡಲಾಗುವ ರಾಜ್ಯ ಮಟ್ಟದಪ್ರಶಸ್ತಿಗಾಗಿಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.ಸೇವಾಕ್ಷೇತ್ರಗಳು: ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಕ್ರೀಡೆಮತ್ತುಸಮಾಜಸೇವೆ.ಅರ್ಹತೆ: ಗಣನೀಯ ಸೇವೆ ಸಲ್ಲಿಸಿದ ಹಿರಿಯ ನಾಗರಿಕರು(ವಯೋಶ್ರೇಷ್ಠರು) ಹಾಗೂ ಹಿರಿಯ ನಾಗರಿಕರ ಶ್ರೇಯೋಭಿವೃದ್ಧಿಗೆಶ್ರಮಿಸುತ್ತಿರುವ ಸಂಸ್ಥೆಗಳು.ಅರ್ಜಿ ಸಲ್ಲಿಸುವ ವಿಧಾನ: ನಿಗದಿತ ನಮೂನೆ 1 ಮತ್ತು 2ರ ಎಲ್ಲಾ ವಿವರಗಳನ್ನು ಕನ್ನಡ ಭಾಷೆಯಲ್ಲಿಯೇ ಭರ್ತಿ ಮಾಡಿ,ಅಗತ್ಯದಾಖಲೆಗಳೊಂದಿಗೆ ದ್ವಿಪ್ರತಿಯಲ್ಲಿಪ್ರಸ್ತಾವನೆ ಸಲ್ಲಿಸಬೇಕು.

**DRAFT PAPER PROCLAMATION**
**IN THE COURT OF THE II-ADDL. CIVIL JUDGE AND JMFC-II**
**AT BIDAR**
**Crl. Misc. No. 4507/2026.**

1. Kamlamma W/o Maruti, Age 70 years Occu: House hold
2. Laxmibai D/o Haleem, Age 64 years Occu: House hold.
3. RaipallyJanamma D/o Haleem, Age 58 years Occu: House hold
4. Saraswathi D/o Haleem, Age 71 years Occu: House hold
5. Sammouva W/o Late Nagshetty, Age 80 years Occu: House holdAll R/o Village YakathpurTq and Dist Bidar.

**.Petitioner.**
V/s..
The TahsildarBidar.
**..Respondent**
**Sub:- Petition U/sec. 13 (3) of Karnataka Registration of Birth and Deaths Act 1969.**
**To,**
**To Whom So Ever it may concern-Tahsildar Bidr**

Whereas the petitioners, have filed this petition for seeking direction from this Hon'ble Court for registering the entry of event of date of birth of deceased namely : Late Shivamma W/o Late Haleem R/ o Village YakathpurTq and DistBidar, who died on 08-08-2014 in the House Situated at Village YakathpurTq and DistBidar , in the register maintained by the office of respondent Hence this proclamation is issued , calling for objections from the persons if any onterest to appear in persons or through pleader and to file their objections if any on 03-09-2026 at 11.00 Am if no any obections are filed , this Court will proceed the decide the application on merites, in accordance with law

Hence this proclamation is issued under my seal and signature of this Court , on this the 29 day of July 2026 at Bidar

**By order of the Court**
**S/d**
**ChifMinisteral Officer Prl. Civil judge and JMFC Bidar**

**PAPER PROCLAMATION**
**IN THE COURT OF THE II-ADDL. CIVIL JUDGE AND JMFC-II**
**AT BIDAR**
**Crl. Misc. No. 4505/2026.**

1. Shanker S/o Laxman, Age 52 years Occu: Agriculture
2. Parvati D/o Laxman (W/o Rajappa), Age 60 years Occu: Agriculture and House hold.
3. Nirmalamma D/o Laxman (W/o Nagappa), Age 63 years Occu: Agriculture and House hold all R/o Village YakathpurTq and DistBidar.

**..Petitioners.**
**V/s**
**The TahsildarBidar.**
**..Respondent.**
**Sub:- Petition U/sec. 13 (3) of Karnataka Registration of Birth and Deaths Act 1969.**
**To,**
**To Whom So Ever it may concern-TahsildarBidar**

Whereas the petitioners, have filed this petition for seeking direction from this Hon'ble Court for registering the entry of event of date of birth of deceased namely: Late Mallamma W/o Laxman R/o Village YakathpurTq and DistBidar, who died on 04-05-2006 in the House Situated at Village YakathpurTq and DistBidar, in the register maintained by the office of respondent. Hence this proclamation is issued, calling for objections from the persons if any interest to appear in persons or through pleader and to file their objections if any on 03-09-2016 at 11:00 Am, if no any objections are filed, this Court will proceed the decide the application on merits, in accordance with law.

Hence this Proclamation is issued under my seal and signature of this Court, on this the 29 day of July 2026 at Bidar

**By Order of the Court**
**S/d**
**Chief Ministerial Officer**
**PrlCivil Judge & JMFC-II Court Bidar**

**PAPER PROCLAMATION**
**IN THE COURT OF THE II-ADDL. CIVIL JUDGE AND JMFC-II**
**AT BIDAR**
**Crl.Misc.No. 4509/2026.**

Kashinath S/o Gundappa, Age 61 years Occupation: Labour
R/o Village YakathpurTq and DistBidar.

**..Petitioner.**
V/s
**The TahsildarBidar.**
**..Respondent.**
Sub:- Petition U/sec. 13 (3) of Karnataka Registration of Birth and Deaths Act 1969.
**To,**
**To Whom So Ever it may concern-TahsildarBidar**

Whereas the petitioner, have filed this petition for seeking direction from this Hon'ble Court for registering the entry of event of date of birth of deceased namely: Late Pentamma W/o Gundappa R/o Village YakathpurTq and DistBidar, who died on 21-04-1967 in the House Situated at Village YakathpurTq and DistBidar, in the register maintained by the office of respondent. Hence this proclamation is issued, calling for objections from the persons if any interest to appear in persons or through pleader and to file their objections if any on objections are filed, this Court will proceed the decide the application 3-09-2006 at 11:00 Am, if no any on merits, in accordance with law.

Hence this Proclamation is issued under my seal and signature of this Court, on this the 29day of July 2026 at Bidar

**By Order of the Court**
**S/d**
**Chief Ministerial Officer**
**Prl. Civil Judge and JMFC Bidar**

**DRAFT PAPER PROCLAMATION**
**IN THE COURT OF THE H-ADDL, CIVIL JUDGE AND JMFC-II**
**AT BIDAR**
**Cri. Misc. No. 4506/2020,**

1. Kamlamma W/o Maruti, Age 70 years Oceu: House hold
2. Laxmibai D/o Haleem, Age 64 years Occu: House hold.
3. RaipallyJanamma D/o Haleem, Age 58 years Occu: House hold
4. Saraswathi D/o Haleem, Age 71 years Occu: House hold
5. Bammouva W/o Late Nagshetty, Age 80 years Occu: House hold

All R/o Village YakathpurTq and Dist. Bidar.

V/s
**..Petitioner.**
**The TahsildarBidar.**
**..Respondent.**
**Sub:-Petition U/sec, 13 (3) of Karnataka Registration of Birth and Deaths Act 1969.**
**To,**
**To Whom So Ever it may concern-TahsildarBidar**

Whereas the petitioners, have filed this petition for seeking direction from this Hon'ble Court for registering the entry of event of date of birth of deceased namely: Late Haleem S/o Hanumanth R/o Village YakathpurTq and DistBidar, who died on 13-01-1997 in the House Situated at Village YakathpurTq and DistBidar, in the register maintained by the office of respondent. Hence this proclamation is issued, calling for objections from the persons if any interest to appear in persons or through pleader and to file their objections if any on 03-09-2026 at 11:00 Am, if no any objections are filed, this Court will proceed the decide the application on merits, in accordance with law.

Hence this Proclamation is issued under my seal and signature of this Court, on this the 29 day of July 2026 at Bidar

**By Order of the Court**
**S/d**
**Chief Ministerial Officer**
**Prl. Civil Judge and JMFC Bidar**

## ಕಿರು ಆಹಾರ ಸಂಸ್ಕರಣಾ ಘಟಕ ಸ್ಥಾಪನೆಗೆ ಸಹಾಯಧನ

**ಬಾಗಲಕೋಟೆ:** ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಔಪಚಾರೀಕರಣ ಯೋಜನೆಯಡಿ ಹೊಸ ಆಹಾರ ತಯಾರಿಕಾ, ಸಂಸ್ಕರಣಾ ಉದ್ದಿಮೆ ಸ್ಥಾಪನೆಗೆ ಸಹಾಯಧನ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಯೋಜನೆಯಡಿ ಬ್ಯಾಂಕ್ ಮೂಲಕ ಸಾಲದ ರೂಪದಲ್ಲಿ (ಶೇ.90) ನಿಮ್ಮ ಯೋಜನೆಗೆ ಬೇಕಾಗುವ ಹಣಕಾಸಿನ ಸೌಲಭ್ಯ ಪಡೆದುಕೊಳ್ಳಲು ಹಾಗೂ ಅಭ್ಯರ್ಥಿಯ ವಂತಿಗೆ (ಶೇ.10) ಅದರ ಜೊತೆಗೆ ಶೇ.50 ಇದರಲ್ಲಿ ಕೇಂದ್ರ ಸರಕಾರದ ಶೇ.35 ಹಾಗೂ ರಾಜ್ಯ ಸರಕಾರದಿಂದ ಶೇ.15 ವರೆಗೆ ತೋಟಗಾರಿಕೆ ಘಟಕಗಳಿಗೆ ಸರಕಾರದ ಸಹಾಯಧನವನ್ನು ನೀಡಲು ಅವಕಾಶವಿರುತ್ತದೆ. ವ್ಯಯಕ್ತಿಕ ಉದ್ಯಮಗಳು, ಸಹಕಾರಿ ಸಂಸ್ಥೆಗಳು, ಪಿಎಫ್‌ಓ, ಎಸ್‌ಎಚ್‌ಜಿ ಸಂಘಗಳು, ಪ್ರಾವೈಟ ಲಿ. ಕಂಪನಿಗಳು ಈ ಸಹಾಯಧನ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

ಅರಿಶಿನ ಪುಡಿ ತಯಾರಿಸುವ ಘಟಕ, ಮಸಾಲೆ ಪದಾರ್ಥಗಳ ಸಂಸ್ಕರಣಾ ಘಟಕ, ಚಿಪ್ಸ್ ತಯಾರಿಕಾ ಘಟಕ, ಅಣಬೆ ಮೌಲ್ಯವರ್ಧನೆ ಘಟಕ, ಗಿಡಮೂಲಿಕೆಗಳ, ಹರ್ಬಲ್ ಉತ್ಪನ್ನಗಳ ಮೌಲ್ಯವರ್ಧನೆ ಘಟಕ, ಜೇನು ಸಂಸ್ಕರಣಾ ಘಟಕ, ಕೋಲ್ಡ ಸ್ಟೋರೇಜ್ ಘಟಕ, ಉಪ್ಪಿನಕಾಯಿ ತಯಾರಿಸುವ ಘಟಕ, ಹಣ್ಣಿನ ಜ್ಯೂಸ್, ವಿವಿಧ ಸೊಪ್ಪಿನ ಪುಡಿಗಳ ತಯಾರಿಸುವ ಘಟಕ, ವ್ಯಾಕ್ಯೂಮ್ ಫ್ರೈಡ್ ಚಿಪ್ಸ್, ಸಾಸ್, ಕೆಚಪ್ ಹಾಗೂ ತೆಂಗಿನ ಉಪ ಉತ್ಪನ್ನಗಳ ತಯಾರಿಕಾ ಘಟಕಕ್ಕೆ ಸಹಾಯಧನ ನೀಡಲಾಗುತ್ತದೆ ಎಂದು ತೋಟಗಾರಿಕೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಾದ ಸುಜಾತಾ ಕುಂಬಾರ (7847841435), ಪ್ರವೀಣ ಪೂಜಾರಿ (9741403143), ಶಂಕರಗೌಡ ಪಾಟೀಲ (9886711550), ಮುರಳೀಧರ ಭಪ್ರಿ (9845256456), ರಂಗಪ್ಪ ಹಂದಿಗುಂದಿ (8147921582), ಇನಾಯತಲಾ ನಧಾಪ್ (8884112284), ಸುಧೀರ ಕುಲಕರ್ಣಿ (8130097949), ಸಂದೀಪಕುಮಾರ (9964082001), ಮೊಯಿನ್ ಜಮಖಂಡಿ (9481878610), ವಿಜಯಲಕ್ಷ್ಮೀ ಪಾಟೀಲ (8618099490) ಸಂಪರ್ಕಿಸಬಹುದಾಗಿದೆ.


## ಪೊಲೀಸ್ ನೇಮಕಾತಿ ಪರೀಕ್ಷೆ



**ಬಾಗಲಕೋಟೆ:** ಜಿಲ್ಲೆಯಲ್ಲಿ ಆಗಸ್ಟ 2ರಂದು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿನ ಸಿವಿಲ್ ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗಳ ನೇಮಕಾತಿಯ ಲಿಖಿತ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಗಳು ಸುಗಮ, ಪಾರದರ್ಶಕ ಹಾಗೂ ನಿಷ್ಪಕ್ಷಪಾತವಾಗಿ ನಡೆಸಲು ಎಲ್ಲ ರೀತಿಯ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೊಲೀಸ್ ನೇಮಕಾತಿಗೆ ಲಿಖಿತ ಪರೀಕ್ಷೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಲಿಖಿತ ಪರೀಕ್ಷೆಗೆ ಒಟ್ಟು 27 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬಾಗಲಕೋಟೆ ನಗರದಲ್ಲಿ 18 ಪರೀಕ್ಷಾ ಕೇಂದ್ರಗಳಲ್ಲಿ 8193 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದರೆ, ಜಮಖಂಡಿ ನಗರದಲ್ಲಿ ಸ್ಥಾಪಿಸಲಾದ 9 ಪರೀಕ್ಷಾ ಕೇಂದ್ರಗಳಲ್ಲಿ 4706 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಒಟ್ಟಾರೆಯಾಗಿ ಒಟ್ಟು 12899 ಅಭ್ಯರ್ಥಿಗಳು ಇದ್ದಾರೆಂದು ತಿಳಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲಸೌಕರ್ಯ, ಅಭ್ಯರ್ಥಿಗಳಿಗೆ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಕಲ್ಪಿಸಬೇಕು. ಅಭ್ಯರ್ಥಿಗಳ ಪರಿಶೀಲನೆ, ಪ್ರವೇಶ ವ್ಯವಸ್ಥೆ, ಸಿಸಿಟಿವಿ ನಿಗಾ ಹಾಗೂ ಪರೀಕ್ಷಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಪರೀಕ್ಷಾ ಕೇಂದ್ರಗಳಲ್ಲಿ ಹೆಸ್ಕಾಂ ವತಿಯಿಂದ ನಿರಂತರ ವಿದ್ಯುತ್ ಸರಬರಾಜು ಕಲ್ಪಿಸಲು ಅವರು ತಿಳಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ವ್ಯವಸ್ಥೆ, ಜಾಮರ್ ಅಳವಡಿಕೆ, ಅಭ್ಯರ್ಥಿಗಳ ಫ್ರಿಸ್ಕಿಂಗ್, ಕ್ಯೂಆರ್ ಕೋಡ ಆಧಾರಿತ ಗುರುತು ಪರಿಶೀಲನೆ, ವಸ್ತ್ರಸಂಹಿತೆ ಕಟ್ಟುನಿಟ್ಟಾಗಿ ಅನುಷ್ಠಾನ, ಪೊಲೀಸ್ ಬಂದೋಬಸ್ತಗಾಗಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಝುರಾಕ್ಸ ಕೇಂದ್ರಗಳು, ಸೈಬರ್ ಸೆಂಟರ್ ಹಾಗೂ ಇತರೆ ಅನುಮಾನಾಸ್ಪದ ಚಟುವಟಿಕೆಗಳ ಮೇಲೆ ನಿಗಾವಹಿಸಲು ಹಾಗೂ ಅಗತ್ಯವಿದ್ದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163 ರಡಿ ಹೊರಡಿಸಲಾದ ಆದೇಶವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪೊಲೀಸ್ ಇಲಾಖೆಗೆ ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಂಡಲೀಕ ಕಾಂಬಳೆ, ಕೆ.ಎಸ್.ಆರ್.ಟಿ.ಸಿಯ ಜಿಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿ ಎನ್.ಟಿ.ಪಾಟೀಲ ಸೇರಿದಂತೆ ಪರೀಕ್ಷಾ ಮುಖ್ಯ ಅಧೀಕ್ಷಕರು, ಜಾಗೃತದ ದಳದವರು, ಮಾರ್ಗಾಧಿಕಾರಿಗಳು ಉಪಸ್ಥಿತರಿದ್ದರು.



**ಪೀಣ್ಯ ದಾಸರಹಳ್ಳಿ:** ಕ್ಷೇತ್ರದ ರಾಜಗೋಪಾಲನಗರ ವಾರ್ಡ್‌ನ ಸಮಾಜ ಸೇವಕರಾದ ಡಾ.ಸಂಗನ ಬಸಪ್ಪ ಬಿರಾದಾರ್ ಅವರ ಹುಟ್ಟುಹಬ್ಬಕ್ಕೆ ನೆಲಗದರನಹಳ್ಳಿಯ ಮುಖಂಡರಾದ ಡಾ. ಕಾಳೇಗೌಡ್ರು ಆಗಮಿಸಿ ಕೇಕ್ ಕತ್ತರಿಸಿ ಸನ್ಮಾನಿ ಗೌರವಿಸುವ ಮೂಲಕ ಹುಟ್ಟುಹಬ್ಬಕ್ಕೆ ಶುಭ ಕೋರಿದರು. ಈ ಸಂದರ್ಭದಲ್ಲಿ ಕೆಂಪೇಗೌಡ್ರು, ಸುನಿಲ್, ಸಿದ್ದಗಂಗಾ, ಮೋಹನ್ ರಾಜ್, ಭೂಮೇಶ್, ಪತ್ರಕರ್ತರಗಳಾದ ಅಯ್ಯಣ್ಣ ಮಾಸ್ಟರ್, ನಂದೀಶ್, ಪಾಪಯ್ಯ ಹಾಗೂ ಮಹಿಳಾ ಮುಖಂಡರಾದ ಸವಿತಾ, ಭಾಗ್ಯ ಮುಂತಾದವರು ಭಾಗಿಯಾಗಿ ಹುಟ್ಟುಹಬ್ಬಕ್ಕೆ ಶುಭ ಕೋರಿದರು.

# ನೀರಿನ ಹೆಸರಲ್ಲಿ ಪ್ರಚೋದಿತ ಪ್ರತಿಭಟನೆ: ಶಾಸಕ ಗರಂ





• **ಮಲ್ಲಮ್ಮ ನುಡಿ ವಾರ್ತೆ ಬಂಗಾರಪೇಟೆ**

ಸತತ 13 ವರ್ಷಗಳಿಂದ ತಾಲೂಕಿನಲ್ಲಿ ಯಾವುದೇ ನೀರಿನ ಸಮಸ್ಯೆ ಉಲ್ಬಣಗೊಂಡಿಲ್ಲ ಆದರೆ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರ ಪ್ರಚೋದನೆಯಿಂದಾಗಿ ಇತ್ತೀಚಿಗೆ ಪಾಕರಹಳ್ಳಿ ಗ್ರಾಮದಲ್ಲಿ ಪ್ರತಿಭಟನೆ ನಡೆಸಿರುವುದು ಶೋಭೆ ತರುವಂತದ್ದಲ್ಲ ಎಂದು ಶಾಸಕ ಎಸ್ ಎನ್ ನಾರಾಯಣಸ್ವಾಮಿ ಆಕ್ರೋಶ ಹೊರ ಹಾಕಿದರು.

ನಗರದ ಹೊರ ಹೊಲಯದಲ್ಲಿರುವ ಹಾಲು ಉತ್ಪಾದಕರ ತರಬೇತಿ ಶಿಬಿರ ಕೇಂದ್ರದಲ್ಲಿ, ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವತಿಯಿಂದ ರಾಸು ವಿಮೆ ಮತ್ತು ಕಟ್ಟಡ ಅನುದಾನದ ಚೆಕ್ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚಿಕ್ಕ ಅಂಕಾಂಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಾಕರಹಳ್ಳಿ ಗ್ರಾಮದಲ್ಲಿ ನನ್ನ ಆಡಳಿತ ಅವಧಿಯ 13 ವರ್ಷಗಳಲ್ಲಿ 5 ಕೊಳವೆಬಾವಿ, ಶುದ್ಧ ಕುಡಿಯುವ ನೀರಿನ ಘಟಕ, ಸಿಸಿ ರಸ್ತೆಗಳ ನಿರ್ಮಾಣ, ಐಮಾಸ್ ಲೈಟ್ , ಮೂರು ಬಾರಿ ಡಾಂಬರು ರಸ್ತೆ ಮಾಡಲಾಗಿದೆ , ಇದುವರೆಗೂ ಯಾವುದೇ ನೀರಿನ ಸಮಸ್ಯೆ ಉಲ್ಬಣಗೊಂಡಿಲ್ಲ ಆದರೆ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ವೆಂಕಟೇಶ್ ಗೌಡ ಹಾಗೂ ಮಂಜುನಾಥ್ ರವರು ಅಗತ್ಯವಾಗಿ ನೀರಿನ ಸಮಸ್ಯೆ ಇರುವುದಾಗಿ ಮಹಿಳೆಯರನ್ನು ಕರೆದು ಪ್ರತಿಭಟನೆಗೆ ಮುಂದಾಗಿರುವುದು ನನ್ನ ವಿರುದ್ಧ ತೇಜೋವಧೆ ಮಾಡುವ ಹುನ್ನಾರ ಎಂದರು.

**ವಿದ್ಯುತ್ ಸರಬರಾಜು ತಡೆಗೆ ಬ್ರೇಕ್ ಹಾಕಿದರೆ ಪ್ರಕರಣ:** ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ವೆಂಕಟೇಶ್ ಗೌಡ ಹಾಗೂ ಮಂಜುನಾಥ್ ರವರು ತಮ್ಮ ಆಡಳಿತ ಅವಧಿಯಲ್ಲಿ ಜವಾಬ್ದಾರಿಯನ್ನು ಮರೆತಿದ್ದರು, ಇದುವರೆಗೂ ಗ್ರಾಮದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಯಾವುದೇ ಬೇಡಿಕೆಯನ್ನು ನನ್ನ ಮುಂದೆ ತಂದಿಲ್ಲ, ಹಾಗೂ ಗ್ರಾಮಸ್ಥರಾಗಲಿ ಊರಿನ ಹಿರಿಯ ಮುಖಂಡರಾಗಲಿ ಗ್ರಾಮದಲ್ಲಿ ನೀರಿನ ಸಮಸ್ಯೆ ಇದೆ ಎಂಬುದರ ಬಗ್ಗೆ ನನ್ನ ಗಮನಕ್ಕೆ ತಂದಿರುವುದಿಲ್ಲ, ನನ್ನ ಗಮನಕ್ಕೆ ಬಂದ ತಕ್ಷಣ ಜೆಜಿಎಂ ಯೋಜನೆ ಅಡಿಯಲ್ಲಿ ಪೈಪ್ ಲೈನ್ ಅಳವಡಿಸಲಾಗುತ್ತಿದೆ, ಹಾಗೂ ಕೊಳವೆ ಬಾವಿಗಳಿಗೆ ವಿದ್ಯುತ್ ಚಾರ್ಜ್ ಮಾಡಲಾಗುತ್ತಿದೆ ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ದುರುದ್ದೇಶ ಪೂರಕವಾಗಿ ಟ್ರಾನ್ಸಾರ್ಮರ್ ಅನ್ನು ಶಾರ್ಟ್ ಮಾಡಿ ವಿದ್ಯುತ್ ಸಮಸ್ಯೆ ಉಂಟು ಮಾಡುತ್ತಿದ್ದಾರೆ ಇದರಿಂದ ಸಮಸ್ಯೆ ಉಂಟಾಗಿದೆ , ಇದೇ ರೀತಿಯ ಚಾಲಿ ಮುಂದುವರಿಸಿದೆಯಾದಲ್ಲಿ ಸದರಿ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಬೆಸ್ಕಾಂ ಕಾರ್ಯಪಾಲಕ ಅಭಿಯಂತರು ಹಾಗೂ ಪೊಲೀಸ್ ಇನ್ಸೆಕ್ಟರ್ ಅವರಿಗೆ ಸೂಚನೆ ನೀಡಲಾಗಿದೆ ಎಂದರು.

**ಹೈನೋದ್ಯಮಿಗಳಿಗೆ 28 ಲಕ್ಷ ರೂಗಳ ಚೆಕ್:** ಹೈನೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿರುವ 40 ಜನ ಫಲಾನುಭವಿಗಳಿಗೆ 28 ಲಕ್ಷ ರೂಗಳ ಚೆಕ್ಕುಗಳನ್ನು ವಿತರಣೆ ಮಾಡಲಾಗುತ್ತಿದೆ, ಹಾಗೂ ಕೋಮುಲ್ ಟ್ರಸ್ಟ್ ವತಿಯಿಂದ 20 ವಿದ್ಯಾರ್ಥಿಗಳಿಗೆ 2 ಲಕ್ಷ ರೂಗಳ ಚೆಕ್ ವಿತರಣೆ, ವಯೋನಿವೃತ್ತಿ ಹೊಂದಿರುವ ಸಂಘ ಸಿಬ್ಬಂದಿಗಳಿಗೆ 9 ಲಕ್ಷ ರೂಗಳು, ಹಾಗೂ ಬ್ಲೂ ಬ್ಯಾಕ್ ಯೋಜನೆ ಅಡಿಯಲ್ಲಿ ಹಸಿರು ಬೆಳೆಯಲು ಉಚಿತವಾಗಿ ಬೀಜಗಳನ್ನು ವಿತರಣೆ ಮಾಡಿ 5000 ರೂಗಳ ಪ್ರೋತ್ಸಾಹ ಧನ, ಹಾಗೂ ಎಮ್ಮೆ ಖರೀದಿಗಾಗಿ 30 ಸಾವಿರ ರೂಗಳ ಪ್ರೋತ್ಸಾಹ ಧನದ ಶಕ್ತಿಗಳನ್ನು ನೀಡಲಾಗುತ್ತಿದೆ, ರೈತರು ಇದನ್ನು ಸದ್ಬಳಕೆ ಮಾಡಿಕೊಂಡು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಕರೆಕೊಟ್ಟರು.

# ಆಡಂಬರದ ಜೀವನಕ್ಕೆ ಆಕರ್ಷಿತರಾಗಬೇಡಿ: ಪ್ರೊ.ಶಿವಾನಂದ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**



ವಿದ್ಯಾರ್ಥಿಗಳು ಕಲಿಕಾಸಕ್ತಿಯನ್ನು ಹೆಚ್ಚಿಸಿಕೊಂಡು ಉತ್ತಮ ನಡೆ ನುಡಿ ರೂಢಿಸಿಕೊಳ್ಳುವ ಮೂಲಕ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಮುಗಳೊಳ್ಳಿ ಸರಕಾರಿ ಪ್ರೌಢ ಶಾಲೆಯ ಉಪ ಪ್ರಾಚಾರ್ಯ ಶಿವಾನಂದ ವಂದಾಲ ಹೇಳಿದರು.

ತಾಲೂಕಿನ ಮುಗಳೊಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಯ ಕಾಲೇಜು ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಹಾಗೂ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಆಡಂಬರದ ಜೀವನಕ್ಕೆ ಆಕರ್ಷಿತರಾಗಿ ಉತ್ತಮ ಬದುಕು ಕಟ್ಟಿಕೊಳ್ಳುವಲ್ಲಿ ವಿಫಲರಾಗುತ್ತಿರುವುದು ಕಳವಳದ ಸಂಗತಿ ಎಂದರು.

ವಿದ್ಯಾರ್ಥಿ ಜೀವನ ಬಹುಮೂಲ್ಯವಾಗಿದ್ದು, ಅದುವೇ ಬದುಕಿಗೆ ಬುನಾದಿಯಾಗಿದೆ. ಈ ಸಮಯದಲ್ಲಿ ಶ್ರದ್ಧೆ, ಸಮಯಪಾಲನೆಯ ಮೂಲಕ ಪರಿಶ್ರಮದಿಂದ ಓದಿ ಸಾಧನೆ ಮಾಡಿ ಸಮಾಜಕ್ಕೆ ಆಸ್ತಿಯಾಗಿ ಬೆಳೆಯಬೇಕು ಎಂದ ವಂದಾಲ, ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಿ ಸರ್ವತೋಮುಖ ಬೆಳವಣಿಗೆ ಹೊಂದಬೇಕು ಎಂದು ಹೇಳಿದರು. ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಲಕ್ಷ್ಮಣ ಸುನಗದ ಹಾಗೂ ವಿಶ್ರಾಂತ ಶಿಕ್ಷಕ ಎಚ್.ಆರ್.ಹಡಪದ ಮಾತನಾಡಿ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ಸಾಧಕ ವಿದ್ಯಾರ್ಥಿಗಳನ್ನು ಪ್ರೇರಣೆಯಾಗಿಟ್ಟುಕೊಂಡು ಸತತ ಅಧ್ಯಯನದ ಮೂಲಕ ಮುಂದೆ ಬರಬೇಕು. ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವ ಛಲ ಹೊಂದಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಎಸ್.ಎಸ್.ಬಿರಾದಾರ, ಬದಲಾವಣೆಗಳಿಗೆ ಹೊಂದಿಕೊಂಡು ವಿದ್ಯಾರ್ಥಿಗಳು ಅಧ್ಯಯನ ಮಾಡಿ ಪ್ರಗತಿ ಸಾಧಿಸಿ ಬೆಳೆಯಬೇಕು ಎಂದು ಹೇಳಿದರು. ಮಲ್ಲಪ್ಪ ವಡ್ಡರ, ಸಾಹೇಬಗೌಡ ನಾಯ್ಕರ, ಚೆನ್ನಪ್ಪ ಕಾಜಗಾರ, ಲಕ್ಷ್ಮೀಬಾಯಿ ಚಲವಾದಿ, ಅಶ್ವಿನಿ ಚಲವಾದಿ ವೇದಿಕೆಯಲ್ಲಿದ್ದರು.

ಉಪನ್ಯಾಸಕ ಗೋವಿಂದ ಬಡಿಗೇರ ನೂತನ ಶಾಲಾ ಸಂಸತ್ತಿನ ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಭಾಗ್ಯಶ್ರೀ ಹೆಳವರ, ಅನನ್ಯಾ ಹಂಗರಗಿ ಪ್ರಾರ್ಥಿಸಿದರು. ಪ್ರೊ.ಸಿ.ಆರ್. ಕೋಲಕಾರ ಸ್ವಾಗತಿಸಿದರು. ಪ್ರೊ.ಶಿವಶಂಕರ ಮುತ್ತಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

# ರಾಷ್ಟ್ರದ ಪ್ರಗತಿಗೆ ವ್ಯಸನಮುಕ್ತ ಸಮಾಜ ಅಗತ್ಯ: ಡಾ.ಚರಂತಿಮಠ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**



ರಾಷ್ಟ್ರದ ಪ್ರಗತಿಗೆ ಆರೋಗ್ಯಕರ ಸಮಾಜದ ಪಾತ್ರ ಅಗತ್ಯವಾಗಿದೆ. ವಿಶೇಷವಾಗಿ ಯುವಜನರನ್ನು ವ್ಯಸನಮುಕ್ತರನ್ನಾಗಿಸುವುದರ ಮೂಲಕ ದೇಶ ಅಭಿವೃದ್ಧಿ ಸಾಧಿಸಲು ಸಾಧ್ಯ. ವ್ಯಸನಮುಕ್ತ ಸಮಾಜದ ನಿರ್ಮಾಣ ಹಾಗೂ ಆ ಮೂಲಕ ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಹೇಳಿದರು.

ನಗರದ ಬಿ.ವಿ.ವಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶನಿವಾರ ವ್ಯಸನಮುಕ್ತ ದಿನ ಆಚರಿಸಲಾಯಿತು. ಲಿಂಗೈಕ್ಯ ಪೂಜ್ಯ ಮಹಾಂತಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪಾರ್ಚಣೆಮಾಡಿ ಮಾತನಾಡಿದ ಡಾ.ವೀರಣ್ಣ ಚರಂತಿಮಠ ಅವರು, ಪೂಜ್ಯ ಮಹಾಂತಸ್ವಾಮಿಗಳ ಜನ್ಮದಿನವನ್ನು ಕರ್ನಾಟಕ ಸರ್ಕಾರ ವ್ಯಸಮುಕ್ತ ದಿನವೆಂದು ಆಚರಿಸುತ್ತಿರುವುದು ಅಭಿನಂದನಾರ್ಹ ನಡೆಯಾಗಿದೆ. ಪೂಜ್ಯರು ಜನರಲ್ಲಿನ ದುಶ್ಚಟಗಳ ನಿರ್ಮೂಲನೆಗಾಗಿ ಕೈಗೊಂಡಿದ್ದ ಮಹಾಂತಜೋಳಿಗೆ ಕಾರ್ಯಕ್ರಮ ಅತ್ಯಂತ ವಿಶಿಷ್ಟವಾಗಿತ್ತು ಎಂದರು.

ಭಾರತ ಯುವಕರಿಂದ ಕೂಡಿದ ಬಲಿಷ್ಠ ರಾಷ್ಟ್ರವಾಗಿದ್ದು ಯುವಜನತೆ ದುಶ್ಚಟಗಳಿಗೆ ಬಲಿಯಾಗದಂತೆ ಒಂದು ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸುವುದು ಅಗತ್ಯವಾಗಿದೆ. ಈ ದಿಶೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ನಶಾಮುಕ್ತ ಭಾರತದ ನಿರ್ಮಾಣಕ್ಕಾಗಿ ಸಂಕಲ್ಪ ಮಾಡಿದ್ದು ಆಗಸ್ಟ್ 2 ರಂದು ರಾಷ್ಟ್ರವನ್ನುದ್ದೇಶಿಸಿ ಮಾತನಾಡಲಿರುವರು ಎಂದು ಹೇಳಿದರು.

ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ), ದುಶ್ಚಟಗಳು ರಾಷ್ಟ್ರದ ಅಭಿವೃದ್ಧಿಗೆ ಮಾರಕವಾಗಿವೆ. ವ್ಯಸನಮುಕ್ತವಾದ ಆರೋಗ್ಯಕರ ಸಮಾಜದಿಂದ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ. ದೇಶದ ಅಭಿವೃದ್ಧಿಗಾಗಿ ದುಶ್ಚಟಗಳು ನಿರ್ಮೂಲನೆಗೊಂಡು ವ್ಯಸನಮುಕ್ತ ಸಮಾಜ ನಿರ್ಮಾಣವಾಗಬೇಕು ಎಂದರು.

ಕಾಲೇಜಿನ ಉಪಪ್ರಾಚಾರ್ಯ ಡಾ.ಸಿ.ಎಸ್.ಹಿರೇಮಠ ಮಾತನಾಡಿ, ವ್ಯಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ಮತ್ತು ರಾಷ್ಟ್ರದ ಪ್ರಗತಿಗಾಗಿ ಯುವಜನತೆಯನ್ನು ದುಶ್ಚಟಗಳಿಂದ ಮುಕ್ತರನ್ನಾಗಿಸುವುದು ಪ್ರಮುಖ ಆದ್ಯತೆಯಾಗಲಿ ಎಂದರು. ಡಾ.ವಿನೋದ ಅಕ್ಕಸಾಲಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಡಾ.ಅಶೋಕ ಡೋರ್ಲೆ, ಡಾ.ಯರನಾಳ, ಡಾ.ವಿಜಯ ಮಹಾಂತೇಶ, ಡಾ.ಸಂಜೀವ ಕೋಳಗಿ, ಡಾ.ನಾರಾಯಣ ಮುತಾಲಿಕ ಮತ್ತಿತರರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜೆಡಿಎಸ್ ಕಚೇರಿಯಲ್ಲಿ ಶ್ರೀಮತಿ ಚನ್ನಮ್ಮ ಅವರಿಗೆ ಶ್ರದ್ಧಾಂಜಲಿ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಶ್ರೀಮತಿ ಚನ್ನಮ್ಮ ದೇವೇಗೌಡರು ಬಡ ಜನರು ಮತ್ತು ದುರ್ಬಲರಲ್ಲಿ ದೇವರನ್ನು ಕಾಣುತ್ತಿದ್ದ ಮಾನವತಾಮೂರ್ತಿ. ಕಷ್ಟಗಳನ್ನು ಹೊತ್ತು ಮನೆಗೆ ಬರುತ್ತಿದ್ದವರಿಗೆ ನೆರವು ನೀಡುವ ಆಸರೆಯಾಗಿದ್ದರು ಎಂದು ಗ್ರೇಟರ್ ಬೆಂಗಳೂರು ಜೆಡಿಎಸ್ ಪಕ್ಷದ ಅಧ್ಯಕ್ಷ ಹಾಗೂ ಮಾಜಿ ಶಾಸಕ ಹೆಚ್.ಎಂ. ರಮೇಶಗೌಡ ಅವರು ಹೇಳಿದ್ದಾರೆ.

ಪಕ್ಷದ ಕಚೇರಿ ಜೆ.ಪಿ. ಭವನದಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ಮಾಜಿ ಪ್ರಧಾನಿಗಳು ಹಾಗೂ ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ. ದೇವೇಗೌಡರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚನ್ನಮ್ಮ ಅವರು ನಮ್ಮೆಲ್ಲರಿಗೂ ಮಾತೃ ಸಮಾನರು ಆಗಿದ್ದರು ಹಾಗೂ ಬಡವರ ಪಾಲಿಗೆ ಸಾಕ್ಷಾತ್ ಅನ್ನಪೂರ್ಣೇಶ್ವರಿ ತಾಯಿಯೇ ಆಗಿದ್ದರು. ಮನೆಗೆ ಯಾರೇ ಹೋದರೂ ಅವರು ಯಾರು, ಏನು, ಎತ್ತ ಎಂದು ಯೋಚಿಸದೇ ಅನ್ನ ನೀಡುತ್ತಿದ್ದರು. ಅವರಲ್ಲಿ ಪ್ರತಿಯೊಬ್ಬರು ತಮ್ಮ ತಾಯಿಯನ್ನು ಕಾಣುತ್ತಿದ್ದರು ಎಂದು ಅವರು ಹೇಳಿದರು.

ಮನೆಯನ್ನೇ ದೇವಾಲಯ ಎಂದು ಭಾವಿಸಿದ್ದ ಅವರು ಪ್ರತಿದಿನವೂ ತಪ್ಪದೇ ತುಳಸಿಕಟ್ಟೆಗೆ ಪೂಜೆ ಮಾಡುತ್ತಿದ್ದರು. ಸಾತ್ವಿಕತೆ, ಧಾರ್ಮಿಕ ಶ್ರದ್ಧೆ ಹಾಗೂ ಮಾತೃವಾತ್ಸಲ್ಯ ಅವರಲ್ಲಿತ್ತು. ನಮ್ಮನ್ನು ಸ್ವಂತ ಮಕ್ಕಳಿಗಿಂತ ಮಿಗಿಲಾಗಿ ನೋಡುತ್ತಿದ್ದರು. ಅಂತಹ ತಾಯಿ ನಿಧನರಾಗಿದ್ದು ನಮಗೆ ಬಹಳ ದುಃಖ ಉಂಟು ಮಾಡಿದೆ ಎಂದು ಅವರು ಹೇಳಿದರು.

ಚನ್ನಮ್ಮ ಅವರು ಎಂದೂ ರಾಜಕೀಯದ ಬಗ್ಗೆ ಮಾತನಾಡುತ್ತಿರಲಿಲ್ಲ. ಸ್ವತಃ ನನಗೆ ಅನುಭವ ಆದಂತೆ, ನಾನು ಅವರ ಮನೆಗೆ ಹೋದರೆ ಎದುರಿಗೆ ಕಂಡ ಕೂಡಲೇ ಅವರು ಕೇಳುತ್ತಿದ್ದ ಒಂದೇ ಮಾತು 'ಊಟ ಮಾಡಪ್ಪ' ಎನ್ನುವುದಾಗಿತ್ತು. ಆ ಸಂದರ್ಭದಲ್ಲಿ ಪ್ರಸಾದವನ್ನು ಅಥವಾ ಹಣ್ಣನ್ನು ಕೊಟ್ಟು ತಲೆ ಮುಟ್ಟಿ ಆಶೀರ್ವಾದ ಮಾಡುತ್ತಿದ್ದರು. ಅಂತಹ ತಾಯಿಯನ್ನು ಕಳೆದುಕೊಂಡಿದ್ದು ನನಗಂತೂ ಬಹಳ ನೋವು ಉಂಟು ಮಾಡಿದೆ. ಅವರಿಲ್ಲ ಎನ್ನುವ ಶೂನ್ಯವನ್ನು ತುಂಬುವುದು ಬಹಳ ಕಷ್ಟ ಎಂದು ರಮೇಶ್ ಗೌಡ ಭಾವುಕರಾದರು.

ಇದೇ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಶ್ರೀಮತಿ ಚನ್ನಮ್ಮ ಅವರ ಭಾವಚಿತ್ರಕ್ಕೆ ನಾಯಕರಲ್ಲರೂ ಪುಷ್ಪವ ನಮನ ಸಲ್ಲಿಸಿದರು. ಪಕ್ಷದ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ, ಮಾಜಿ ಸಚಿವೆ ಲೀಲಾದೇವಿ ಆರ್ ಪ್ರಸಾದ್, ಶಾಸಕರುಗಳಾದ ಟಿ.ಎ. ಶರವಣ, ಟಿ.ಎನ್.ಜವರಾಯಿಗೌಡ, ಮಾಜಿ ಶಾಸಕರಾದ ಕೆ.ಎ.ತಿಪ್ಪೇಸ್ವಾಮಿ, ಗೊಟ್ಟಿಗೆರೆ ಮಂಜುನಾಥ್, ಆರ್.ಪ್ರಕಾಶ್, ಟಿ.ತಿಮ್ಮೇಗೌಡ, ಹೆಚ್.ಸಿ.ಕೃಷ್ಣ, ನಟ–ರಾಜ್ ಗಂಗಾಧರ್, ಶೈಲಾ ಸಂತೋಜಿ ರಾವ್, ಚಂದನ್, ಟಿ.ಆರ್.ತುಳಸಿರಾಮ್, ಎಸ್ ರಮೇಶ, ಎ.ವಿ.ವೇಣುಗೋಪಾಲ್ ಹಾಗೂ ಪಕ್ಷದ ಇನ್ನಿತರ ಮುಖಂಡರು, ಪದಾಧಿಕಾರಿಗಳು, ವಿಧಾನಸಭಾ ಕ್ಷೇತ್ರ ಅಧ್ಯಕ್ಷರು, ವಿವಿಧ ವಿಭಾಗಗಳ ಅಧ್ಯಕ್ಷರು, ಮಹಿಳಾ ವಿಭಾಗದ ಜಿಬಿಎ ಜಿಲ್ಲಾಧ್ಯಕ್ಷರುಗಳು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಖ್ಯಾತ ಹರಿಕಥೆ ವಿದ್ವಾಂಸರಾದ ಶಿವಾರ ಉಮೇಶ್ ಅವರು ತಮ್ಮ ವೃಂದದೊಂದಿಗೆ ಶ್ರೀಮತಿ ಚನ್ನಮ್ಮ ದೇವೇಗೌಡರವರು ನಡೆದು ಬಂದ ಅವರ ಬದುಕಿನ ದಾರಿಯ ಬಗ್ಗೆ ಗೀತೆಗಳ ಮೂಲಕ ನಮನ ಸಲ್ಲಿಸಿದರು.



# ಗೂಂಡಾಗಿರಿಗೆ ಸರ್ಕಾರ ಹೆದರುವುದಿಲ್ಲ: ಸಿಎಂ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬಿಡಿಎ ಅಥವಾ ಯಾವುದೇ ಕಾರ್ಪೊರೇಷನ್ ನಿವೇಶನಗಳಲ್ಲಿ ಮಾಲೀಕರು ಸ್ವಚ್ಛತೆ ಕಾಪಾಡಬೇಕು ಹಾಗೂ ಐದುವರ್ಷಗಳಲ್ಲಿ ಚಿಕ್ಕದಾದ ಮನೆಯನ್ನು ಕಟ್ಟಿಕೊಳ್ಳಬೇಕು. ತಪ್ಪಿದಲ್ಲಿ ದುಪ್ಪಟ್ಟು ತೆರಿಗೆ ಕಟ್ಟಬೇಕು, ಇಲ್ಲದಿದ್ದರೆ ನಿವೇಶನವನ್ನು ಹಿಂತಿರುಗಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅವರು ಇಂದು ಬೆಳಿಗ್ಗೆ ಹೆಬ್ಬಾಳ ಜಂಕ್ಷನ್ ಬಳಿ "ತ್ಯಾಜ್ಯದಿಂದ ಸ್ವಾತಂತ್ರ್ಯ" ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.



**ಬೆಂಗಳೂರು ನಿಮ್ಮ ಆಸ್ತಿ:** ಬೆಂಗಳೂರಿನ ನಾಗರಿಕರಿಗೆ ನಾಗರಿಕ ಜ್ಞಾನವನ್ನು ನೀಡಬೇಕಿದೆ. ನಿವೇಶನ ಖಾಲಿ ಇಟ್ಟುಕೊಂಡರೆ, ಅಲ್ಲಿ ಆಗುವ ಅನಾಹುತಗಳಿಗೆ ಸರ್ಕಾರ ಜವಾಬ್ದಾರರಲ್ಲ. ನಿಮ್ಮ ಆಸ್ತಿಯನ್ನು ನೀವು ರಕ್ಷಿಸಿಕೊಳ್ಳಬೇಕು, ರಾಜ್ಯದ ಆಸ್ತಿಯನ್ನು ನಾವು ಕಾಪಾಡಬೇಕು ಎಂದರು. ಬೆಂಗಳೂರನ್ನು ಸ್ವಚ್ಛ ಮಾಡುವುದು ನಮ್ಮ ಕರ್ತವ್ಯ. ನಿಮ್ಮ ಬೆಂಗಳೂರನ್ನು ಕಾಪಾಡಬೇಕಾಗಿರುವುದು ನಿಮ್ಮ ಕರ್ತವ್ಯ. ಬೆಂಗಳೂರಿನ ಆಸ್ತಿ ಸರ್ಕಾರದ್ದಲ್ಲ; ಬೆಂಗಳೂರು ನಿಮ್ಮ ಆಸ್ತಿ. ನಿಮ್ಮ ಆಸ್ತಿಯನ್ನು ಕಾಪಾಡಬೇಕೆಂದು ಈ ದೊಡ್ಡ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

**ಎಲ್ಲೆಂದರಲ್ಲಿ ತ್ಯಾಜ್ಯ ಸುರಿಯುವ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಪೊಲೀಸರಿಗೆ ಸಿಎಂ ಕಟ್ಟಪ್ಪಣೆ:** ಪ್ರಾರಂಭದಲ್ಲಿ ಕಸ ಸುರಿಯುವವರಿಗೆ ನೋಟೀಸು ಕೊಡುವುದು, ಕ್ಯಾಮೆರಾ ಅಳವಡಿಸುವಂಥ ಕೆಲಸಗಳನ್ನು ಮಾಡಲಾಗಿತ್ತು. 15 ದಿನಗಳ ಕಾಲ ತ್ಯಾಜ್ಯ ಸುರಿಯುವುದು ನಿಯಂತ್ರಣದಲ್ಲಿತ್ತು. ತದನಂತರ ಯಥಾಸ್ಥಿತಿಗೆ ಬರಲಾಗಿದೆ. ಯಾರಾದರೂ ಕಟ್ಟಡದ ತ್ಯಾಜ್ಯವನ್ನು ಗುರುತು ಮಾಡಿರುವ ಸ್ಥಳದಲ್ಲಿ ಹಾಕದಿದ್ದರೆ, ಅಂತ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಪೊಲೀಸರಿಗೆ ಕಟ್ಟಪ್ಪಣೆ ನೀಡಿದರು.

**ಹಸಿರು ಬೆಂಗಳೂರು: ನೂರನೇ ದಿನದಂದು ಐತಿಹಾಸಿಕ ಘೋಷಣೆ:** ತಮ್ಮ ಸರ್ಕಾರದ ನೂರನೇ ದಿನದಂದು ಹಸಿರು ಬೆಂಗಳೂರಿನ ಬಗ್ಗೆ ಐತಿಹಾಸಿಕ ಘೋಷಣೆ ಮಾಡಲಾಗುವುದು ಎಂದರು.

**ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ:** ಬೆಂಗಳೂರಿನ ಸ್ವಚ್ಛತೆಯ ಬಗ್ಗೆ ಪರ, ವಿರೋಧ ಅಭಿಪ್ರಾಯಗಳು, ಟೀಕೆಗಳು ವ್ಯಕ್ತವಾಗಿದೆ. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ ಎಂದರು.

**ಅಧಿಕಾರಿಗಳ ಮೇಲಿನ ಹಲ್ಲೆ; ಸರ್ಕಾರದ ಮೇಲೆ ಮಾಡಿರುವ ಹಲ್ಲೆ:** ಶಿವಾಜಿನಗರದಲ್ಲಿ ಅಧಿಕಾರಿಗಳ ಮೇಲೆ ಕೆಲವರು ಹಲ್ಲೆ ಮಾಡಿದ್ದು , ಅದನ್ನು ನೀವು ಕೇವಲ ಅಧಿಕಾರಿಗಳ ಮೇಲೆ ಮಾಡಿದ್ದೀರಿ ಎಂದು ತಿಳಿದರೆ ಅದು ಭ್ರಮೆ. ಇದು ಸರ್ಕಾರ, ಶಾಸಕರು ಮತ್ತು ಸಚಿವರ ಮೇಲೆ ಮಾಡಿರುವ ಹಲ್ಲೆ. ಗೂಂಡಾಗಿರಿಗೆ ಸರ್ಕಾರ ಹೆದರುವುದಿಲ್ಲ. ಎಲ್ಲಾ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡೆ ಬೆಂಗಳೂರಿನ ಪಾದಚಾರಿ ಮಾರ್ಗಗಳ ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದರು.

ಬೀದಿ ವ್ಯಾಪಾರಿಗಳಿಗೆ ಕೆಲವು ಜಾಗಗಳನ್ನು ನಿಗದಿ ಮಾಡಿ ನೀಡಲಾಗುವುದು. ಪಾದಚಾರಿಗಳಿಗೆ, ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಅನುಕರಣೀಯ ಅಭಿಯಾನ:** ಬೆಂಗಳೂರು ಸ್ವಚ್ಛತಾ ಅಭಿಯಾನವು ಮಾದರಿ ಕಾರ್ಯಕ್ರಮವಾಗಿದ್ದು, ಎಲ್ಲರೂ ಅವರವರ ಕ್ಷೇತ್ರಗಳಲ್ಲಿ ಈ ಅಭಿಯಾನವನ್ನು ಅನುಕರಿಸಬೇಕೆಂದು ಮನವಿ ಮಾಡಿದರು.

**ಬೆಂಗಳೂರಿನ ಸ್ವಚ್ಛತೆ ಕಾಪಾಡಿ ದೇಶಕ್ಕೆ ಸಂದೇಶ ನೀಡಬೇಕು:** ನಿಮ್ಮ ಮನೆ, ನಿಮ್ಮ ಬೆಂಗಳೂರನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಇಡೀ ದೇಶ ಬೆಂಗಳೂರಿನತ್ತ ಗಮನಹರಿಸಿದೆ. ಬೆಂಗಳೂರಿನ ಸ್ವಚ್ಛತೆ ಕಾಪಾಡಿ ಇಡೀ ದೇಶಕ್ಕೆ ಸಂದೇಶ ಕೊಡಬೇಕಾಗಿರುವುದು ನಿಮ್ಮ ನಮ್ಮೆಲ್ಲರ ಕರ್ತವ್ಯ.

**ಮುಂದಿನ ದಿನಗಳಲ್ಲಿ ಸ್ವಚ್ಛತೆಗೆ ಬೃಹತ್ ರೂಪ:** ರಸ್ತೆಯ ಬದಿಯಲ್ಲಿ ಕಸ ಸುರಿಯುವುದು ಬೆಂಗಳೂರಿನಲ್ಲಿ ಮಾತ್ರವಲ್ಲ ದೆಹಲಿ ಮುಂಬೈ ಸೇರಿದಂತೆ ಬಹುತೇಕ ಎಲ್ಲಾ ನಗರಗಳಲ್ಲಿರುವ ಸಮಸ್ಯೆ. ಸ್ವಚ್ಛತೆಯ ಬಗ್ಗೆ ಬಹಳಷ್ಟು ಸಮಸ್ಯೆಗಳಿದ್ದು , ಮುಂದಿನ ದಿನಗಳಲ್ಲಿ ಇದಕ್ಕೆ ದೊಡ್ಡ ರೂಪವನ್ನು ಕೊಡಲು ಸರ್ಕಾರ ಉದ್ದೇಶಿಸಿದ್ದು, ಇದಕ್ಕೆ ಎಲ್ಲರ ಸಹಕಾರವನ್ನು ಬಯಸುತ್ತೇನೆ ಎಂದರು.

## ಪಾರದರ್ಶಕತೆಯೇ ನಮ್ಮ ಬದ್ಧತೆ



**ಬೆಂಗಳೂರು:** ರಾಜ್ಯದಲ್ಲಿ ನಡೆಯಲಿರುವ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿ ಪರೀಕ್ಷೆಯನ್ನು ಸಂಪೂರ್ಣ ಪಾರದರ್ಶಕ, ನ್ಯಾಯಸಮ್ಮತ ಹಾಗೂ ಸುಗಮವಾಗಿ ನಡೆಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಭ್ಯರ್ಥಿಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷಾ ಪ್ರಕ್ರಿಯೆಯನ್ನು ಯಾವುದೇ ಗೊಂದಲ ಅಥವಾ ಅಕ್ರಮಗಳಿಗೆ ಅವಕಾಶವಿಲ್ಲದಂತೆ ನಡೆಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಪರೀಕ್ಷಾ ಕೇಂದ್ರಗಳಲ್ಲಿ ಅನುಸರಿಸಬೇಕಾದ ವಸ್ತ್ರ ಸಂಹಿತೆ ಹಾಗೂ ತರಬಹುದಾದ ಮತ್ತು ನಿಷೇಧಿತ ವಸ್ತುಗಳ ಕುರಿತು ಈಗಾಗಲೇ ಅಭ್ಯರ್ಥಿಗಳ ಹಾಲ್ ಟಿಕೆಟ್‌ನಲ್ಲಿ ಸ್ಪಷ್ಟ ಮಾಹಿತಿಯನ್ನು ನೀಡಲಾಗಿದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಈ ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಪರೀಕ್ಷಾ ಪ್ರಕ್ರಿಯೆಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಗೃಹ ಸಚಿವರು ಸ್ಪಷ್ಟಪಡಿಸಿದಂತೆ, ಯಾವುದೇ ಧಾರ್ಮಿಕ ವಸ್ತ್ರಕ್ಕೆ ಸರ್ಕಾರ ನಿರ್ಬಂಧ ವಿಧಿಸಿಲ್ಲ. ಧಾರ್ಮಿಕ ಉಡುಪು ಅಥವಾ ಧಾರ್ಮಿಕ ಆಭರಣಗಳನ್ನು ಧರಿಸಿ ಪರೀಕ್ಷೆ ಬರೆಯಲು ಬಯಸುವ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಅಂತಹ ಅಭ್ಯರ್ಥಿಗಳು ಪರೀಕ್ಷೆ ಆರಂಭಕ್ಕೂ 2 ಗಂಟೆ 30 ನಿಮಿಷಗಳ ಮೊದಲು ಪರೀಕ್ಷಾ ಕೇಂದ್ರಕ್ಕೆ ಆಗಮಿಸಿ ಅಗತ್ಯ ಭದ್ರತಾ ತಪಾಸಣೆಗೆ ಒಳಪಟ್ಟ ಬಳಿಕ ಪರೀಕ್ಷೆ ಬರೆಯಬಹುದು ಎಂದು ತಿಳಿಸಿದರು. ಅಭ್ಯರ್ಥಿಗಳು ಮೊಬೈಲ್ ಫೋನ್, ಸ್ಮಾರ್ಟ್ ವಾಚ್, ಎಲೆಕ್ಟ್ರಾನಿಕ್ ಸಾಧನಗಳು, ಕ್ಯಾಲ್ಕುಲೇಟರ್, ಪೆನ್ ಡ್ರೈವ್, ಪುಸ್ತಕಗಳು, ಬ್ಯಾಗ್ ಸೇರಿದಂತೆ ನಿಷೇಧಿತ ವಸ್ತುಗಳನ್ನು ಪರೀಕ್ಷಾ ಕೇಂದ್ರಕ್ಕೆ ತರಬಾರದು. ಪರೀಕ್ಷೆಯ ಪಾವಿತ್ರ್ಯ ಹಾಗೂ ಪಾರದರ್ಶಕತೆಯನ್ನು ಕಾಪಾಡುವ ಉದ್ದೇಶದಿಂದ ಈ ಕ್ರಮಗಳನ್ನು ಅನುಸರಿಸಲಾಗುತ್ತಿದೆ ಎಂದು ಅವರು ಹೇಳಿದರು. ಅದೇ ವೇಳೆ ಜನಿವಾರ, ಶಿವದಾರ, ತಾಳಿ, ರುದ್ರಾಕ್ಷಿ, ಮಂಗಳಸೂತ್ರ, ಬಳೆಗಳು, ಉಂಗುರ, ಕುಂಕುಮ ಸೇರಿದಂತೆ ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಆಭರಣಗಳು ಮತ್ತು ಧಾರ್ಮಿಕ ಚಿಹ್ನೆಗಳನ್ನು ಧರಿಸಲು ಯಾವುದೇ ನಿರ್ಬಂಧವಿಲ್ಲ ಎಂದು ಸಚಿವರು ಪುನರುಚ್ಚರಿಸಿದರು.

ಸಾಮಾಜಿಕ ಜಾಲತಾಣಗಳು ಅಥವಾ ಇತರೆ ಮೂಲಗಳಲ್ಲಿ ಹರಿದಾಡುವ ಸುಳ್ಳು ಸುದ್ದಿ ಹಾಗೂ ವದಂತಿಗಳಿಗೆ ಅಭ್ಯರ್ಥಿಗಳು ಕಿವಿಗೊಡಬಾರದು. ಸರ್ಕಾರ ಮತ್ತು ನೇಮಕಾತಿ ಪ್ರಾಧಿಕಾರ ಹೊರಡಿಸಿರುವ ಅಧಿಕೃತ ಮಾಹಿತಿಯನ್ನಷ್ಟೇ ನಂಬುವಂತೆ ಮನವಿ ಮಾಡಿದ ಸಚಿವರು, ಎಲ್ಲ ಉದ್ಯೋಗಾಕಾಂಕ್ಷಿಗಳು ಯಾವುದೇ ಗೊಂದಲಕ್ಕೆ ಒಳಗಾಗದೆ ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿ ಯಶಸ್ಸು ಸಾಧಿಸಲಿ ಎಂದು ಶುಭ ಹಾರೈಸಿದರು.

## ಅದ್ವೈತ್ 8.0 ಪ್ರದರ್ಶನ ವಾಪಾಸ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಭಾರತದ ಪ್ರಮುಖ ಮತ್ತು ಪ್ರಸಿದ್ಧ ಸಿದ್ಧ ಉಡುಪು ತಯಾರಕರು ಹಾಗೂ ವ್ಯಾಪಾರಿಗಳ ಒಕ್ಕೂಟಗಳಲ್ಲಿ ಒಂದಾದ ಅಪೇರಲ್ ಮ್ಯಾನುಫ್ಯಾಕ್ಚರರ್ಸ್ ಆಫ್ ಇಂಡಿಯಾ ತನ್ನ 'ಅದ್ವೈತ್' ಪ್ರದರ್ಶನದ ಮುಂದಿನ ಆವೃತ್ತಿಯೊಂದಿಗೆ ಮರಳಿ ಬಂದಿದೆ.

ಅದ್ವೈತ್ 8.0 ಕಾರ್ಯಕ್ರಮವು ಆಗಸ್ಟ್ 5–7, 2026ರವರೆಗೆ ಚೆನ್ನೈನ ಆರ್.ಕೆ. ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಲಿದೆ. ಈ 3 ದಿನಗಳ ಪ್ರದರ್ಶನದಲ್ಲಿ ಮುಂಬೈ, ಇಂದೋರ್ ಮತ್ತು ಸೂರತ್ ನಂತಹ ಪ್ರಮುಖ ನಗರಗಳು ಸೇರಿದಂತೆ ಭಾರತದಾದ್ಯಂತ 220ಕ್ಕೂ ಹೆಚ್ಚು ಬ್ರಾಂಡ್ ಗಳು ಭಾಗವಹಿಸಲಿವೆ. 'ಅದ್ವೈತ್' ಪ್ರದರ್ಶನವು ಒಂದು ಉತ್ತಮ ವೇದಿಕೆಯಾಗಿ ಮುಂದುವರಿದಿದ್ದು, ಇಲ್ಲಿ ಭಾರತದಾದ್ಯಂತದ ಬ್ರಾಂಡ್ ಗಳಿಗೆ ತಮ್ಮ ಸಿದ್ಧ ಉಡುಪು ಸಂಗ್ರಹಗಳನ್ನು ಪ್ರದರ್ಶಿಸಲು ಸೂಕ್ತ ಮಾರುಕಟ್ಟೆ ಅವಕಾಶಗಳು ಸಿಗುತ್ತವೆ. ಹಾಗೆಯೇ, ಖರೀದಿದಾರರಿಗೆ ಗುಣಮಟ್ಟದ ಮತ್ತು ಪರಿಶೀಲಿಸಲ್ಪಟ್ಟ ತಯಾರಕರಿಂದ ನೇರವಾಗಿ ವಸ್ತುಗಳನ್ನು ಖರೀದಿಸುವ ಅವಕಾಶ ದೊರೆಯುತ್ತದೆ. ಅದ್ವೈತ್ 8.0 ಕುರಿತು ಅಪೇರೆಲ್ ಮ್ಯಾನುಫ್ಯಾಕ್ಚರರ್ಸ್ ಆಫ್ ಇಂಡಿಯಾ ಸಂಸ್ಥಾಪಕ ಧರ್ಮೇಶ್ ನಂದು, "ಅದ್ವೈತ್ ಮುಂದಿನ ಆವೃತ್ತಿ ಪ್ರಕಟಿಸಲು ನಾವು ಬಹಳ ಉತ್ಸುಕರಾಗಿದ್ದೇವೆ. ಹಬ್ಬದ ಋತು ಹತ್ತಿರವಾಗುತ್ತಿದ್ದಂತೆ ಇದು ಖರೀದಿದಾರರಿಗೆ ಸಾಕಷ್ಟು ಹಬ್ಬದ ಸಂಗ್ರಹಗಳ ಮತ್ತು ಹೊಸ ಟ್ರೆಂಡ್ ಗಳ ಪ್ರದರ್ಶನಕ್ಕೆ ಸೂಕ್ತ ಸಮಯವಾಗಿದೆ.

## ಮೃತನ ಕುಟುಂಬಕ್ಕೆ 51 ಸಾವಿರ ನೆರವು

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ



ಇತ್ತೀಚೆಗೆ ದುಬಲಗುಂಡಿ ಗ್ರಾಮದಲ್ಲಿ ಹೃದಯಾಘಾತದಿಂದ ತುಕಾರಾಮ ನಿಂಬೂರೆ ಮೃತಪಟ್ಟ ಹಿನ್ನಲೆ ಹುಮನಾಬಾದ್ ನಗರದ ಮಾಜಿ ಸಚಿವರ ಗೃಹ ಕಚೇರಿಯಲ್ಲಿ ಶನಿವಾರ ಬಸವರಾಜ ಪಾಟೀಲ್ ಫೌಂಡೇಶನ್ ವತಿಯಿಂದ ಮೃತ ವ್ಯಕ್ತಿಯ ಕುಟುಂಬಕ್ಕೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಹಾಗೂ ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ 51 ಸಾವಿರ ಆರ್ಥಿಕ ನೆರವು ನೀಡಿದರು.

ಬಳಿಕ ಮಾಜಿ ಸಚಿವ ರಾಜಶೇಖರ ಪಾಟೀಲ್ ಮಾತನಾಡಿ, ದುಬಲಗುಂಡಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಂಬ್ಯೂಲೇನ್ಸ್ ಚಾಲಕನ್ನು ನೇಮಿಸಲಾಗಿದೆ. ರೋಗಿಗಳ ಹಿತದೃಷ್ಟಿಯಿಂದ ಆರೋಗ್ಯ ಕೇಂದ್ರಕ್ಕೆ ಸರಕಾರದಿಂದ ಸೌಲಭ್ಯ ಕಲ್ಪಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ. ಮಾಜಿ ಅಧ್ಯಕ್ಷ ನಾಗರಾಜ ಭೋಜಗುಂಡಿ, ಗ್ರಾಪಂ. ಮಾಜಿ ಅಧ್ಯಕ್ಷ ಪ್ರದೀಪ ಪಸಾರ್ಗಿ, ಗ್ರಾಪಂ. ಮಾಜಿ ಅಧ್ಯಕ್ಷ ಅಶೋಕ ಚಳಕಾಪೂರೆ, ಗ್ರಾಪಂ ಮಾಜಿ ಸದಸ್ಯ ಪ್ರಭು ನೇಳಗಿ, ಗ್ರಾಪಂ. ಸದಸ್ಯ ದತ್ತು ಢಗೆ, ಪ್ರಮುಖರಾದ ತಾನಾಜಿ ಪಾಟೀಲ್, ವಿಠ್ಠಲ ಡಾವರಗಾಂವ, ರಾಹುಲ್ ಉದ್ದಾ, ಕಿರಣ ಹಮೀಲಪೂರಕರ್, ರಾಜಕುಮಾರ ಹಳ್ಳಿಖೇಡ, ಅನಿಲಕುಮಾರ ಸಿಂಧೆ ಸೇರಿ ಅನೇಕರಿದ್ದರು.

## ಎಸ್‌ಐಆರ್ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆ ಬಲಪಡಿಸಲು ಸಾಧ್ಯ

• ಮಲ್ಲಮ್ಮ ನುಡಿ ವಾರ್ತೆ ಮೈಸೂರು




ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಸುಧಾರಣಾ ಪ್ರಕ್ರಿಯೆಗೆ ವಿರೋಧ ವ್ಯಕ್ತಪಡಿಸುತ್ತಿವೆ ಎಂದು ಮಾಜಿ ಎಂಎಲ್‌ಸಿ ಹಾಗೂ ತಮಿಳುನಾಡು ಮತ್ತು ಕರ್ನಾಟಕದ ಬಿಜೆಪಿ ರಾಷ್ಟ್ರೀಯ ಸಹ–ಪ್ರಭಾರಿ ಡಾ. ಪೊಂಗುಲೇಟಿ ಸುಧಾಕರ ರೆಡ್ಡಿ ಅವರು ಆಕ್ಷೇಪಿಸಿದ್ದಾರೆ.

ಬಿಜೆಪಿ ಮೈಸೂರು ಜಿಲ್ಲಾ ಕಚೇರಿಯಲ್ಲಿ ಇಂದು ನಡೆದ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪಾರದರ್ಶಕ ಮತ್ತು ನಿಖರವಾದ ಮತದಾರರ ಪಟ್ಟಿಯ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ಬಲಪಡಿಸಲು ಸಾಧ್ಯ ಎಂದು ಅವರು ತಿಳಿಸಿದರು.

ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಜನವಿರೋಧಿ ಕಾರ್ಯವಿಧಾನವನ್ನು ಟೀಕಿಸಿದ ಅವರು, ಪ್ರಮುಖ ಸುಧಾರಣೆಗಳಿಗೆ ಅವರು ಪದೇ ಪದೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅಲ್ಲದೇ ಪ್ರಶ್ನೆಪತ್ರಿಕೆ ಸೋರಿಕೆ ವಿರೋಧಿ ಮಸೂದೆಯಂತಹ ಶಾಸನವನ್ನು ಬೆಂಬಲಿಸಲು ಅವರು ನಿರಾಕರಿಸುತ್ತಿದ್ದಾರೆ. ಇದು ಸರಿಯಲ್ಲ ಎಂದು ಟೀಕಿಸಿದರು. ರಾಷ್ಟ್ರದ ಯುವಜನರ ಹಿತಾಸಕ್ತಿಗಳನ್ನು ಕಾಪಾಡುವ ಮತ್ತು ಆಡಳಿತವನ್ನು ಬಲಪಡಿಸುವ ಬದ್ಧತೆಯ ಕೊರತೆಯನ್ನು ಇದು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ಪರಿಶೀಲನೆಯ ಸಮಯದಲ್ಲಿ ಡಾ. ಸುಧಾಕರ ರೆಡ್ಡಿ ಅವರು, ಜಿಲ್ಲೆಯಾದ್ಯಂತ ಆಗಿರುವ ಪ್ರಗತಿಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ಪಕ್ಷದ ಕಾರ್ಯಕರ್ತರು ಮತ್ತು ಚುನಾವಣಾ ಸ್ವಯಂಸೇವಕರ ಸಮರ್ಪಿತ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು. ಚುನಾವಣಾ ಆಯೋಗದ ಮಾರ್ಗಸೂಚಿಗಳಿಗೆ ಅನುಸಾರವಾಗಿ ಪ್ರತಿಯೊಬ್ಬ ಅರ್ಹ ನಾಗರಿಕನು ಮತದಾರರ ಪಟ್ಟಿಯಲ್ಲಿ ದಾಖಲಾಗುವುದನ್ನು ಖಚಿತಪಡಿಸಿಕೊಳ್ಳಲು ಬಿಜೆಪಿ ಬೂತ್ ಮಟ್ಟದಲ್ಲಿ ಸಂಪೂರ್ಣ ಬೆಂಬಲವನ್ನು ನೀಡುತ್ತದೆ ಎಂದು ಹೇಳಿದರು.

ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಅರ್ಹ ಮತದಾರರಿಗೆ ನೆರವಾಗಲು ಸೂಚಿಸಿದರು. ಕಾರ್ಯಕರ್ತರು ತಳಮಟ್ಟದಲ್ಲಿ ಸಮರ್ಪಣಾ ಭಾವದಿಂದ ಕೆಲಸ ಮಾಡುವಂತೆ ಸಲಹೆ ನೀಡಿದರು. ಅರ್ಹ ಮತದಾರರಿಗೆ ಸಹಾಯ ಮಾಡಲು ಅವರು ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರಿಗೆ ಕರೆ ನೀಡಿದರು.

ಸಭೆಯಲ್ಲಿ ಸಂಸತ್ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ಮೈಸೂರು ನಗರ ಜಿಲ್ಲಾಧ್ಯಕ್ಷ ನಾಗೇಂದ್ರ, ಬಿಎಲ್‌ಎ–1ಗಳು, ಬಿಎಲ್‌ಎ–2ಗಳು, ವಿಧಾನಸಭಾ ಉಸ್ತುವಾರಿಗಳು ಮತ್ತು ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.

## ರಸ್ತೆ ಸಂಪೂರ್ಣ ಹಾನಿ: ಪ್ರಯಾಣಿಕರ ಪರದಾಟ, ರಸ್ತೆ ದುರಸ್ತಿಗೆ ಆಕ್ರೋಶ..!



**ಕಮಲನಗರ:** ತಾಲೂಕಿನ ರಾಂಪುರ ಗ್ರಾಮದಿಂದ ತೋರಣಾ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯು ಸಂಪೂರ್ಣವಾಗಿ ಗುಂಡಿಮಯವಾಗಿದ್ದು, ಸಂಚಾರ ಮಾಡಲು ಸಾರ್ವಜನಿಕರು ಹಾಗೂ ವಾಹನ ಸವಾರರು ತೀವ್ರ ಸಾಹಸ ಪಡುವಂತಾಗಿದೆ.

ಇತ್ತೀಚೆಗೆ ಬಿದ್ದ ಮಳೆಯಿಂದಾಗಿ ರಸ್ತೆಯುದ್ದಕ್ಕೂ ಬೃಹತ್ ಗಾತ್ರದ ಗುಂಡಿಗಳು ಬಿದ್ದು ನೀರು ನಿಂತುಕೊಂಡಿದೆ. ಇದರಿಂದಾಗಿ ರಸ್ತೆಯಲ್ಲಿ ಗುಂಡಿಯಿದೆಯೋ ಅಥವಾ ಗುಂಡಿಯಲ್ಲೇ ರಸ್ತೆಯಿದೆಯೋ ತಿಳಿಯದಂತಾಗಿದೆ. ದ್ವಿಚಕ್ರ ವಾಹನ ಸವಾರರು, ಶಾಲಾ ಮಕ್ಕಳು ಮತ್ತು ಹಿರಿಯ ನಾಗರಿಕರು ಪ್ರತಿದಿನ ಜೀವ ಕೈಯಲ್ಲಿ ಹಿಡಿದು ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆ ಹಾಗೂ ಮಳೆಯ ಸಮಯದಲ್ಲಿ ಈ ರಸ್ತೆಯಲ್ಲಿ ಸಂಚರಿಸುವುದು ಅಪಾಯವನ್ನು ಆಹ್ವಾನಿಸಿದಂತಾಗುತ್ತಿದೆ.

ಗ್ರಾಮಸ್ಥರ ಆಕ್ರೋಶ: "ಈ ರಸ್ತೆಯ ದುರಸ್ತಿ ಕುರಿತು ಹಲವು ಬಾರಿ ಮನವಿ ಮಾಡಿದರೂ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕಣ್ಣಿದ್ದು ಕುರುಡರಂತೆ ವರ್ತಿಸುತ್ತಿದ್ದಾರೆ. ನಿತ್ಯ ನೂರಾರು ವಾಹನಗಳು ಸಂಚರಿಸುವ ಈ ಮಾರ್ಗ ಸಂಪೂರ್ಣವಾಗಿ ಹಾಳಾಗಿದ್ದರೂ ದುರಸ್ತಿಗೆ ಯಾವುದೇ ಕ್ರಮ ಕೈಗೊಂಡಿಲ್ಲ" ಎಂದು ಗ್ರಾಮಸ್ಥರು ಮತ್ತು ಪ್ರಯಾಣಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಕ್ಷಣವೇ ದುರಸ್ತಿಗೆ ಆಗ್ರಹ: ಇನ್ನಾದರೂ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ ಹಾಗೂ ತಾಲೂಕು ಆಡಳಿತ ತಕ್ಷಣವೇ ಎಚ್ಚೆತ್ತುಕೊಂಡು ಈ ರಸ್ತೆಯ ಗುಂಡಿಗಳನ್ನು ಮುಚ್ಚಿ, ಸುಸಜ್ಜಿತ ರಸ್ತೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಕೈಗೊಳ್ಳಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಸಿದ್ದಾರೆ.

## ಬೋಗಸ್ ಹಾಜರಿಗೆ ಮುಕ್ತಿ: ಸೌಲಭ್ಯಗಳ ದುರುಪಯೋಗ ತಡೆಗೆ ಅಸ್ತ್ರ



ಭೋಗ–ಐಭೋಗ

● ವೀರಣ್ಣ ಕಲಕೇರಿ

ಕೆಂಭಾವಿ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಡಳಿತದಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಹಾಗೂ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ನಿಯಮಿತ ಹಾಜರಾತಿಯನ್ನು ಖಾತರಿಪಡಿಸಲು ಶಿಕ್ಷಣ ಇಲಾಖೆಯು ಪ್ರಸಕ್ತ 2026–27 ಶೈಕ್ಷಣಿಕ ಸಾಲಿನಿಂದ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಮುಖ ಚಹರೆ ಗುರುತಿಸುವ ಡಿಜಿಟಲ್ ಹಾಜರಾತಿ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

ಅಲ್ಲದೇ ಸರ್ಕಾರಿ ಶಾಲೆಗಳ ಶಿಕ್ಷಕರು ಮತ್ತು ಸಿಬ್ಬಂದಿಯ ಹಾಜರಾತಿಯನ್ನು ನಿರ್ವಹಿಸಲು ಕಾಮ್ಸ್ (KAAMS) ಆ್ಯಪ್ ಬಳಸಲಾಗುತ್ತಿದ್ದು, ಇದು ನೌಕರರ ಶಿಸ್ತಿಗೆ ಸೂಕ್ತ ಅಸ್ತ್ರವಾಗಿದೆ. ಈ ಆ್ಯಪ್ ಜಾರಿಯಿಂದಾಗಿ ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗುವುದು ಕಡ್ಡಾಯವಾಗಿದೆ. ಹಿಂದೆ ಕರ್ತವ್ಯಕ್ಕೆ ತಡವಾಗಿ ಆಗಮಿಸುತ್ತಿದ್ದ ಅಥವಾ ಚಕ್ಕರ್ ಹಾಕುತ್ತಿದ್ದ ಧೋರಣೆಗೆ ಇದು ಪೂರ್ಣಪ್ರಮಾಣದ ಕಡಿವಾಣ ಹಾಕಿದೆ ಎನ್ನಬಹುದು. 'ಎಐ' ತಂತ್ರಜ್ಞಾನದ ಆಧಾರದ ಮೇಲೆ ಹಾಜರಾತಿ ದಾಖಲಾಗುವುದರಿಂದ ಜವಾಬ್ದಾರಿ ಮತ್ತು ಪಾರದರ್ಶಕತೆ ಹೆಚ್ಚಾಗಿದ್ದು, ಇದು ಸಿಬ್ಬಂದಿಯಲ್ಲಿ ಕರ್ತವ್ಯಪ್ರಜ್ಞೆ ಮೂಡಿಸಿದಂತಾಗಿದೆ. ಮತ್ತೊಂದೆಡೆ, 'ನಿರಂತರ' ಆ್ಯಪ್ ಬಳಕೆ ವಿದ್ಯಾರ್ಥಿಗಳ ಹಾಜರಾತಿಯಲ್ಲಿ ಬಹು ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿದೆ.

ವಿದ್ಯಾರ್ಥಿಗಳ ಹಾಜರಾತಿಗಾಗಿ ಜಾರಿಗೆ ತಂದಿರುವ ಈ 'ನಿರಂತರ' ಆ್ಯಪ್, ಶಿಕ್ಷಣ ವ್ಯವಸ್ಥೆಯ ಬಹುದೊಡ್ಡ ಲೋಪದೋಷಗಳನ್ನು ಸರಿಪಡಿಸಿದೆ. ಬೆಳಿಗ್ಗೆ ಮತ್ತು ಮಧ್ಯಾಹ್ನ ಹೀಗೆ ದಿನಕ್ಕೆ ಎರಡು ಬಾರಿ ಮುಖ ಚಹರೆ ಗುರುತಿಸುವ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳ ಹಾಜರಾತಿಯನ್ನು ಪಡೆಯಲಾಗುತ್ತಿದೆ.

**ಬೋಗಸ್ ಹಾಜರಾತಿಗೆ ಮುಕ್ತಿ; ಬೊಕ್ಕಸಕ್ಕೆ ಆಗುತ್ತಿದ್ದ ನಷ್ಟಕ್ಕೆ ತಡೆ:** ಈ ಹಿಂದೆ ಮಗು ಶಾಲೆಗೆ ಬರದೇ ಇದ್ದರೂ ರಿಜಿಸ್ಟರ್‌ನಲ್ಲಿ ಹಾಜರಿ ಹಾಕಿ ಸರ್ಕಾರದ ಸೌಲಭ್ಯಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದ 'ಬೋಗಸ್ ಹಾಜರಿ' ಪದ್ಧತಿಗೆ ಕತ್ತರಿ ಬಿದ್ದಂತಾಗಿದೆ. ಸರ್ಕಾರಿ ಶಾಲೆಗಳಲ್ಲಿ ಹೆಸರನ್ನು ಮಾತ್ರ ದಾಖಲಿಸಿ, ದಿನನಿತ್ಯ ಖಾಸಗಿ ಕೋಚಿಂಗ್ ಸೆಂಟರ್‌ಗಳಿಗೆ ಹೋಗುತ್ತಿದ್ದ ವಿದ್ಯಾರ್ಥಿಗಳ ನೈಜ ಸ್ಥಿತಿ ಈ ಆ್ಯಪ್ ಮೂಲಕ ಬಯಲಾಗಿದ್ದು, ಇದರಿಂದ ಖಾಸಗಿ ಸಂಸ್ಥೆಗಳ ಧಂದೆಗೆ ತಡೆಯೊಡ್ಡಿದಂತಾಗಿದೆ.

ಬಿಸಿಯೂಟ, ಕ್ಷೀರಭಾಗ್ಯ ಯೋಜನೆಯ ಆಹಾರ ಧಾನ್ಯ, ಹಾಲಿನ ಪುಡಿ ಹಾಗೂ ಉಚಿತ ಸಮವಸ್ತ್ರ, ಶೂ–ಸಾಕ್ಸ್ ಮತ್ತು ಪಠ್ಯಪುಸ್ತಕಗಳನ್ನು ಶಾಲೆಗೆ ನೈಜವಾಗಿ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿತರಿಸಲಾಗುತ್ತಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿದ್ದ ಹಣದ ದುರುಪಯೋಗ ಮತ್ತು ಪೋಲಾಗುವಿಕೆಗೆ ಸಂಪೂರ್ಣ ತಡೆ ಬಿದ್ದಿಂತಾಗಿದೆ. ಶಾಲಾ ಮಟ್ಟದಿಂದ ಹಿಡಿದು ರಾಜ್ಯ ಮಟ್ಟದ ಅಧಿಕಾರಿಗಳವರೆಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಹಾಜರಾತಿಯನ್ನು 'ಒಂದೇ ಕ್ಲಿಕ್'ನಲ್ಲಿ ಸುಲಭವಾಗಿ ಮೇಲ್ವಿಚಾರಣೆ ಮಾಡಲು ಸಾಧ್ಯವಾಗುತ್ತಿದೆ. ಇದು ಮಕ್ಕಳು ಶಾಲೆಗೆ ಕ್ರಮಬದ್ಧವಾಗಿ ಹಾಜರಾಗಲು ಮತ್ತು ಅವರ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿದೆ ಎನ್ನಬಹುದು.

ಒಟ್ಟಿನಲ್ಲಿ, 'ಕಾಮ್ಸ್' (KAAMS) ಮತ್ತು 'ನಿರಂತರ' ಆ್ಯಪ್‌ಗಳ ಜಾರಿಯಿಂದಾಗಿ ಸರ್ಕಾರಿ ಶಿಕ್ಷಣ ವ್ಯವಸ್ಥೆಯಲ್ಲಿ ಜವಾಬ್ದಾರಿ, ಪಾರದರ್ಶಕತೆ ಮತ್ತು ತಂತ್ರಜ್ಞಾನದ ಸದುಪಯೋಗ ಸಾಧ್ಯವಾಗಿದೆ. ಬಡ ಮತ್ತು ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಮಾಡುವಲ್ಲಿ ಈ ಡಿಜಿಟಲ್ ವ್ಯವಸ್ಥೆ ಪ್ರಮುಖ ಪಾತ್ರವಹಿಸುತ್ತಿದೆ ಎನ್ನಬಹುದು.

### ತಾಂತ್ರಿಕ ದೋಷ; ಪರಿಹಾರಕ್ಕೆ ಸಹಾಯವಾಣಿ

**ಗ್ರಾಮೀಣ ಭಾಗಗಳಲ್ಲಿ ನೆಟ್‌ವರ್ಕ್ ಕೊರತೆಯಿಂದಾಗಿ ಲಾಗಿನ್ ಆಗದಿರುವುದು, ಒಟಿಪಿ (OTP) ಬಾರದಿರುವುದು, ಬೆಳಕಿನ ಅಭಾವ ಅಥವಾ ಕ್ಯಾಮೆರಾ ಸಮಸ್ಯೆಯಿಂದ ಫೇಸ್ ಸ್ಕ್ಯಾನ್ ಆಗದಿರುವುದು, ಅಪ್ಲಿಕೇಶನ್ ನಿಧಾನಗತಿಯಲ್ಲಿ ಕಾರ್ಯನಿರ್ವಹಿಸುವುದು ಮತ್ತು 'ಯರಾರ್' ಸಂದೇಶ ಬರುವುದು ಹಾಗೂ ಹಾಜರಾತಿ ಡೇಟಾ ಸೇವ್ ಆಗದೆ ವರದಿ ಸಿಗದಿರುವಂತಹ ಹಲವು ತಾಂತ್ರಿಕ ತೊಡಕುಗಳು ಎದುರಾಗುತ್ತಿವೆ ಎಂಬ ಕೂಗು ಕೂಡ ಇರುವುದು. ಈ ಎಲ್ಲಾ ತಾಂತ್ರಿಕ ದೋಷಗಳನ್ನು ಪರಿಹರಿಸಲು ಶಿಕ್ಷಣ ಇಲಾಖೆಯು ವಿಶೇಷ ಸಹಾಯವಾಣಿ ವ್ಯವಸ್ಥೆಯನ್ನು ಕಲ್ಪಿಸಿದ್ದು, ಆ್ಯಪ್‌ಗಳ ಪರಿಣಾಮಕಾರಿ ಬಳಕೆಯ ಕುರಿತು ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ತರಬೇತಿಯನ್ನೂ ನೀಡಲಾಗುತ್ತಿದೆ.**

Printed, Published and Owned by: Ramesh Reddy and Printed at Kalyani Printers, Ground Floor, Flat No 12/1, 1st Cross Road Mysore Road Old Tollgate, Near By Gopalan Mall Tollgate Mysore Road, Old Guddadahalli, Bengaluru, Karnataka-560026. Published at No25, 4th Main, Behind GK Naidu SCHL, Ananthapura Yelahanka Newtown, Bangalore North, PO: Yalahanka, Bengaluru, Karnataka-560064. Editor: Ramesh Reddy, Ph. No: +91 9449732000

PRGI NO.
(RNI NO: KNKAN/26/A5871)